ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

'ಕನ್ನಡ ಹಸ್ತಪ್ರತಿಗಳಲ್ಲಿ ಪತ್ರಸಾಹಿತ್ಯ' – ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ಕೆ. ಬಸವರಾಜಪ್ಪ
ನೋಂದಣಿ ಸಂಖ್ಯೆ BMSBKS-00307

ಮಾರ್ಗದರ್ಶಕರು
ಡಾ.ನಾ.ಗೀತಾಚಾರ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೦೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

'ಕನ್ನಡ ಹಸ್ತಪ್ರತಿಗಳಲ್ಲಿ ಪತ್ರಸಾಹಿತ್ಯ' – ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ಕೆ. ಬಸವರಾಜಪ್ಪ
ನೋಂದಣಿ ಸಂಖ್ಯೆ BMSBKS-00307

ಮಾರ್ಗದರ್ಶಕರು
ಡಾ.ನಾ.ಗೀತಾಚಾರ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೦೯

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮-೨೦೦೯ನೇ ಸಾಲಿನ ಎಂ.ಫಿಲ್ ಪದವಿಗಾಗಿ **'ಕನ್ನಡ ಹಸ್ತಪ್ರತಿಗಳಲ್ಲಿ ಪತ್ರಸಾಹಿತ್ಯ' - ಒಂದು ಅಧ್ಯಯನ** ಎಂಬ ನಿಬಂಧವನ್ನು **ಡಾ.ನಾ.ಗೀತಾಚಾರ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/

(ಕೆ. ಬಸವರಾಜಪ್ಪ)
ಸಂಶೋಧನಾ ವಿದ್ಯಾರ್ಥಿ

ದಿನಾಂಕ : ೦೮/೦೬/೨೦೧೦
ಸ್ಥಳ : ಬೆಂಗಳೂರು

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮-೨೦೦೯ ಸಾಲಿನ ಎಂ.ಫಿಲ್. ಪದವಿಗಾಗಿ **'ಕನ್ನಡ ಹಸ್ತಪ್ರತಿಗಳಲ್ಲಿ ಪತ್ರಸಾಹಿತ್ಯ' – ಒಂದು ಅಧ್ಯಯನ** ಎಂಬ ನಿಬಂಧವನ್ನು **ಕೆ.ಬಸವರಾಜಪ್ಪ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ನಾ.ಗೀತಾಚಾರ್ಯ)

ದಿನಾಂಕ : ೦೮/೦೯/೨೦೧೦

ಸ್ಥಳ : ಬೆಂಗಳೂರು

ಪರಿವಿಡಿ ಪುಟಸಂಖ್ಯೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧. ಪೀಠಿಕೆ : ಭಾವ ಮತ್ತು ಭಾಷೆ : ಭಾಷೆ ಜೈವಿಕ ಪ್ರಕ್ರಿಯೆಗಳಲ್ಲಿ ಒಂದು. ಜೀವವಿಕಾಸದ ಹಂತಗಳಲ್ಲಿ ಭಾಷೆ ಭಾವಪ್ರಧಾನವಾದುದು. ಪ್ರಕೃತಿಯಲ್ಲಿ ಭೌತಿಕಕ್ರಿಯೆಗಳೆರಡೂ ರಚನಾತ್ಮಕ ಅಂಶಗಳು. ಭೌತಿಕಕ್ರಿಯೆ ನಿರ್ಭಾವ ಮೂಲವಾದರೆ, ಬೌದ್ಧಿಕಕ್ರಿಯೆ ಭಾವದಿಂದ ಭಾಷೆ ಉದಯಿಸುತ್ತದೆ. ಭೂಮಿಯ ರಚನೆಯಷ್ಟೇ ಭಾಷಾರಚನೆಯೂ ಅದ್ಭುತವಾದುದು. ಅಣುಕಣಗಳಿಂದ ಭೂಮಿ ವಿಕಾಸಗೊಂಡಂತೆಯೇ, ಸಂಜ್ಞೆ ಮತ್ತು ಮಾತುಗಳಿಂದ ಭಾಷೆ ವಿಕಾಸಗೊಂಡಿದೆ.

ಭೂಮಿ ತನ್ನ ಕಕ್ಷೆಯಲ್ಲಿ ಸುತ್ತುತ್ತಿರುವಾಗಲೇ ಭೂ–ಸ್ಫೋಟದಿಂದ 'ಲಾವಾರಸ' ಹೊರ ಹೊಮ್ಮಿದಂತೆ, ಮನುಷ್ಯನ ಭಾವಸ್ಫೋಟದಿಂದ ಮಾತು ಬಂದಿರಲು ಸಾಧ್ಯ. ಮೊದಲ ಹಂತದಲ್ಲಿ ಮನುಷ್ಯ – ಮನುಷ್ಯನ ನಡುವಿನ ಸಂವಹನಕ್ರಿಯೆ, ಸಂಜ್ಞೆಯ ಮೂಲಕ ಅನುಕರಣಾತ್ಮಕವಾಗಿದ್ದುದು, ಭಾವ ಸ್ಫೋಟದಿಂದ ಎರಡನೇ ಹಂತದಲ್ಲಿ ಭಾವಸ್ವರೂಪ ಮಾತಿನ ಸ್ಥಿತಿಗೆ ವಿಕಾಸಗೊಂಡಿದೆ. ಈ ಬೌದ್ಧಿಕ ಪರಿಧಿಯೊಳಗೆ ಭಾಷೆ ಮಾತುಗಳನ್ನು ವ್ಯವಸ್ಥಿತ ರೂಪದಲ್ಲಿ ಕಟ್ಟಿಕೊಡುವ ಒಂದು ಸಂಕೇತ, ಮನುಷ್ಯ ಭೂಮಿಯ ಯಾವುದೇ ಭಾಗದಲ್ಲಿರಲಿ ಮಾತು ಗಂಟಲೊಳಗಿನಿಂದ ಹೊರಹೊಮ್ಮುವ ಧ್ವನಿ–ಶಬ್ಧವಾಗಿರುತ್ತದೆ. ಈ ಧ್ವನಿ – ಶಬ್ಧ, ಭಾವ ಗರ್ಭದಿಂದ ಗಂಟಲು ಮೂಲಕ ಹೊರಬಂದು ಒಂದು ಅರ್ಥವನ್ನು ಪಡೆದುಕೊಳ್ಳಲು ಭಾವ ಸಂಕೇತವಾಗಿ ಭಾಷೆ ನೆಲೆಗೊಳ್ಳುತ್ತದೆ. ಭಾವವು ಒಂದೇ ಆಗಿರಬಹುದು, ಅದರ ಅರ್ಥವೂ ಒಂದೇ ಆಗಿರಬಹುದು. ಆದರೆ ಭಾವಾರ್ಥ ಸ್ವರೂಪದ ಭಾಷೆ ವೈವಿಧ್ಯತೆಯಿಂದ ಕೂಡಿರುತ್ತದೆ. ಅದಕ್ಕಾಗಿಯೇ ಪ್ರಪಂಚದ ಒಂದೊಂದು ಭಾಗದ ಒಂದೊಂದು ಜನಾಂಗದ ಭಾವನೆಗಳು ಒಂದೇ ಆಗಿದ್ದರೂ, ಅವುಗಳ ಅರ್ಥವು ಒಂದೇ ಆಗಿದ್ದರೂ ಭಾಷೆ ಮಾತ್ರ ವಿಭಿನ್ನ ಶೈಲಿಯಿಂದ ಕೂಡಿರುತ್ತದೆ. ಒಂದೊಂದು ಜನರ ಭಾಷೆಯ ಶೈಲಿ, ಮಾತಿನಶೈಲಿ ಬೇರೆ ಬೇರೆಯಾಗಿರುತ್ತವೆ. ಈ ಭಾವ ಮೂಲ ಭಾಷೆಯನ್ನು ಉಳಿಸುವ, ಸಾಗಿಸುವ ಲಿಪಿಕುದುರೆ ಕೇವಲ ಭಾಷೆಯ ಸಂಕೇತವಾಗಿ ಬರುತ್ತದೆ. ಭಾಷೆ ಭಾವ ಸಂಕೇತವಾದರೆ, ಲಿಪಿ ಭಾಷಾ ಸಂಕೇತವಾದುದು.

ಡಾ.ಕೆ.ಎಲ್. ಗೋಪಾಲಕೃಷ್ಣಯ್ಯನವರು ತಮ್ಮ 'ಭಾಷೆಯ ಬೆಳಕು' ಎಂಬ ಕೃತಿಯಲ್ಲಿ ಸ್ಟರ್ಟ್ವಿವಾ (Styrtevant) ಹಾಗೂ ಬ್ಲಾಕ್ ಅಂಡ್ ಟ್ರೈಗರ್ (Blaoch and trager) ಇವರು ಭಾಷೆಯ ಬಗೆಗೆ ನೀಡಿರುವ ನಿರೂಪಣೆಯನ್ನು ಇಲ್ಲಿ ಸೂಚಿಸುವುದು ಸೂಕ್ತವೆಂದು ಕಾಣುತ್ತದೆ. ಏನೆಂದರೆ "ಒಂದು ಸಮುದಾಯದ ಜನರು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ

ಸಂಕೇತಗಳ ವ್ಯವಸ್ಥೆಯೇ ಭಾಷೆ"[೧] ಅಂದರೆ ಮನುಷ್ಯರ ಪರಸ್ಪರ ಭಾವನೆಗಳ ಹಂಚಿಕೆಯ ಸಂವಹನ ಸಂಕೇತ ಭಾಷೆ.

೨. ಲಿಪಿ ಮತ್ತು ಬರವಣಿಗೆ :

ಮನುಷ್ಯರು ಪರಸ್ಪರ ಹತ್ತಿರವಿದ್ದಾಗ ತಮ್ಮ ಭಾವನೆಗಳನ್ನು, ಅನಿಸಿಕೆಗಳನ್ನು ಸಂಜ್ಞೆಯ ಮೂಲಕವೋ, ಮಾತಿನ ಮೂಲಕವೋ ತಾವಾಡುವ ಭಾಷೆಯ ಸಹಾಯದಿಂದ ಸಂವಹಿಸಬಹುದು. ಒಬ್ಬರಿಗೊಬ್ಬರು ದೂರವಿದ್ದಾಗ ಏನು ಮಾಡುವುದು? ಆಧುನಿಕ ತಂತ್ರಜ್ಞಾನಯುಗದಲ್ಲಿರುವಂತೆ ದೂರವಾಣಿ ಮಾಧ್ಯಮಗಳು ಹಿಂದೆ ಇದ್ದುವೆ? ಇಲ್ಲ. ಇದಕ್ಕಾಗಿ ಮಾತು ಮತ್ತು ಭಾಷೆಯ ಸವಾರಿಯಾಗಿ 'ಲಿಪಿ'ಯನ್ನು ಕಂಡುಕೊಳ್ಳಬೇಕಾಯಿತು. ಈ ಲಿಪಿಯ ಉಗಮ – ವಿಕಾಸ ಕೂಡ ವಿಭಿನ್ನ ಆಕಾರಗಳಿಂದ ಕೂಡಿರುವುದನ್ನು ಕಾಣುತ್ತೇವೆ. ಮನುಷ್ಯನ ವಿವಿಧ ವೇಷಭೂಷಣವಿದ್ದಂತೆ. ಒಂದೊಂದು ಜನಾಂಗದ, ಒಂದೊಂದು ಭಾಷೆಯ 'ಲಿಪಿ' ಸ್ವರೂಪವೂ ಬಹುರೂಪಿ ವಿನ್ಯಾಸವನ್ನು ಪಡೆದುಕೊಂಡು ವಿಕಾಸ ಹೊಂದಿರುವುದನ್ನು ಕಾಣಬಹುದು. ಉದಾಹರಣೆಗೆ ಕನ್ನಡ ಲಿಪಿಯ ಉಗಮ ಮತ್ತು ವಿಕಾಸವನ್ನು ಗಮನಿಸಬಹುದು. "ಕ್ರಿ.ಪೂ.೩ನೇ ಶತಮಾನದಿಂದ ಇಂದಿನವರೆಗಿನ ಲಿಪಿಸ್ವರೂಪವು ಬೇರೆ ಬೇರೆ ಕಾಲಗಳಲ್ಲಿ ಹೇಗೆ ಬ್ರಾಹ್ಮಿ ಲಿಪಿ ಮೂಲದಿಂದ ಬೇರೆ ಬೇರೆ ಹಂತಗಳಲ್ಲಿ ಬದಲಾಗುತ್ತಾ ಬಂದಿದೆ ಎಂಬುದನ್ನು ನೋಡಬಹುದು"[೨] ಹೀಗೆ 'ಲಿಪಿ' ಮಾತು – ಭಾಷೆಯ ಸಂಕೇತವಾಗಿ ಬರವಣಿಗೆ ಮಾಧ್ಯಮದಲ್ಲಿ ಕಾಣಿಸಿಕೊಂಡಿದೆ. ತನ್ನ ದೂರದ ಸಂಬಂಧಿಕರಿಗೆ ವಿಷಯ–ವಿಚಾರಗಳನ್ನು ಬರೆದು ಕಳುಹಿಸಲು 'ಲಿಪಿ'ಯು ಸಹಾಯಕ್ಕೆ ಬಂದಿದೆ.

೩. ಪತ್ರ ಅಥವಾ ಓಲೆ :

ಪ್ರಾಚೀನ ಕಾಲದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುದ್ಧಿಸಮಾಚಾರಗಳನ್ನು ಬರೆದು ಕಳುಹಿಸುವುದಕ್ಕೆ 'ಓಲೆ' ಕಳುಹಿಸುವುದು ಎಂದೇ ಕರೆಯಲಾಗುತ್ತಿತ್ತು. ಸುದ್ಧಿ ರವಾನಿಸುವವರನ್ನು 'ಓಲೆಕಾರರು' ಎಂದು ಕೂಡ ಕರೆಯುತ್ತಿದ್ದರು. ಆಧುನಿಕ ಕಾಲದಲ್ಲಿ ಇದನ್ನೇ ಪತ್ರ ವ್ಯವಹಾರ ಎಂದು ಕರೆಯುಲಾಗುತ್ತಿದೆ. ಅಂದರೆ 'ಓಲೆ' ಎಂಬುದಕ್ಕೆ 'ಪತ್ರ' ಎಂಬ ಶಬ್ದವನ್ನು ಬಳಸಲಾಗುತ್ತಿದೆ. ಪತ್ರ ವ್ಯವಹಾರದಲ್ಲಿ ಭಾಷೆ, ಲಿಪಿ ಮತ್ತು ಬರವಣಿಗೆ ಪ್ರಮುಖ ಪಾತ್ರವಹಿಸುತ್ತವೆ.

೪. ಪತ್ರಸಾಹಿತ್ಯ :

ಪತ್ರ ಸಾಹಿತ್ಯದಲ್ಲಿ ಮುಖ್ಯವಾಗಿ ಎರಡು ಬಗೆ ಒಂದು ವ್ಯಯಕ್ತಿಕ ಪತ್ರಗಳು, ಎರಡನೆಯದು ವ್ಯವಹಾರ ಪತ್ರಗಳು. ವೈಯಕ್ತಿಕ ಪತ್ರಗಳು ಖಾಸಗಿಯಾಗಿದ್ದರೆ, ವ್ಯವಹಾರ ಪತ್ರಗಳು ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ್ದವಾಗಿರುತ್ತವೆ. ಬಂಧು–ಬಾಂಧವರು, ಅಣ್ಣ–ತಮ್ಮಂದಿರು, ಅಕ್ಕ – ತಂಗಿಯರು, ತಂದೆ–ತಾಯಿಯರು, ಸ್ನೇಹಿತರು ಹಾಗೂ ಪ್ರೇಮಪತ್ರಗಳು ಸ್ವಂತ ವಿಷಯಗಳಿಗೆ ಸಂಬಂಧಿಸಿದ್ದು ಖಾಸಗಿ ಎನಿಸಿಕೊಳ್ಳುತ್ತವೆ.

ಸಾರ್ವಜನಿಕ ಪತ್ರಗಳು ಸಮಾಜ, ದೇಶಗಳೊಡನೆ ಪ್ರಶ್ನೆ, ಸಂಬಂಧಗಳು ವ್ಯಾವಹರಿಕವಾಗಿ ಕಂಡುಬರುತ್ತದೆ. ಸಾಮಾಜಿಕ ಅನುಕೂಲಗಳಿಗಾಗಿ, ಅಭಿವೃದ್ಧಿ ಸವಲತ್ತುಗಳಿಗಾಗಿ ಸರ್ಕಾರದೊಡನೆ ವ್ಯಕ್ತಿ ನಡೆಸಿರುವ ರಾಜಕೀಯ, ಆರ್ಥಿಕ ವಿಷಯಗಳುನ್ನು ಕುರಿತು ವ್ಯವಹಾರಗಳು ಸಾರ್ವಜನಿಕ ಎನಿಸಿಕೊಳ್ಳುತ್ತವೆ. ಇದೇ ರೀತಿ ಸಾಹಿತ್ಯ ಕ್ಷೇತ್ರದಲ್ಲಿ ಪತ್ರ ವ್ಯವಹಾರಗಳಿಗೆ ಸಂಬಂಧಿಸಿದ ಒಂದು ಸಾಹಿತ್ಯ ಪ್ರಕಾರವೇ ಸೃಷ್ಟಿಯಾಗಿದೆ. ಇದನ್ನೇ ನಾವು 'ಪತ್ರ ಸಾಹಿತ್ಯ' ಎಂದು ಕರೆಯುತ್ತೇವೆ.

೫. ಕನ್ನಡದಲ್ಲಿ ಪತ್ರ ಸಾಹಿತ್ಯ :–

ಕನ್ನಡದಲ್ಲಿ ಪ್ರಬಂಧ ಸಾಹಿತ್ಯ, ಪ್ರವಾಸ ಸಾಹಿತ್ಯ ಪ್ರಕಾರಗಳಷ್ಟೇ ಪ್ರಮುಖವಾದುದು ಪತ್ರ ಸಾಹಿತ್ಯ. ಆದರೆ ಎಲ್ಲಾ ಸಾಹಿತ್ಯ ಪ್ರಕಾರಗಳಂತೆ ಇದೊಂದು ಪ್ರಕಾರ ಸಾಹಿತ್ಯವಾಗಿ ಬೆಳೆದು ಬಂದಿರುವುದು ಇದುವರೆವಿಗೂ ಕಂಡುಬಂದಿಲ್ಲ. ಆದರೆ ಕನ್ನಡ ವಿಶ್ವಕೋಶ ಮೈಸೂರು ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ "ಪತ್ರಸಾಹಿತ್ಯ" ಎಂಬ ಲೇಖನವೊಂದು ಪ್ರಕಟಗೊಂಡಿರುವುದು ಕಂಡುಬರುತ್ತದೆ. ಇದನ್ನು ಗಮನಿಸಿದಾಗ ಕನ್ನಡ ಪ್ರಾಚೀನ ಪತ್ರ ಸಾಹಿತ್ಯ ಹಾಗೂ ಆಧುನಿಕ ಕನ್ನಡ ಪತ್ರಸಾಹಿತ್ಯ ಎಂದು ಎರಡು ರೀತಿಯ ಪರಂಪರೆಯನ್ನು ಗುರುತಿಸಬಹುದು.

ಪ್ರಾಚೀನ ಕನ್ನಡಪತ್ರಸಾಹಿತ್ಯ ಕಾವ್ಯಪರಂಪರೆಗೊಳಪಟ್ಟರೆ ಆಧುನಿಕ ಕನ್ನಡ ಪತ್ರಸಾಹಿತ್ಯ ಒಂದು ರೀತಿಯ ಪ್ರವಾಸ ಸಾಹಿತ್ಯ ಪರಂಪರೆಗೊಳಪಟ್ಟಂತೆ ಕಂಡುಬರುತ್ತದೆ. ಆಧುನಿಕ ಪತ್ರಸಾಹಿತ್ಯದಲ್ಲಿ ಎಲ್ಲವೂ ಪ್ರವಾಸ ಸಾಹಿತ್ಯ ಪರಂಪರೆಗೆ ಸೇರುವುದಿಲ್ಲ. ಕೆಲವೊಂದು ಪತ್ರವ್ಯವಹಾರಗಳು ಖಾಸಗಿ ಪರಂಪರೆಗೆ ಅಂದರೆ ವೈಯಕ್ತಿಕ ವಿಷಯಗಳ ಗುಂಪಿಗೂ ಸೇರುತ್ತವೆ. ಇನ್ನು ಕೆಲವೊಂದು ಅನುವಾದಿತ ಪತ್ರಗಳೂ ಕಂಡ ಬರುತ್ತವೆ.

ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಪತ್ರಸಾಹಿತ್ಯ ರನ್ನಕವಿಯ ಗದಾಯುದ್ಧಂ, ಶಿವಕೋಟ್ಯಾಚಾರ್ಯನ ವಡ್ಡಾರಾಧನೆ, ನಾಗವರ್ಮನ ಕರ್ನಾಟಕ ಕಾದಂಬರಿ, ಹೆಳವನಕಟ್ಟೆ ಗಿರಿಯಮ್ಮನ 'ಚಂದ್ರಹಾಸನಕತೆ'(ಸಾಂಗತ್ಯ) ಹಾಗೂ ದಾಸರ ಕೀರ್ತನೆಗಳಲ್ಲಿ ಕಾಣಬಹುದು.

ಆಧುನಿಕ ಸಾಹಿತ್ಯದಲ್ಲಿ ಬೇಂದ್ರೆಯವರ 'ಮೇಘದೂತ'ವೇ ಪತ್ರ ಸಾಹಿತ್ಯಕ್ಕೆ ಉತ್ತಮ ಉದಾಹರಣೆ. ನಂತರ ಬೀಚಿಯವರ 'ಬೆಳ್ಳಿಪತ್ರಗಳು', ೧೮೫೦ರಲ್ಲಿ ನಾಡಿಗ ಕೃಷ್ಣಮೂರ್ತಿಯವರು ಪ್ರಕಟಿಸಿರುವ 'ನಮ್ಮ ಕಾಗದಗಳು' ಪತ್ರಸಂಕಲನ, ಡಾ.ವಿ.ಶೆಟ್ಟಿಯವರ 'ಕೆನಡಾದಲ್ಲಿ ಕನ್ನಡಿಗ, ಲಿಂಗಸೂಗುರು ವಿಠಲರಾಯರು ೧೯೪೭ರಲ್ಲಿ ಅನುವಾದಿಸಿರುವ ಉರ್ದು ಮೂಲದ ಕಾಜಿ ಅಬ್ದುಲ್ ಗಫಾರನ 'ಲೈಲಾಪತ್ರಗಳು', ವಿ.ವೆಂಕೋಬಚಾರ್ಯರು ಅನುವಾದಿಸಿರುವ ಫ್ರೆಂಚ್ ಸಾಹಿತಿಯ 'ಮೊಪಾಸನ ಓಲೆಗಳು', ನವರತ್ನ ರಾಮರಾವ್ ಅವರ 'ಪ್ಯಾರಿಸಿನಿಂದ ಪ್ರೇಯಸಿಗೆ' ಇತ್ತೀಚಿಗೆ ಹರಿಹರ ಪ್ರಿಯರವರು ಸಂಪಾದಿಸಿರುವ 'ಕುವೆಂಪು ಪತ್ರಗಳು', ದೇಜಗೌ ಅವರ 'ಕುಲಪತಿಯ ಪತ್ರಗಳು, ಸಿಂಪಿಲಿಂಗಣ್ಣನವರು ಸಂಪಾದಿಸಿರುವ 'ಶ್ರೀಅರವಿಂದರಪತ್ರಗಳು', ಪಂಚಾಕ್ಷರಿ ಹಿರೇಮಠರ 'ಪ್ರಣಯ ಪತ್ರಗಳು', ಜಿ.ಪಿ.ರಾಜರತ್ನಂ ಸಂಪಾದಿತ 'ಗೋವಿಂದ ಪೈ – ಕೆಲವು ಪತ್ರಗಳು, ಎ.ಎನ್.ನಂಜುಂಡಸ್ವಾಮಿಯವರ 'ಗೌರವ ತಪಸ್ವಿ', ಏರ್ಯ.ಲಕ್ಷ್ಮಿನಾರಾಯಣರ 'ಸ್ನೇಹಸೇತು' ಪತ್ರ ಸಂಕಲನಗಳು ಎ.ಎನ್.ಮೂರ್ತಿರಾಯರ 'ಚಿತ್ರಗಳು–ಪತ್ರಗಳು' ಹಾಗೂ ದೇಜಗೌ ಅವರ ಮತ್ತೊಂದು ಕೃತಿ 'ತುಡಿತ' ತಂದೆ, ಮಗಳಿಗೆ ಪತ್ರಗಳು, 'ಮಣಿಹ' ಗ್ರಂಥದಲ್ಲಿ ಪ್ರೊ.ಎಂ.ವಿ.ಸೀತಾರಾಮಯ್ಯನವರು ಸಂಪಾದಿಸಿರುವ 'ಫ.ಗು.ಹಳಕಟ್ಟಿ ಪತ್ರಗಳು' ಮುಂತಾದವನ್ನು ನೋಡಬಹುದು.

ಆದರೆ ಪ್ರಸ್ತುತ ಸಂಪ್ರಬಂಧದ ಉದ್ದೇಶ ಸಾಹಿತ್ಯ ಪರಂಪರೆಯಲ್ಲಿ ಕಂಡುಬರುವ ಪತ್ರಸಾಹಿತ್ಯಕ್ಕಿಂತಲೂ ಭಿನ್ನವಾದುದು. ಅದೇನೆಂದರೆ ಚಾರಿತ್ರಿಕ ದಾಖಲೆ ಪತ್ರಗಳನ್ನು ಸಾಂಸ್ಕೃತಿಕ ಹಾಗೂ ಸಾಹಿತ್ಯಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡುವುದು. ಅದರಲ್ಲಿಯೂ ಕನ್ನಡ ಹಸ್ತಪ್ರತಿಗಳಲ್ಲಿ ಕಂಡುಬರುವ ಚಾರಿತ್ರಿಕ ದಾಖಲೆ ಪತ್ರಗಳು. ಇವುಗಳನ್ನು 'ದಾಖಲೆ ಸಾಹಿತ್ಯ'ವೆಂದರೂ ತಪ್ಪಾಗಲಾರದು. ಈ ಚಾರಿತ್ರಿಕ ದಾಖಲೆ ಪತ್ರಗಳನ್ನು ಭಾಷಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಸಾಹಿತ್ಯಾತ್ಮಕ ದೃಷ್ಟಿಯಾದರೆ, ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಸಾಂಸ್ಕೃತಿಕ ದೃಷ್ಟಿಕೋನವುಳ್ಳದ್ದು.

೬. ಅಧ್ಯಯನದ ಉದ್ದೇಶ :

ಚಾರಿತ್ರಿಕ ದಾಖಲೆ ಪತ್ರಗಳನ್ನು ಅಧುನಿಕ ಕಾಲದಲ್ಲಿ ಕಾಗದ ಪತ್ರಗಳೆಂದೂ, ಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗಳಲ್ಲಿ ಕಂಡುಬರುವ ದಾಖಲೆ ಪತ್ರಗಳೆಂದೂ ಕರೆಯಬಹುದು. ಕಾಗದ ಪತ್ರಗಳು

ಎಲ್ಲಾ ಕಾಲದಲ್ಲಿಯೂ ಉಳಿಯುತ್ತಾ ಬರುತ್ತವೆ. ಇಂದೂ ಇವೆ. ಮುಂದೆಯೂ ಅಸ್ಥಿತ್ವದಲ್ಲಿರುತ್ತವೆ. ಅವು ಆಧುನಿಕ ತಂತ್ರಜ್ಞಾನಕ್ಕೊಳಪಟ್ಟರೂ ಕಾಗದ ಪತ್ರಗಳೆಂದೇ ಅಸ್ಥಿತ್ವದಲ್ಲುಳಿಯುತ್ತವೆ. ಈಗ ಉದಾಹರಣೆಗೆ :ಆಸ್ತಿ ಪತ್ರಗಳು ಒಬ್ಬರಿಂದ ಮತ್ತೊಬ್ಬರ ಹಕ್ಕಿಗೆ ವರ್ಗಾಯಿಸಲ್ಪಡುವಾಗ ಅವುಗಳು ಪತ್ರ ಸ್ವರೂಪದಲ್ಲಿಯೇ ಉಳಿಯುತ್ತಾವೆ. ಆಸ್ತಿಪತ್ರಗಳು ಗಣಕೀಕರಣಗೊಂಡರು ಪತ್ರಗಳೆಂದೇ ಕರೆಯಸಿಕೊಳ್ಳುತ್ತವೆ. ಒಂದು ಆಸ್ತಿಯನ್ನು ಮತ್ತೊಬ್ಬರಿಗೆ ಮಾರಾಟ ಮಾಡುವಾಗ ಪರಬಾರೆ ಮಾಡುವಾಗ ತೆಗೆದುಕೊಳ್ಳುವವರು ಆಸ್ತಿ ಮಾಲೀಕರನ್ನು ನಮಗೆ ಈ ಆಸ್ತಿಯ ನೈಜ ಹಿನ್ನೆಲೆಯನ್ನು ತಿಳಿದುಕೊಳ್ಳಲು ಪೇಪರ್ ಬೇಕು, ಡಾಕ್ಯುಮೆಂಟ್ಸ್ ಬೇಕು ಎಂದು ಕೇಳುತ್ತಾರೆ. ಅಂದರೆ ಪೇಪರ್ ಎಂದರೆ ಕಾಗದವೆಂದೂ, ಡಾಕ್ಯೂಮೆಂಟ್ ಎಂದರೆ 'ದಾಖಲೆ' ಎಂದೂ, 'ದೃಢೀಕರಣಕ್ಕೊಳಪಟ್ಟ ಮೇಲೆ ಪ್ರಮಾಣಪತ್ರ'ವೆಂದೂ ಕರೆಯಲ್ಪಟ್ಟು ವಿಶ್ವಾಸಕ್ಕಾಗಿ ಕೇಳುತ್ತಾರೆ. ಒಂದು ಆಸ್ತಿ ಒಬ್ಬರಿಂದ ಇನ್ನೊಬ್ಬರಿಗೆ ಮಾರಲ್ಪಟ್ಟಿದೆಯೇ ಅಂದರೆ ಕ್ರಯ ಮಾಡಿದ್ದರೆ ಕ್ರಯಪತ್ರವೆಂದೂ, ಹೆಣ್ಣುಮಕ್ಕಳ ಅರಿಶಿನ ಕುಂಕುಮಕ್ಕೆಂದು ದಾನವಾಗಿ ಬಂದಿದ್ದರೆ ದಾನಪತ್ರವೆಂದೂ ಕರೆಯಲಾಗಿದೆ. ಅದು ಕ್ರಯ ಪತ್ರವಾಗಲಿ, ದಾನಪತ್ರವಾಗಿರಲಿ ಆಯಾ ಕಾಲದ ಸಾಂಸ್ಕೃತಿಕ ಸನ್ನಿವೇಶವನ್ನು ಒಳಗೊಂಡಿರುತ್ತದೆ.

ಈಗ ಒಂದು ಕಾಲದಲ್ಲಿ ಆಡಳಿತ ನಡೆಸಿದ ಒಬ್ಬ ರಾಜ ತನ್ನ ರಾಜಾಸ್ಥಾನದ ವಿದ್ವಾಂಸರಿಗೆ ಕೊಡ ಮಾಡುವ ಪ್ರಶಸ್ತಿಪತ್ರಗಳು. ಆ ಕಾಲದ ವಿದ್ವಾಂಸರಿಂದ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳು ಬೆಳಕಿಗೆ ಬರಲು ಕಾರಣವಾಗಿರುತ್ತವೆ. ಸಾಹಿತ್ಯ ಕೃತಿಗಳ ಮೂಲಕ ಒಂದು ಸಂದರ್ಭದ ಸಾಂಸ್ಕೃತಿಕ ಪರಿಸರ ಪರಿಚಯವಾಗುತ್ತದೆ. ಅಂದಿನ ಜೀವನಶೈಲಿ, ಭಾಷೆ ಮುಂತಾದವುಗಳನ್ನು ಅರಿಯಲು ಸಾಧ್ಯವಾಗುವುದು. ಅದೇ ರೀತಿ ಸಂಗೀತಕಲೆ, ನಾಟ್ಯ, ನಾಟಕ ಕಲೆಯೂ ತಿಳಿಯುತ್ತದೆ.

ದೇವಾಲಯಗಳನ್ನು ಕಟ್ಟಿಸಿ, ಅವುಗಳಿಗೆ ನೀಡಿದ ದತ್ತಿ-ದಾನಗಳ ವಿವರಗಳು ದಾನಪತ್ರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆಗ ಅಂದಿನ ಕಾಲದ ವಾಸ್ತುಶಿಲ್ಪ, ಶಿಲ್ಪಕಲೆ, ದೇವರು, ಮತ, ಧಾರ್ಮಿಕ ಚರಿತ್ರೆಯನ್ನು ಕಂಡುಕೊಳ್ಳಬಹುದು.

ರಾಜನ ಪರವಾಗಿ ಶತೃಗಳ ವಿರುದ್ಧ ಹೋರಾಡಿದ ವೀರರಿಗೆ (ಶತ್ರುಗಳನ್ನು ಗೆಲ್ಲಬಹುದು ಅಥವಾ ಹತನಾಗಬಹುದು) ಕೊಡುವಂತಹ ಪುರಸ್ಕಾರಗಳು, ಅವರ ನೆನಪಿಗಾಗಿ ಕಟ್ಟಿಸುವ ಕೆರೆ-ಕಟ್ಟೆಗಳು, ಆ ಯೋಧನಿಗೆ ಒಂದು ಊರನ್ನೇ ಅಥವಾ ಒಂದು ಪ್ರದೇಶವನ್ನೇ ನೀಡಬಹುದು. ಇಂತಹ ಸಂದರ್ಭಗಳಲ್ಲಿ ಯುದ್ಧ ನಡೆದ ಸ್ಥಳ, ಯುದ್ಧದ ಕಾರಣ ತಿಳಿದುಬರುತ್ತವೆ.

ದಾಖಲೆ ಸಾಹಿತ್ಯವೆಂದರೆ ಒಂದು ಕಾಲದ ಇತಿಹಾಸವನ್ನು ಹೇಳಲು, ಒಂದು ಊರಿನ, ಒಂದು ದೇಶದ ಚರಿತ್ರೆಯನ್ನು ಹೇಳುವ ಇತಿಹಾಸ ಕೃತಿಗಳಿಗೆ ಆಕರಗಳು ಆಗಬಹುದು. ಕೇವಲ ಇತಿಹಾಸ ಕೃತಿಗಳಿಗಲ್ಲದೆ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಿಷಯಗಳ ಸಂಶೋಧನೆಗೂ ಉತ್ತಮ

ಆಕರ ಸಾಹಿತ್ಯವಾಗುತ್ತವೆ. ಆದ್ದರಿಂದ ದಾಖಲೆ ಸಾಹಿತ್ಯವನ್ನು 'ಆಕರಸಾಹಿತ್ಯ' ಎಂದರೂ ತಪ್ಪಾಗಲಾರದು.

ದೇವಾಲಯಗಳಂತೆಯೇ ಮಠಗಳಿಗೆ ಕೊಡುವ ಭೂಮಿ ಮತ್ತು ಪೂಜಾ ಪದ್ಧತಿಗೆ ನೀಡುವ ದಿನ ನಿತ್ಯದ ಕಾಣಿಕೆ ಬಹುಪಾಲು ರಾಜಾಸ್ಥಾನದಿಂದಲೇ ಬರುತ್ತಿದ್ದವು. ಇವುಗಳನ್ನು ಅರಮನೆ, ಗುರುಮನೆ ಒಪ್ಪಂದ ಪತ್ರಗಳೆಂದು ಕರೆಯುತ್ತಿದ್ದರು. ಇವುಗಳು ರಾಜರುಗಳಿಂದ ಹೊರಡಿಸುವ ಆಜ್ಞಾಪತ್ರಗಳೆಂದೂ, ಅಪ್ಪಣೆ ಪತ್ರಗಳೆಂದೂ ಕೂಡ ಕರೆಯಲಾಗುತ್ತಿತ್ತು. ಇದಕ್ಕೆ ಉದಾಹರಣೆಯಾಗಿ ಟಿಪ್ಪುಸುಲ್ತಾನರಿಂದ ಶೃಂಗೇರಿ ಮಠಕ್ಕೆ ನೀಡಿರುವ ವಿವಿಧ ರೀತಿಯ ಕೊಡುಗೆಗಳನ್ನು ಕುರಿತ ಪತ್ರಗಳನ್ನು ನೋಡಬಹುದು. ಟಿಪ್ಪುಸುಲ್ತಾನರಂತೆಯೇ ಕೆಳದಿ ಅರಸರಿಂದ, ವಿಜಯನಗರದ ಅರಸರಿಂದಲೂ ಶೃಂಗೇರಿ ಮಠಕ್ಕೆ ಅನೇಕ ರೀತಿಯ ದತ್ತಿ-ದಾನಗಳ ವಿಷಯಗಳಿಗೆ ಸಂಬಂಧಪಟ್ಟಂತಹ ಪತ್ರವ್ಯವಹಾರಗಳನ್ನು ನೋಡುತ್ತೇವೆ. ಬ್ರಿಟೀಷರ ವಿರುದ್ಧ ಹೋರಾಡಿದಂತಹ ಸೈನಿಕರಿಗೆ ಕಿತ್ತೂರುರಾಣಿ ಚೆನ್ನಮ್ಮನಿಂದ, ಚಿತ್ರದುರ್ಗದ ಕೋಟೆರಕ್ಷಣೆ ಮಾಡಿದ ಒನಕೆ ಓಬವ್ವನಿಗೆ ಅಲ್ಲಿನ ಪಾಳೆಯಗಾರರಿಂದ ನೀಡಿದ ಭೂದಾನ ದಾಖಲೆಗಳನ್ನು ಪತ್ರರೂಪದಲ್ಲಿ ಕಾಣಬಹುದು.

ಈ ರೀತಿಯ ದಾಖಲೆ ಪತ್ರಗಳಲ್ಲಿ ಆಯಾ ಕಾಲದ ಕಲೆ, ಸಾಹಿತ್ಯ, ಸಂಸ್ಕೃತಿಯ ಅಂಶಗಳು ಹುದುಗಿರುವುದರಿಂದ ಅವುಗಳನ್ನು ಸಂಶೋಧಿಸಿ ಹೊರಜಗತ್ತಿಗೆ ಪ್ರಸ್ತುತ ಪಡಿಸುವುದೇ ಈ ಸಂಪ್ರಬಂಧದ ಮೂಲ ಉದ್ದೇಶ. ಇಂತಹ ಅಧ್ಯಯನಗಳಿಂದ ಒಂದು ಕಾಲದ ಇತಿಹಾಸದರ್ಶನವೂ ಆಗುತ್ತದೆ ಎಂಬುದೂ ಕೂಡ ಇಲ್ಲಿನ ಉದ್ದೇಶವಾಗಿರುತ್ತದೆ.

೨. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ :

ದಾಖಲೆ ಸಾಹಿತ್ಯವು ಇವತ್ತಿನಂತೆ ಕಂಪ್ಯೂಟರೀಕರಣಗೊಂಡವುಗಳಲ್ಲ. ಬಹುಪಾಲು ತಾಳೆಗರಿ, ಓಲೆಗಳಲ್ಲಿ, ಕಡತಗಳಲ್ಲಿ, ಕಾಗದಗಳಲ್ಲಿ ಕೈ ಬರಹಗಳಿಂದ ಕೂಡಿರುತ್ತವೆ. ಅದರಲ್ಲಿಯೂ ಬಹುಪಾಲು ಕಡತಗಳು ಮೋಡಿಲಿಪಿಯಲ್ಲಿ ಬರೆಯಲ್ಪಟ್ಟಿರುತ್ತವೆ. ಇವುಗಳನ್ನೇ ನಾವು ಹಸ್ತಪ್ರತಿ ಪತ್ರಗಳೆಂದು ಕರೆಯಲಾಗಿದೆ.

ಈ ಹಸ್ತಪ್ರತಿ ಪತ್ರಗಳ ಸ್ವರೂಪ ಮತ್ತು ವ್ಯಾಪ್ತಿ ವಿಶಿಷ್ಟ ಹಾಗೂ ವಿಸ್ತಾರವನ್ನು ಹೊಂದಿರುತ್ತವೆ. ಯಾವುದೋ ಪ್ರದೇಶದಲ್ಲಿ ಅಥವಾ ಪ್ರಾಂತ್ಯವನ್ನು ಆಳುತ್ತಿದ್ದ ಪಾಳೆಯಗಾರರಿರಬಹುದು, ರಾಜಮಹಾರಾಜರಿರಬಹುದು ಅವರು ಹೊರಡಿಸುವ ಆಜ್ಞೆಗಳು, ಕೊಡುವ ಅಪ್ಪಣೆಗಳು, ನೀಡುವ ದಾನ-ದತ್ತಿಗಳು, ಸನ್ನದುಗಳು, ನಿರೂಪಗಳ ರೂಪದಲ್ಲಿ ಹೊರಬೀಳುತ್ತವೆ. ಇವುಗಳನ್ನು ಅಧಿಕಾರ ಪತ್ರಗಳು, ಆಜ್ಞಾಪತ್ರಗಳು ಎಂದೂ ಕೂಡ ಕರೆಯಬಹುದಾಗಿದೆ. ಈ ಪತ್ರಗಳ

ಮುಖ್ಯ ಸ್ವರೂಪವೇ ಆಜ್ಞೆ, ಅಧಿಕಾರ ಸ್ವರೂಪದಿಂದ ಕೂಡಿರುತ್ತವೆ. ಇವುಗಳ ಬರವಣಿಗೆ ಮಾಧ್ಯಮ ಸಲಕರಣೆಗಳು ಓಲೆಗರಿ, ಕಾಗದ, ಕಡತಗಳ ಸ್ವರೂಪದಲ್ಲಿರುತ್ತವೆ.

ಒಂದು ರಾಜ್ಯದ ರಾಜ ಮತ್ತೊಂದು ರಾಜ್ಯದ ರಾಜರುಗಳೊಡನೆ ನಡೆಸುವ ವ್ಯವಹಾರ ಪತ್ರರೂಪದಲ್ಲಿರುತ್ತವೆ. ಉದಾಹರಣೆಗೆ ಕಿತ್ತೂರುರಾಣಿ ಚೆನ್ನಮ್ಮ ಕಂಪನಿ ಅಧಿಕಾರಿಗಳೊಡನೆ ನಡೆಸಿರುವ ವ್ಯವಹಾರ ಪತ್ರಗಳು, "ಕಂಪನಿ ಅಧಿಕಾರಿಗಳೊಡನೆ ಕಿತ್ತೂರು ರಾಣಿ ಚೆನ್ನಮ್ಮನು ಹೊರಡಿಸಿರುವ ನಿರೂಪಗಳು"[೩] ಎಂದೇ ಕರೆಯಲ್ಪಡುವ ಅನೇಕ ಪತ್ರಗಳನ್ನು ಕಾಣುತ್ತೇವೆ.

"ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಮರಾಠರು ಬೆಂಗಳೂರನ್ನು ಆಕ್ರಮಿಸಿಕೊಂಡು ಅಲ್ಲಿನ ಪೇಶ್ವಗಳು ಅಗ್ರಹಾರಗಳನ್ನು ದಾನಬಿಟ್ಟಿರುವುದಕ್ಕೆ ಅನೇಕ ಬಗೆಯ ಸನ್ನದುಗಳು ಹಸ್ತಪ್ರತಿ ರೂಪದಲ್ಲಿ ದೊರಕುತ್ತವೆ."[೪]

ಕೈಫಿಯತ್ತುಗಳು ಮತ್ತು ಬಖೈರುಗಳೂ ಕೂಡ ಈ ದಾಖಲೆ ಸಾಹಿತ್ಯದ ವ್ಯಾಪ್ತಿಗೆ ಸೇರುತ್ತವೆ. ಆದರೆ ಇವುಗಳ ಸ್ವರೂಪ ಸನ್ನದು – ನಿರೂಪಗಳಿಗಿಂತ ಭಿನ್ನವಾಗಿರುತ್ತವೆ. ಕೈಫಿಯತ್ತುಗಳು ಸಾಮಾನ್ಯವಾಗಿ ಸ್ಥಳಪುರಾಣ, ವ್ಯಕ್ತಿ ವಿಚಾರಗಳನ್ನು ಹೇಳುವಂಥವುಗಳಾದರೆ, ಬಖೈರುಗಳು ಬಹುಪಾಲು ರಾಜಕೀಯ ವ್ಯವಹಾರಗಳನ್ನು ತಿಳಿಸುತ್ತವೆ.

ಕೈಫಿಯತ್ತು ಬಖೈರುಗಳು ದಾಖಲೆ ಸಾಹಿತ್ಯದ ಪ್ರಧಾನ ಆಕರ ಸಾಹಿತ್ಯವಾದರೆ, ಸನ್ನದು–ನಿರೂಪಗಳು, ಬಖೈರುಗಳಿಗೆ ಆಕರಗಳಾಗಿರುತ್ತವೆ. ಉದಾರಹರಣೆಗೆ ಬೆಂಗಳೂರಿನ ಬಖೈರುಗಳು ಕೃತಿಗೆ ಅನೇಕ ಸನ್ನದುಗಳು ನಿದರ್ಶನವಾಗಿ ಬಂದಿರುವುದನ್ನು ಕಾಣಬಹುದು. ಆದ್ದರಿಂದ ಈ ಎರಡು ಪ್ರಕಾರಗಳನ್ನು ಹಸ್ತಪ್ರತಿ ಪತ್ರಸಾಹಿತ್ಯದಿಂದ ಪ್ರತ್ಯೇಕಗೊಳಿಸಿ (ದಾಖಲೆ ಸಾಹಿತ್ಯದ ವ್ಯಾಪ್ತಿಗೆ ಒಳಪಟ್ಟರೂ) ಅಧ್ಯಯನ ಮಾಡಬಹುದಾಗಿದೆ.

ಹಸ್ತಪ್ರತಿ ಪತ್ರಗಳು ವ್ಯಾಪ್ತಿ ಬಹುಪಾಲು ವಿಜಯನಗರದ ಅರಸರ ಕಾಲದಿಂದ ಮೈಸೂರು ಅರಸುಕುಲವನ್ನು ಒಳಗೊಂಡಂತೆ ಬ್ರಿಟೀಷ್ ಆಡಳಿತಾವಧಿಯವರೆಗೂ ಕಾಣಬಹುದು.

ಅಡಿ ಟಿಪ್ಪಣಿಗಳು

೧. ಭಾಷೆಯ ಬೆಳಕು : ಲೇಖಕರು.ಡಾ.ಕೆ.ಎಲ್.ಗೋಪಾಲಕೃಷ್ಣಯ್ಯ, ೨೦೦೬, ಪುಟಸಂಖ್ಯೆ – ೧೨

೨. ಕನ್ನಡ ಲಿಪಿಯ ಉಗಮ ಮತ್ತು ವಿಕಾಸ : ಎ.ವಿ.ನರಸಿಂಹಮೂರ್ತಿ

೩. ಕನ್ನಡ ವಿಶ್ವಕೋಶ : ಮೈಸೂರು ವಿಶ್ವವಿದ್ಯಾಲಯ

೪. ಬೆಂಗಳೂರಿನ ಬಖೈರುಗಳು : ಡಾ.ಎಂಜಿ.ಮಂಜುನಾಥ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

ಅಧ್ಯಾಯ – ೨

ಹಸ್ತಪ್ರತಿಗಳು ಮತ್ತು ಪತ್ರಸಾಹಿತ್ಯ

ಹಸ್ತಪ್ರತಿಗಳು ನಾಡಿನ ಆಸ್ತಿ. ಒಂದು ದೇಶದ ಚರಿತ್ರೆಯ ಹಿನ್ನೆಲೆಯಲ್ಲಿ ಶಾಸನಗಳು ಎಷ್ಟು ಮಹತ್ವವೋ ಅಷ್ಟೇ ಮಹತ್ವವನ್ನು ಹಸ್ತಪ್ರತಿಗಳು ಹೊಂದಿರುತ್ತವೆ. ಸಾಹಿತ್ಯ ಕ್ಷೇತ್ರದಲ್ಲಿ ಹಸ್ತಪ್ರತಿಗಳನ್ನು ಮುಖ್ಯವಾಗಿ ಗಮನಿಸುವುದು ಗ್ರಂಥಸಂಪಾದನಾ ವಿಷಯಕ್ಕೆ ಸಂಬಂಧಿಸಿದಂತೆ. ಆದ್ದರಿಂದ ಮೊದಲು ಹಸ್ತಪ್ರತಿಶಾಸ್ತ್ರಕ್ಕೂ ಗ್ರಂಥಸಂಪಾದನೆಗೂ ಇರುವ ಸಂಬಂಧವನ್ನು ಪ್ರಸ್ತುತ ವಿಚಾರ ಮಾಡುವುದು ಸೂಕ್ತವೆಂದು ಕಾಣುತ್ತದೆ

೧. ಗ್ರಂಥಸಂಪಾದನೆಯಿಂದ ಹಸ್ತಪ್ರತಿ ಬೆಳವಣಿಗೆ :

ಗ್ರಂಥಸಂಪಾದನೆ ಮತ್ತು ಹಸ್ತಪ್ರತಿ ಎರಡು ವಿಷಯಗಳು ಫಲ, ಪುಷ್ಪವೃಕ್ಷಗಳಿದ್ದಂತೆ. ಹಸ್ತಪ್ರತಿ ಮರವಾದರೆ, ಗ್ರಂಥಸಂಪಾದನೆ ಫಲಪುಷ್ಪವಿದ್ದಂತೆ. 'ಗ್ರಂಥ' ಎಂದರೆ 'ಕಾವ್ಯ' ಅಥವಾ 'ಕೃತಿ' ಎಂದು ಇಲ್ಲಿ ಭಾವಿಸಬೇಕಾಗಿದೆ. ಏಕೆಂದರೆ ಗ್ರಂಥಸ್ಥವಾದ ಸಂಪಾದನೆಯ ಪಾರಿಭಾಷಿಕಾರ್ಥ ದೃಷ್ಟಿಯಿಂದ 'ಗ್ರಂಥ' ಎಂದರೆ ಬರೆದ ಓಲೆಗರಿಗಳ 'ಕಟ್ಟು' ಕವಿ ರಚಿಸಿದ ಪುಸ್ತಕ, ಇನ್ನು ಸಂಪಾದನೆಯೆಂದರೆ ಕಾರ್ಯ, ಕೆಲಸ, ಕ್ರಿಯೆ, ಆದ್ದರಿಂದ ಹಸ್ತಪ್ರತಿಯೆಂಬ ಮರದಲ್ಲಿ ಕೊಂಬೆರಂಬೆಗಳಿಂದ ಫಲ–ಪುಷ್ಪಗಳನ್ನು ಬಿಡಿಸುವ ಕಾಯಕವೇ ಗ್ರಂಥ ಸಂಪಾದನೆಯ ಕಾರ್ಯ. ಹಾಗಾಗಿ ಹಸ್ತಪ್ರತಿಶಾಸ್ತ್ರ ಒಂದು ರೀತಿಯಲ್ಲಿ ಗ್ರಂಥಸಂಪಾದನೆಗೆ ಭೂಮಿಕೆಯನ್ನು ಒದಗಿಸುತ್ತದೆ ಎಂದು ಭಾವಿಸಬಹುದು.

ಕವಿಕೃತಿಯನ್ನು ಸಂಪಾದಿಸುವ ಕಾರ್ಯದ ವಿಧಿವಿಧಾನಗಳನ್ನು ಒಳಗೊಂಡಿರುವ ವಿಷಯವೇ ಗ್ರಂಥಸಂಪಾದನಾಶಾಸ್ತ್ರ. ಒಂದು ಕಾವ್ಯ ಕೃತಿಯನ್ನು ಸಂಪಾದಿಸಬೇಕಾದರೆ ಯಾವ ಯಾವ ಮಾರ್ಗಗಳನ್ನು ಅನುಸರಿಸಬೇಕು ಎಂಬುದನ್ನು ತಿಳಿಸುತ್ತದೆ. ಈ ರೀತಿ ಗ್ರಂಥ ಸಂಪಾದನಾಶಾಸ್ತ್ರಕ್ಕೆ ಆಕರಗಳು ಹಸ್ತಪ್ರತಿಗಳು. ಹಸ್ತಪ್ರತಿಶಾಸ್ತ್ರ ಗ್ರಂಥಸಂಪಾದನೆಗೆ ಆಕರಶಾಸ್ತ್ರವಾಗುತ್ತದೆ.

ಹಸ್ತಪ್ರತಿಗಳನ್ನು ಸಂಗ್ರಹಿಸುವುದು, ಸಂರಕ್ಷಿಸುವುದು, ಸೂಚಿ ಮಾಡುವುದು, ಒಂದು ರೀತಿಯಲ್ಲಿ ಶಾಸನಶಾಸ್ತ್ರದ, ಜಾನಪದ ವಿಜ್ಞಾನಗಳ ಕ್ಷೇತ್ರ ಕಾರ್ಯವಿದ್ದಂತೆ. ಅಷ್ಟೇ ಅಲ್ಲದೆ ಹಸ್ತಪ್ರತಿಗಳು ಸವಕಲಾಗುತ್ತಾ ಬಂದಂತೆ ಹೊಸದಾಗಿ ಪ್ರತಿ ಮಾಡುವುದು ಮತ್ತು ಮಾಡಿಸುವುದು ಬಹುಮುಖ್ಯ ಕೆಲಸ. ಒಂದು ಮುದ್ರಿತ ಪುಸ್ತಕಗಳ ಗ್ರಂಥಾಲಯದ ಕೆಲಸ ಕಾರ್ಯಗಳು ಯಾವ

ಯಾವ ರೀತಿಯಲ್ಲಿ ಇರುತ್ತವೆಯೋ, ಯಾವ ಯಾವ ವಿಧಿವಿಧಾನಗಳನ್ನು ಹೊಂದಿರುತ್ತದೋ ಅದೇ ರೀತಿಯ ಎಲ್ಲಾ ವಿಧಿವಿಧಾನಗಳನ್ನು ಹಸ್ತಪ್ರತಿಶಾಸ್ತ್ರ ಕ್ಷೇತ್ರದಲ್ಲಿಯೂ ಅಳವಡಿಸಬಹುದು. ಗ್ರಂಥಾಲಯಗಳಂತೆಯೇ ಹಸ್ತಪ್ರತಿ ಭಂಡಾರಗಳು. ಲಿಪಿಕಾರರಿಂದ ಪ್ರತಿ ಮಾಡಿಸುವ ಒಂದು ಹಂತದ ಹೆಚ್ಚುವರಿ ಕೆಲಸವು ಹಸ್ತಪ್ರತಿ ವಿಭಾಗದಲ್ಲಿರುತ್ತದೆ.

ಹಸ್ತಪ್ರತಿಗಳ ಮಹತ್ವವನ್ನರಿತ ಪ್ರೊ.ಎಂ.ವಿ.ಸೀತಾರಾಮಯ್ಯನವರು ೧೯೭೯ರಲ್ಲಿ ತಮ್ಮ ಗುರು ಬಿ.ಎಂ.ಶ್ರೀಯವರ ಸ್ಮರಣಾರ್ಥವಾಗಿ ಸ್ಥಾಪಿಸಿದ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದಲ್ಲಿ ನಡೆದ ಫ.ಗು.ಹಳಕಟ್ಟಿಯವರ ಜನ್ಮ ಶತಮಾನೋತ್ಸವ ಆಚರಣೆಯ ಅಂಗವಾಗಿ ಏರ್ಪಡಿಸಿದ್ದು ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿಯಲ್ಲಿ 'ಹಸ್ತಪ್ರತಿಶಾಸ್ತ್ರ' ಎಂಬ ಪ್ರತ್ಯೇಕ ಶಿಸ್ತನ್ನು ಸ್ಥಾಪಿಸಿದರು.

ಹಸ್ತಪ್ರತಿಶಾಸ್ತ್ರವನ್ನು ಅದುವರೆಗೂ ಗ್ರಂಥಸಂಪಾದನಾಶಾಸ್ತ್ರದ ಒಂದು ಅಂಗವಾಗಿ ಅಧ್ಯಯನ ಮಾಡಲಾಗುತ್ತಿತ್ತು. ೧೯೮೧ರಿಂದೀಚೆಗೆ ಗ್ರಂಥ ಸಂಪಾದನಾಶಾಸ್ತ್ರದಿಂದ ಪ್ರತ್ಯೇಕಗೊಂಡು ಹಸ್ತಪ್ರತಿಶಾಸ್ತ್ರ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಅದೇ ವರ್ಷ ಹಸ್ತಪ್ರತಿಶಾಸ್ತ್ರ ಎಂಬ ಕನ್ನಡ ಪದಕ್ಕೆ ಸಂವಾದಿಯಾಗಿ ಇಂಗ್ಲೀಷ್‌ನಲ್ಲಿ 'Manuscriptology' ಎಂಬ ಪದವೂ ನಿಷ್ಪತ್ತಿಯಾಯಿತು. ಇದು ಕರ್ನಾಟಕದ ಕನ್ನಡ ವಿದ್ವಾಂಸರ ಕೊಡುಗೆ ಎಂದು ಹೇಳಬಹುದಾಗಿದೆ.

ಬಹುಶಃ ಮಂಡ್ಯದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೪ರಲ್ಲೇ ಡಾ.ಆರ್.ಸಿ.ಹಿರೇಮಠರವರು 'ಹಸ್ತಪ್ರತಿ ಸಂಗ್ರಹ, ಅವುಗಳ ಸೂಚೀಕರಣ ಮೊದಲಾದುವುಗಳನ್ನೊಳಗೊಂಡ 'Manuscriptology' ಎಂಬ ಹೊಸ ಶಾಸ್ತ್ರವೇ ಬೆಳೆದು ಬರಬೇಕಾಗಿದೆ" ಎಂಬ ಮಾತನ್ನು ಡಾ.ಎಂ.ಎಂ.ಕಲಬುರ್ಗಿಯವರು ತಮ್ಮ 'ಕನ್ನಡ ಹಸ್ತಪ್ರತಿಶಾಸ್ತ್ರ' ಕೃತಿಯಲ್ಲಿ ಹೇಳುತ್ತಾರಾದರೂ "ಹಸ್ತಪ್ರತಿಶಾಸ್ತ್ರ" ರೂಪುಗೊಂಡದ್ದು ಎಂ.ವಿ.ಸೀ.ಯವರಿಂದಲೇ ಎಂಬುದನ್ನು ಗಮನಿಸಬೇಕು.

ನಮ್ಮ ನಾಡಿನಲ್ಲಿ ಏಕಕಾಲಕ್ಕೆ ಅವಳಿ-ಮಕ್ಕಳಾಗಿ ಹುಟ್ಟಿದ ಪುರಾತತ್ವ ಇಲಾಖೆ ಮತ್ತು ಹಸ್ತಪ್ರತಿ ಇಲಾಖೆ ಸಂಶೋಧನಾ ಕ್ಷೇತ್ರದ ಎರಡು ಪ್ರಮುಖ ಘಟಕಗಳು. ಆದರೆ ಪುರಾತತ್ವ ಇಲಾಖೆಯಲ್ಲಿ ನಡೆಯುವಷ್ಟು ಕೆಲಸ ಹಸ್ತಪ್ರತಿ ಇಲಾಖೆಯಿಂದ ನಡೆಯುತ್ತಿದೆಯೇ ಎಂಬುದು ನಮಗೆ ತಿಳಿದು ಬರುವುದಿಲ್ಲ"[೩]

೨. ಹಸ್ತಪ್ರತಿಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನಶಾಸ್ತ್ರ :-

ಹಸ್ತಪ್ರತಿಶಾಸ್ತ್ರ ತನ್ನ ವ್ಯಾಪ್ತಿಯನ್ನು ಇನ್ನೂ ವಿಸ್ತಾರವಾಗಿ ವಿಸ್ತರಿಸಿಕೊಂಡಿದೆ. ಡಾ.ನಾ.ಗೀತಾಚಾರ್ಯರವರು ಹೇಳುವಂತೆ "ಆಧುನೀಕರಣದ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನಗಳ ಸ್ವರೂಪವೇ ಬದಲಾಗುತ್ತಿರುವ ಈ ಕಾಲದಲ್ಲಿ ಆ ಹೊಸತನವನ್ನು ಇದರಲ್ಲೂ ಅಳವಡಿಸಬೇಕು. ಇದನ್ನು ಅಧುನೀಕರಣಗೊಳಿಸಬೇಕು. ಹಸ್ತಪ್ರತಿಯ ಬಹುಮುಖೀ ಮತ್ತು ಸಾಂಸ್ಕೃತಿಕ ಅಧ್ಯಯನದತ್ತ ಹೊರಳುವ ಕಾಲ ಇದಾಗಿದೆ"[೪] ಎನ್ನುತ್ತಾರೆ. ಈ ಮೂಲಕ ಹಸ್ತಪ್ರತಿ ಅಧ್ಯಯನಶಾಸ್ತ್ರ ಎಂಬ ವಿನೂತನ ಶಿಸ್ತನ್ನು ಹುಟ್ಟುಹಾಕಿದ್ದಾರೆ.

ಗ್ರಂಥಸಂಪಾದನೆ ಬೆಳವಣಿಗೆ ಹಸ್ತಪ್ರತಿಶಾಸ್ತ್ರವನ್ನೇ ಆಧರಿಸಿದೆ. ಗ್ರಂಥಸಂಪಾದನೆಗೆ ಆಧಾರವೇ ಹಸ್ತಪ್ರತಿಗಳು ಮತ್ತು ಹಸ್ತಪ್ರತಿಶಾಸ್ತ್ರ. ಇದಕ್ಕೆ ಒಂದು ಸ್ವತಂತ್ರ ಅಸ್ಥಿತ್ವವಿದೆ. ವಿಶ್ವವಿದ್ಯಾಲಯಗಳಲ್ಲಿ ವಿದ್ವಾಂಸರು ಗ್ರಂಥಸಂಪಾದನೆಯ ಕೆಲಸ ಮುಗಿದುಹೋಯಿತು ಇನ್ನು ಕಾವ್ಯಕೃತಿಗಳೂ ಕೂಡ ಸಂಪಾದನೆಗೆ ಉಳಿದಿಲ್ಲ ಎನ್ನುವ ಕಾಲಕ್ಕೆ ಮತ್ತೆ ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿ ವಿಷಯಗಳನ್ನು ನಿರ್ಲಕ್ಷಿಸುವ ಸಮಯಕ್ಕೆ ಪ್ರೊ.ಎಂ.ವಿ.ಸೀತಾರಾಮಯ್ಯನವರು ನಡೆಸಿದ ರಚನಾತ್ಮಕ ಕಾರ್ಯಗಳ ಫಲವಾಗಿ ಸುಮಾರು ಎಂಬತ್ತರ ದಶಕದಲ್ಲಿ 'ಹಸ್ತಪ್ರತಿಶಾಸ್ತ್ರ'ವೊಂದು ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದ ಮೂಲಕ ಗುರುತಿಸಿಕೊಂಡಿತು. ಈ ನೂತನ ಅಧ್ಯಯನ ಶಾಖೆಯ ರೂಪುರೇಷೆಗಳಿಗೆ ಡಾ.ಎಂ.ಎಂ.ಕಲಬುರ್ಗಿ, ಆರ್.ಎನ್.ಶಿವಗಣೇಶ್, ಡಾ.ನಾ.ಗೀತಾಚಾರ್ಯ ಹಾಗೂ ಬಿ.ಎಸ್.ಸಣ್ಣಯ್ಯನವರಿಂದ ರಚಿತವಾದ ಗ್ರಂಥಗಳು ಒಂದು ಖಚಿತವಾದ ಸ್ವರೂಪವನ್ನು ಕೊಟ್ಟಿವೆ.

ಗ್ರಂಥಸಂಪಾದನೆಗಿಂತ ಬೇರೆಯಾಗಿಯೇ ಬೆಳೆದಿರುವ ಹಸ್ತಪ್ರತಿಶಾಸ್ತ್ರದ ವ್ಯಾಖ್ಯೆ, ವ್ಯಾಪ್ತಿ, ಸ್ವರೂಪ ಮತ್ತು ಅಧ್ಯಯನದ ವಿಧಾನಗಳು ಇತ್ಯಾದಿ ವಿಚಾರಗಳನ್ನು ಡಾ.ಎಂ.ಎಂ.ಕಲಬುರ್ಗಿ ಮತ್ತು ಡಾ.ನಾ.ಗೀತಾಚಾರ್ಯರವರು ತಮ್ಮ 'ಕನ್ನಡ ಹಸ್ತಪ್ರತಿಶಾಸ್ತ್ರ ವಿವೇಚನೆ' ಎಂಬ ಕೃತಿಯಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ.

೩. ಹಸ್ತಪ್ರತಿ ಅಧ್ಯಯನಶಾಸ್ತ್ರದ ಮಹತ್ವ ಮತ್ತು ವೈವಿಧ್ಯತೆ :-

ಯಾವುದೇ ಭಾಷೆಯ ಪ್ರಾಚೀನ ಸಾಹಿತ್ಯ ಎಲ್ಲಿಯವರೆಗೆ ಅಧ್ಯಯನಶೀಲವಾಗಿರುತ್ತದೆಯೋ ಅಲ್ಲಿಯವರೆಗೆ ಹಸ್ತಪ್ರತಿ ಅಧ್ಯಯನ ಶಾಸ್ತ್ರದ ಅಧ್ಯಯನದ ಅಗತ್ಯವೂ ಇರುತ್ತದೆ. ಇಷ್ಟೇ ಅಲ್ಲದೆ ಖಗೋಳವಿಜ್ಞಾನ, ಜ್ಯೋತಿಷ್ಯ, ಪಂಚಾಂಗ, ವೈದ್ಯಶಾಸ್ತ್ರ, ಗಣಿತಶಾಸ್ತ್ರ ಮುಂತಾದ ಅನ್ಯಶಿಸ್ತೀಯ ಶಾಸ್ತ್ರಗಳು ಎಂದಿನಿಂದ ಜಗತ್ತಿನಲ್ಲಿ ಅಸ್ಥಿತ್ವಕ್ಕೆ ಬಂದಿವೆಯೋ ಅಂದಿನಿಂದ ಇಂದಿನವರೆಗೂ ಈ ಎಲ್ಲಾ ವಿಷಯಗಳ ಹೊಸ ಓದುವಿಗೆ ಹಸ್ತಪ್ರತಿಶಾಸ್ತ್ರದ ಅಗತ್ಯವಿದ್ದೇ ಇರುತ್ತದೆ.

ಡಾ.ನಾ.ಗೀತಾಚಾರ್ಯರವರು ತಮ್ಮ 'ಹಸ್ತಪ್ರತಿಶಾಸ್ತ್ರ ವಿವೇಚನೆ' ಕೃತಿಯಲ್ಲಿ ಹೇಳಿರುವ ಮಾತುಗಳು ಇಲ್ಲಿ ಪ್ರಸ್ತುತವೆನಿಸುತ್ತವೆ. ಅವರ ಮಾತುಗಳಲ್ಲೇ ಹೇಳುವುದಾದರೆ "ಹಸ್ತಪ್ರತಿ ಅಧ್ಯಯನಶಾಸ್ತ್ರ ವೈವಿಧ್ಯಮಯವಾದುದು. ಗ್ರಂಥಸಂಪಾದನೆಯನ್ನು ಒಳಗೊಂಡಂತೆ ಇದರಲ್ಲಿ ಬಹುಮುಖಿ ಶಿಸ್ತುಗಳನ್ನು ಬಯಸುವ ವ್ಯಾಪಕ ಇತಿಹಾಸವಿದೆ, ಸಮಾಜವಿದೆ, ಭಾರತೀಯ ವಿದ್ಯೆಗಳಾದ ವಿಜ್ಞಾನ, ವೈದ್ಯ, ಜ್ಯೋತಿಷ್ಯ, ವಾಸ್ತು, ತಾಂತ್ರಿಕ, ಧರ್ಮಶಾಸ್ತ್ರಗಳಿವೆ. ಭಾಷೆಯಿದೆ, ಸಾಹಿತ್ಯವಿದೆ, ಸಂಸ್ಕೃತಿಯ ಅನೇಕ ಸಂಗತಿಗಳಿವೆ. ಸಾಮಾಜಿಕ ವಿವರಗಳಿವೆ, ಆಯಾ ಕಾಲದ ಭಿನ್ನ ಪರಿಸರ ಪ್ರದೇಶದ ವಿಭಿನ್ನ ಆಚರಣೆಗಳಿವೆ. ವ್ಯಕ್ತಿಗಳ ಮನೋಭಾವಗಳಿವೆ. ವಸ್ತುಗಳ ವೈಶಿಷ್ಟ್ಯಗಳಿವೆ, ಸಂಗತಿಗಳ ಮೌಲ್ಯಗಳಿವೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನದಂತೆ ಹಸ್ತಪ್ರತಿಗಳಲ್ಲಿಯೂ ಸಾಂಸ್ಕೃತಿಕ ಅಧ್ಯಯನದ ಸಾಧ್ಯತೆಯಿದೆ. ಹಸ್ತಪ್ರತಿಗಳನ್ನು ಧರ್ಮದ ದೃಷ್ಟಿಯಿಂದ, ಪ್ರಾದೇಶಿಕ ದೃಷ್ಟಿಯಿಂದ ಮತ್ತು ವಿಷಯದ ದೃಷ್ಟಿಯಿಂದಲೂ ಪ್ರತ್ಯೇಕ ಅಧ್ಯಯನ ಮಾಡಬಹುದು.

ಹಸ್ತಪ್ರತಿಗಳಲ್ಲಿ ನಮಗೆ ಲಭ್ಯವಾಗುವ ಇನ್ನೂ ಅನೇಕ ಅನ್ಯಶಿಸ್ತು ಸಾಹಿತ್ಯವನ್ನು ಕಾಣಬಹುದು. ಉದಾಹರಣೆಗೆ ಸೂಪಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ಕಾಮಶಾಸ್ತ್ರ ಮುಂತಾದವುಗಳು. ಅಲ್ಲದೆ ಗೋವೈದ್ಯ, ಮಾನವ ರೋಗ ನಿವಾರಕ ಸಿದ್ಧೌಷಧಗಳ ದೀಪಿಕೆಗಳೆನಿಸಿದ ಹಲವಾರು ನವವೈದ್ಯ ಕೃತಿಗಳು, ರತ್ನಶಾಸ್ತ್ರ, ಸಾಮುದ್ರಿಕಶಾಸ್ತ್ರ ಮೊದಲಾದ ಅನೇಕ ಶಾಸ್ತ್ರ ಗ್ರಂಥಗಳು ಜೈನ, ಬೌದ್ಧ, ವೀರಶೈವ ಹಾಗೂ ವೈದಿಕ ಕಥಾ ಸಾಹಿತ್ಯ ಇನ್ನು ಮುಂತಾದ ಅನೇಕ ವೈವಿಧ್ಯಮಯ ಸಾಹಿತ್ಯ ಕನ್ನಡ ಹಸ್ತಪ್ರತಿಗಳಲ್ಲಿ ದೊರೆಯುತ್ತವೆ.

೪. ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾಗಿ ಹಸ್ತಪ್ರತಿಗಳು :-

ಸಾಂಸ್ಕೃತಿಕವಾಗಿ ಹಸ್ತಪ್ರತಿಗಳು ಎಂತಹ ಮಹತ್ವವನ್ನು ಪಡೆದುಕೊಂಡಿರುತ್ತವೆಯೆಂದರೆ, ಹತ್ತನೇ ಶತಮಾನದಲ್ಲಿ ಅತ್ತಿಮಬ್ಬೆ ತನ್ನ ಜೈನಧರ್ಮದ ಪ್ರಚಾರಕ್ಕಾಗಿ ಪೊನ್ನನ ಶಾಂತಿಪುರಾಣವನ್ನು ಒಂದು ಸಾವಿರ ಪ್ರತಿಗಳನ್ನು ಲಿಪಿಕಾರರಿಂದ ಬರೆಯಿಸಿ ಹಂಚುತ್ತಾಳೆ. ಇದರಿಂದ ಎಷ್ಟೋ ಜನ ಲಿಪಿಕಾರರಿಗೆ ಹೊಟ್ಟೆ ಹೊರೆದುಕೊಳ್ಳಲು ಉದ್ಯೋಗವಾಗಿತ್ತು. ಅಲ್ಲದೆ ಕವಿ ಪೊನ್ನನಿಗೆ ಪ್ರೋತ್ಸಾಹ ನೀಡಿದ್ದೂ ಅಲ್ಲದೆ ಕನ್ನಡದಲ್ಲೊಂದು ಉತ್ತಮ ಕಾವ್ಯ ಮೂಡಿಬರಲು ಉತ್ತೇಜನವಾಯಿತು.

ಹಸ್ತಪ್ರತಿಗಳು ಓಲೆಗರಿಯ ರೂಪದಲ್ಲಿರುವುದೇ ಸಾಮಾನ್ಯವಾದರೂ, ಕಾಗದದ ರೂಪದಲ್ಲಿರುವುದೂ ಕೂಡ ಕಂಡು ಬರುತ್ತದೆ. ಉದಾಹರಣೆಗೆ : ನಾಗವರ್ಮನ 'ಶ್ರೀವರ್ಧಮಾನ ಪುರಾಣ'ವು ಕಾಗದದ ಹಸ್ತಪ್ರತಿಯಲ್ಲಿ ಲಿಖಿತವಾಗಿದೆ. ಇದೇ ಅತೀ ಪ್ರಾಚೀನ ಮೊದಲ ಕಾಗದದ ಹಸ್ತಪ್ರತಿಕಾವ್ಯವೆಂದು ತೋರುತ್ತದೆ. ಇದರ ಕಾಲ ಸುಮಾರು ೧೫೬೭ ಎಂದು ಗುರುತಿಸಬಹುದು.

ಹಸ್ತಪ್ರತಿಗಳಲ್ಲಿ ಅತಿಸಣ್ಣ ಅಂದರೆ ೩ ಅಂಗುಲ ಉದ್ದ, ೧.೧/೨ ಅಂಗುಲ ಅಗಲದ ಹಸ್ತಪ್ರತಿಗಳುಂಟು. ಅದೇ ರೀತಿ ಅತಿ ಉದ್ದವಾದ ಅಂದರೆ ೩ ಅಡಿ ಉದ್ದದ ಹಸ್ತಪ್ರತಿಗಳು ಈಗಲೂ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದಲ್ಲಿ ನೋಡಲು ಸಿಗುತ್ತವೆ.

ಪ್ರಾಕೃತ ಭಾಷೆಯ ಹಸ್ತಪ್ರತಿಯೂ ನಮ್ಮಲ್ಲಿ ದೊರಕುತ್ತವೆ. ಉದಾಹರಣೆಗೆ : 'ಧವಳ' ಎಂಬುದು ಮೂಡಬಿದರೆಯ ಜೈನಮಠದಲ್ಲಿ ಲಭ್ಯವಿದ್ದು, ಮಸಿಯಲ್ಲಿ ಬರೆಯಲ್ಪಟ್ಟ ತಾಳೆಯೋಲೆ ಗ್ರಂಥವಾಗಿರುತ್ತದೆ. ಬರಹದ ಕಾಲ ಕ್ರಿ.ಶ.೧೧೨೦ ಎಂದು ತಿಳಿದು ಬರುತ್ತದೆ. ಇದು ವರ್ಣಚಿತ್ರಗಳಿಂದ ಕೂಡಿರುವುದು ಇದರ ವಿಶಿಷ್ಟತೆ.

ಜಯಪುರದ 'ರಾಜಾಸ್ಥಾನ್ ಹಿಂದಿ ಗ್ರಂಥ ಅಕಾಡೆಮಿ 'ಪಾಂಡು ಲಿಪಿ ವಿಜ್ಞಾನ್' ಎಂಬ ಹಸ್ತಪ್ರತಿಶಾಸ್ತ್ರವನ್ನು ೧೯೭೮ರಲ್ಲಿ ಪ್ರಕಟಿಸಿದೆ. ಇದರ ಕರ್ತೃ ಡಾ.ಸತ್ಯೇಂದ್ರ ಅವರು. ಇದು ಹಿಂದಿ ಭಾಷೆಯಲ್ಲಿ ಅತಿ ದೊಡ್ಡ ಆಕಾರದ ಅಂದರೆ ಸುಮಾರು ೩೮೦ ಪುಟಗಳಲ್ಲಿದೆ. ಈ ಗ್ರಂಥವು ಹಸ್ತಪ್ರತಿಶಾಸ್ತ್ರದ ಎಲ್ಲಾ ವಿವರಗಳನ್ನು ಸುಮಾರು ಒಂಬತ್ತು ಅಧ್ಯಾಯದಲ್ಲಿ ನಿರೂಪಿಸಲ್ಪಟ್ಟಿದೆ. ದೇಶ ಭಾಷೆಗಳಲ್ಲಿ ಈ ಶಾಸ್ತ್ರದ ಅಧ್ಯಯನ ಮಾಡಬಯಸುವವರೆಲ್ಲ ಈ ವಿಶ್ವಕೋಶ ಸದೃಶ ಕೃತಿಯನ್ನು ಪರಿಶೀಲಿಸುವುದರಿಂದ ತುಂಬ ಪ್ರಯೋಜನಕಾರಿಯಾಗಿದೆ.

ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು 'ಹಸ್ತಪ್ರತಿ ಬರವಣಿಗೆಯ ಸಾಮಾಗ್ರಿಗಳ ಪಾರಿಭಾಷಿಕ ಪದಗಳನ್ನು ಈರೀತಿ ಪಟ್ಟಿ ಮಾಡುತ್ತಾರೆ. ಮೊದಲನೆಯದಾಗಿ 'ಗರಿ' : ತಾಳೆಗರಿ, ಪತ್ರ, ತಾಲಪತ್ರ, ಲೇಖ್ಯ, ಓಲೆ, ಓಲೆಗರಿ, ತಾಡಪತ್ರ, ತಾಡಪೋತಿ, ತಾಕೋಲೆ, ತಾಳೆಯೋಲೆ, ಅಲೇಖ್ಯ ಅಳಕ.

ಎರಡನೆಯದಾಗಿ 'ಕಂಠ' : ಲೋಹದ ಕಡ್ಡಿ, ಪತ್ರಲೇಖನಿ, ನಾರಾಚಕರಿಣೀ, ಲೇಖನಿ, ಲೆಕ್ಕಣಿಕೆ, ಕಂಟ (ಕಂಟಕ) ಬಳಪ, ಬಳಹ, ಕಲಾಮು

ಮೂರನೆಯದಾಗಿ 'ಗ್ರಂಥ' :- ಕಟ್ಟು, ಲೇಖ್ಯ, ಪುಸ್ತಕ, ಶೃತ, ಭಿತ್ತಿ, ಪ್ರಕೃತಿ, ಗ್ರಂಥ, ಕವಳಿಗೆ, ಏಹಿ, ಹೊತ್ತಿಗೆ, ಕಾಷ್ಠಾಪಟ್ಟಿಕಾ, ಕಂಟಿಕಾ, ಲಂಬೂಷಾ ಇತ್ಯಾದಿಯಾಗಿ ಕರೆಯುತ್ತಾರೆ.

ಈ ಸಂಬಂಧದಲ್ಲಿ ಕ್ರಿ.ಶ.೧೩೩೮ರಲ್ಲಿ 'ಮಂಗರಾಜನ ಅಭಿನವಾಭಿದಾನ' ಕೃತಿಯ ಪದ್ಯವೊಂದರಲ್ಲಿ ಗಮನಿಸಬಹುದು.

ಪತ್ತಳಿಕೆಯೆನಲು ಕಾಗದಮಕ್ಕುದೌತಿ ಮಸಿ
ಪಾತ್ರೆಯಕ್ಕು ಕಲಾಮು ಲೇಖನಿಕೆಯಕ್ಕೋಲೆ
ಪತ್ರಮದಲೇಖಮಕ್ಕಲ್ಲಿ ಕರತಾಳಿ ಹಿಂತಾಳಿ ತಾಳಿಯೆನಿಕ್ಕುಂ
ಪತ್ರ ನಾರಾಚಮೆನೆ ಕಂಟಂ ಶೃತಂ ಲೇಖ್ಯೆ
ಭಿತ್ತಿಯೆನೆ ಪುಸ್ತಕಕಂಠ ವಣಿಕಮೆನಲ್ಕದಂ

ಪೊತ್ತಿರ್ಪ ಕೋಲಕ್ಕುಂ ಕಡಿತ ಮಂಖರಿಯಕ್ಕು ಬಳಪಮದು
ಶುಭ್ರೋಪಲಂ

ಹೀಗೆ ಇತಿಹಾಸ, ಸಂಸ್ಕೃತಿ ಮತ್ತು ಭಾಷೆ ದೃಷ್ಟಿಯಿಂದ ಹಸ್ತಪ್ರತಿಗಳು ಬಹುಮಹತ್ವ ಪಡೆದುಕೊಳ್ಳುತ್ತವೆ. ಶಾಸನಗಳು, ರಾಜಚರಿತ್ರೆಗಳು, ಕೆಲವು ಸಾಹಿತ್ಯ ಕೃತಿಗಳು ಒಂದು ದೇಶದ ಒಂದು ಕಾಲದ ಇತಿಹಾಸ ರಚನೆಗೆ ಸಾಧನಗಳಾಗಿರುವಂತೆ ಹಸ್ತಪ್ರತಿಗಳು ಆ ಬಗೆಗೆ ಮಾಹಿತಿಯನ್ನು ಒದಗಿಸಲು ನೆರವಾಗುತ್ತವೆ. ಉದಾಹರಣೆಗೆ ವೇಣುಪುರದ ಕ್ಷತ್ರಿಯ ವಂಶಾವಳಿ, ಶ್ರೀರಂಗಪಟ್ಟಣ ಚರಿತ್ರೆ, ಹೊಳೆಹೊನ್ನೂರು ಕೈಫಿಯತ್ತು, ಹೊಯ್ಸಳ ರಾಜರ ಚರಿತ್ರೆ ಇನ್ನೂ ಮುಂತಾಗಿ ಐತಿಹಾಸಿಕ ಅಧ್ಯಯನದಲ್ಲಿ ನೆರವಾಗುತ್ತವೆ.

ಒಂದು ಹಸ್ತಪ್ರತಿಯಲ್ಲಿ 'ಕ್ಷೇತ್ರನಡಿ' ಇತ್ಯಾದಿಗಳ ಪಟ್ಟಿ ದೊರಕುತ್ತದೆ. ಇಡೀ ಕರ್ನಾಟಕದಲ್ಲಿ ಇರುವ ನದಿಗಳು, ಉಪನದಿಗಳು, ದೇವಾಲಯಗಳು, ಮತೀಯ ದೇವರುಗಳು, ವಟವೃಕ್ಷಗಳು ಇತ್ಯಾದಿಗಳ ಪಟ್ಟಿ ಸಂಖ್ಯಾ ಸಮೇತ ಸಿಗುತ್ತವೆ.

ಕೆಲವು ಮನೆಲೆಕ್ಕಗಳುಳ್ಳ ಹಸ್ತಪ್ರತಿಗಳು ನಮಗೆ ಸಿಗುತ್ತವೆ. ಬಿ.ಎಂ.ಶ್ರೀ.ಪ್ರತಿಷ್ಠಾನದ ಹಸ್ತಪ್ರತಿಭಂಡಾರದಲ್ಲಿ ಇಂಥದೊಂದು ತೆಲುಗು ಹಸ್ತಪ್ರತಿಯಿದೆ. ಇದರಲ್ಲಿ ಅನೇಕ ಊರುಗಳೊಂದಿಗೆ ಇಟ್ಟುಕೊಂಡ ವಹಿವಾಟಿನ ಲೆಕ್ಕದ ವಿವರಗಳಿವೆ. ಉಪೇಕ್ಷಿತ ಹಸ್ತಪ್ರತಿಗಳು ಎಂಬ ಲೇಖನದಲ್ಲಿ ಡಾ.ನಾ.ಗೀತಾಚಾರ್ಯರವರು ತಮ್ಮ 'ಹಸ್ತಪ್ರತಿವಿವೇಚನೆ' ಎಂಬ ಕೃತಿಯಲ್ಲಿ ಹಸ್ತಪ್ರತಿಗಳ ವೈವಿಧ್ಯತೆಯನ್ನು ಕುರಿತು ಸವಿವರವಾಗಿ ತಿಳಿಸಿದ್ದಾರೆ. 'ಪ್ರಶ್ನಶಾಸ್ತ್ರ' ಎಂಬ ಹಸ್ತಪ್ರತಿಯ ಬಗ್ಗೆ ಕೂಡ ಅವರು ಹೇಳಿದ್ದಾರೆ. ಇಲ್ಲಿ ಸಿಗುವ ಹಸ್ತಪ್ರತಿಯ ಪ್ರತಿಗಳು ಪ್ರಶ್ನೆಕೇಳುವಲ್ಲಿ ಮತ್ತು ಹೇಳುವಲ್ಲಿ ತನ್ನದೇ ಆದ ವಿಶಿಷ್ಟ ಗುಣದಿಂದ ಕೂಡಿರುತ್ತವೆ.

ಉದಾಹರಣೆಗೆ : 'ಯಿತನ ಕೆಲಸ ಯಿತನಿಗೆ ಆದೀತೋ ಆಗದೋ' ಎಂಬ ಪ್ರಶ್ನೆಯೂ
ಯಿತನ ಕೆಲಸ ಧನಮೂಲದಿಂದ ಆದೀತು' ಎಂಬ ಉತ್ತರವೂ ಇರುವಂತಹ ಹಸ್ತಪ್ರತಿಗಳು ದೊರೆಯುತ್ತವೆ. ಇಲ್ಲಿ ಜಾನಪದೀಯ ಅಂಶವುಳ್ಳ ಸಾಹಿತ್ಯ ಮತ್ತು ಭಾಷೆ ಗಮನಿಸತಕ್ಕದ್ದು. 'ಈತನ' ಎಂಬ ಪದಲ್ಲಿ 'ಈ' ದೀರ್ಘಸ್ವರಕ್ಕೆ ಬದಲಾಗಿ ಅವರ್ಗೀಯ ವ್ಯಂಜನ 'ಯಿ' ಯಕಾರ ಅಕ್ಷರವನ್ನು ಬಳಸಿರುವುದು ಆಡು ಮಾತಿನ ಭಾಷೆಯನ್ನು ತೋರುತ್ತದೆ. ಇದರೊಂದಿಗೆ ಒಂದು ಕಾಲದ, ಜನರ, ಸಮಾಜದ ನಂಬಿಕೆ–ಸಂಪ್ರದಾಯಗಳು ತಿಳಿದುಬರುತ್ತದೆ.

'ಹಸ್ತ' ಸಾಮುದ್ರಿಕ ಲಕ್ಷಣ ಹೇಳುವ ಹಸ್ತಪ್ರತಿಗಳು ಇರುವುದನ್ನು ಕಾಣಬಹುದು. "ಹೆಣ್ಣಿಗೆ ಸುಳಿಮಟ್ಟುವ ಲಕ್ಷಣ" ಹುಬ್ಬಿನ ಮೇಲೆ ಯಿರಲು ಧನಲಾಭ, ಬುಜದ ಮೇಲೆ ಯಿರಲು ಗಂಡನ ಮೇಲೆ ಸ್ನೇಹ, ಮೊಲೆ ಮೇಲೆಯಿರಲು ಜಾರೆ, ನಡದ ಮೇಲೆ ಯಿದ್ದರ ಹುಟ್ಟಿದ ಮನೆ, ಹೊಕ್ಕಮನೆಗೆ

ದರಿದ್ರ, ಮುಂಡದ ಮೇಲೆ ಯಿರೆ ಶುಭ" ಇತ್ಯಾದಿ ವಿವರಗಳಿಂದ ಒಂದು ಸಮಾಜದ ನಂಬಿಕೆ ಕಂಡುಬರುತ್ತದೆ. ಸಾಂಸ್ಕೃತಿಕ ಅಂಶಗಳಿಗೆ ಹಸ್ತಪ್ರತಿಗಳ ಕೊಡುಗೆ ಎಷ್ಟೇಂಬುದು ಇಲ್ಲಿ ಕಾಣುತ್ತದೆ.

ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಎಷ್ಟೋ ಹಸ್ತಪ್ರತಿಗಳು ಇಂದೂ ಲಭ್ಯ. ಇವುಗಳು ನಾಟಿವೈದ್ಯಗಾರಿಕೆಯಲ್ಲಿ ಹೆಚ್ಚು ಉಪಯುಕ್ತತೆಯನ್ನು ಪಡೆದುಕೊಂಡಿದೆ. ಭಾರತೀಯ ಆಯುರ್ವೇದ ಪದ್ಧತಿಯ ಲಕ್ಷಣವುಳ್ಳವಾಗಿವೆ. ಗಿಡಮೂಲಿಕೆ ಔಷಧಿಗಳೇ ಈ ಹಸ್ತಪ್ರತಿಗಳಲ್ಲಿ ದೊರಕುವುದು. ವಿಷಚಿಕಿತ್ಸೆ ಅಂದರೆ ಹಾವು, ಚೇಳು ಕಚ್ಚಿದಾಗ ಮಾಡುವ ಚಿಕಿತ್ಸೆ, ಯೋಗದ ರಹಸ್ಯ, ಪಿಂಡೋತ್ಪತ್ತಿ ಮುಂತಾದವು. ಮನೋವೈಜ್ಞಾನಿಕತೆಗೆ ಸಂಬಂಧಪಟ್ಟಂತೆ 'ಸ್ವಪ್ನಾಧ್ಯಾಯ' 'ಮನೋವಿಕಾರನಿರಸನ' ಎಂಬ ವಿಷಯದ ರಗಳೆಯ ಕೃತಿ ಲಭ್ಯವಾಗಿದೆ.

ವಾಸ್ತುವನ್ನು ಕುರಿತ ಹಸ್ತಪ್ರತಿಗಳಲ್ಲಿ ಆಗಿನ ಕಾಲದ 'ಮನೆಗಳು' ಯಾವ ಮಾದರಿಯಲ್ಲಿರುತ್ತಿದ್ದವು ಎಂಬುದರ ಮೇಲೆ ಅಂದಿನ ಸಾಂಸ್ಕೃತಿಕ ಅಧ್ಯಯನದ ಸಾಧ್ಯತೆಯಿದೆ.

ಲೋಹಶಾಸ್ತ್ರವನ್ನು ತಿಳಿಸುವ 'ರಸಸಿಂಧೂರ' ಮಾಡುವ ಕ್ರಮವನ್ನು ಕುರಿತ 'ರಸವಾದ' ಮುಂತಾದ ಹಸ್ತಪ್ರತಿಗಳು ದೊರಕುತ್ತವೆ. ಇವುಗಳಿಂದ ಲೋಹಗಳನ್ನು ತಯಾರಿಸುವ, ಕರಗಿಸುವ ವಿಚಾರಗಳು ತಿಳಿಯುತ್ತವೆ.

ರತ್ನಗಳ ಬಗೆಗೆ ಹೇಳುವ ರತ್ನಾಶಾಸ್ತ್ರ, ಚಿನ್ನದ ಮೆರುಗನ್ನು ಹಾಕುವ 'ಬಣ್ಣಾಂತರ ಸೂತ್ರ' ಎಂಬ ಹಸ್ತಪ್ರತಿಗಳು ಕೂಡ ದೊರೆಯುತ್ತವೆ.

ಶವಸಂಸ್ಕಾರಗಳ ಕ್ರಿಯಾವಳಿಗಳ ಕುರಿತ ಹಸ್ತಪ್ರತಿಗಳು ವೀರಶೈವರಲ್ಲಿ ಮತ್ತು ವೈದಿಕರಲ್ಲಿ ಆಯಾ ಧಾರ್ಮಿಕ ಸಂಪ್ರದಾಯಗಳ ವಿಧಿಕ್ರಿಯೆಗಳನ್ನು ತಿಳಿಸುವಂತಹ ಹಸ್ತಪ್ರತಿಗಳನ್ನು ನೋಡುತ್ತೇವೆ.

'ರಾತ್ರಿನಲ್ಲ' ಎಂಬ ಒಂದು ಹಸ್ತಪ್ರತಿಯೂ ಪದ್ಯರೂಪದಲ್ಲಿದ್ದು ವೇಶ್ಯೆಯರ ಧರ್ಮವನ್ನು ಕುರಿತು ಹೇಳುತ್ತದೆ. ಆ ಪದ್ಯ ಈ ರೀತಿಯಿದೆ.

"ಎಂಟಡಿಯನ ತಾಯಂಗೆ । ಕಂಟಕ ಗೈದವನ
ಬಾಯಕುತ್ತಿಗೆ ಮುನಿದನ ನೆಂಟರ ಬಗೆಯನಾಳ್ದನ
ಭಂಟನ ತಾಪೋಲ್ದನಕ್ಕ ರಾತ್ರಿಯ ನಲ್ಲಂ॥ ಎಂದು ಹೇಳುವ ಹಸ್ತಪ್ರತಿ

ಪಾಕಶಾಸ್ತ್ರವನ್ನು ಕುರಿತ ಮಂಗರಸನ 'ಸೂಪಶಾಸ್ತ್ರ', ಚಾವುಂಡರಾಯನ 'ಪರೋಪಕಾರಂ' ಹಸ್ತಪ್ರತಿಗಳಲ್ಲಿ ಕಂಡುಬರುತ್ತದೆ.

ಜಾನಪದ ಸಾಹಿತ್ಯವನ್ನುಳ್ಳ ಹಸ್ತಪ್ರತಿಗಳು ಕಂಡುಬರುತ್ತವೆ.

ಉದಾಹರಣೆಗೆ : 'ಮಳೆಯರಾಜಚರಿತೆ', 'ಲಾವಣಿಗಳು', 'ಹರಕೆ ಪದಗಳು', ಒಗಟು ಪದಗಳು', 'ಮಹಾನವಮಿ ಪದಗಳು', 'ಮೊಸರು ಕಡೆಯುವ ಹಾಡುಗಳು', 'ಸೋಬಾನೆ ಪದ' ಮುಂತಾದ ಸಂಪ್ರದಾಯದ ಹಾಡುಗಳುಳ್ಳ ಹಸ್ತಪ್ರತಿಗಳು ಹೇರಳವಾಗಿ ಸಿಕ್ಕುತ್ತವೆ.

೫. ಹಸ್ತಪ್ರತಿಗಳ ಭಾಷಾ ವೈವಿಧ್ಯತೆ :-

ಇನ್ನು ಹಸ್ತಪ್ರತಿಗಳಲ್ಲಿನ ಭಾಷಾ ವೈವಿಧ್ಯವನ್ನು ಗಮನಿಸಿದರೆ ಕಾವ್ಯಭಾಷೆಗೂ, ಶಾಸನ ಭಾಷೆಗೂ ಮತ್ತು ಹಸ್ತಪ್ರತಿಭಾಷೆಗೂ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಹಸ್ತಪ್ರತಿ ಲಿಪಿ ಸಾಮಾನ್ಯವಾಗಿ ತಮಿಳು, ಗ್ರಂಥ, ಅರವ, ತಿಗಳಾರಿ ಇತ್ಯಾದಿ ವಿವಿಧ ರೀತಿಯ ಲಿಪಿ ವೈವಿಧ್ಯತೆಯಿಂದ ಕೂಡಿರುತ್ತವೆ. ಕಾಗದ, ಕಡತ ಮುಂತಾದ ಹಸ್ತಪ್ರತಿಗಳಲ್ಲಿ ಮೋಡಿಲಿಪಿಯನ್ನು ನೋಡುತ್ತೇವೆ. ಕೆಲವು ಹಸ್ತಪ್ರತಿಗಳು ದೇವನಾಗರಿ ಲಿಪಿಗಳಿಂದ ಕೂಡಿರುತ್ತವೆ.

೬. ಲಿಪಿಕಾರರು ಮತ್ತು ಹಸ್ತಪ್ರತಿ ರೂಪದ ಕಾವ್ಯಗಳು :-

ಆರೇಳು ದಶಕಗಳ ಹಿಂದೆ ಜನರಲ್ಲಿ ಸಾಹಿತ್ಯಾಸಕ್ತಿ ಎಷ್ಟಿತ್ತೆಂದರೆ ಜೈಮಿನಿಭಾರತ, ಕುಮಾರವ್ಯಾಸಭಾರತಗಳಿಲ್ಲದ ಕನ್ನಡನಾಡಿನ ಹಳ್ಳಿಗಳೇ ಇರಲಿಲ್ಲವೆಂದು ಹೇಳಬೇಕಾಗುತ್ತದೆ. ಎಷ್ಟೋ ಬಾರಿ ವಿದ್ಯಾಭ್ಯಾಸದ ಸ್ತರಗಳು ತಿಳಿಯುತ್ತಿದ್ದುದೂ ಈ ಎರಡು ಕಾವ್ಯಗಳ ಆಧಾರದ ಮೇಲೆ. "ನಿಮ್ಮ ಹುಡುಗ ಏನು ಓದಿದ್ದಾನೆ? ಎಷ್ಟನೇ ತರಗತಿಯಲ್ಲಿದ್ದಾನೆ? ಎನ್ನುವ ಬದಲು, ನಿಮ್ಮ ಹುಡುಗ ಕುಮಾರವ್ಯಾಸ ಭಾರತ, ಜೈಮಿನಿಭಾರತ ಓದಿದ್ದಾನೆಯೇ? ಎಂದು ಪ್ರಶ್ನಿಸುವ ಕಾಲವೊಂದಿತ್ತು. ವಿದ್ಯಾರ್ಹತೆ ನಿರ್ಧಾರವಾಗುತ್ತಿದ್ದುದೂ ಕೂಡ ಈ ಎರಡು ಕಾವ್ಯಗಳ ಓದುವಿನಿಂದ.. ಪ್ರತಿಹಳ್ಳಿಗಳಲ್ಲಿಯೂ ಕಾವ್ಯವಾಚನ ನಡೆಯುತ್ತಿದ್ದಿತ್ತು. ಅದಕ್ಕಾಗಿಯೇ ಗಮಕ ಕಲೆಯೇ ರೂಢಿಯಲ್ಲಿತ್ತು. ಸಾಮಾನ್ಯವಾಗಿ ಗಮಕಿಗಳು ಎಲ್ಲಾ ಊರುಗಳಲ್ಲಿಯೂ ಇರುತ್ತಿದ್ದರು.

ಪಂಪ, ರನ್ನ, ಪೊನ್ನ, ಕುಮಾರವ್ಯಾಸ, ರಾಘವಾಂಕ, ಲಕ್ಷ್ಮೀಶ ಮುಂತಾದ ಪ್ರಸಿದ್ಧ ಕವಿಗಳ ಜನಪ್ರಿಯತೆಯಿಂದ ಸಾಹಿತ್ಯದಲ್ಲಿ ಆಸಕ್ತಿ ಮೂಡಿ ವಿವಿಧ ವರ್ಗದ ಜನಸಾಮಾನ್ಯ ಜನರು ಲಿಪಿಕಾರರಿಂದ ಈ ಪ್ರಸಿದ್ಧ ಕವಿಗಳ ಕಾವ್ಯಗಳನ್ನು ಪ್ರತಿ ಮಾಡಿಸಿಕೊಂಡು ಓದುತ್ತಿದ್ದುದ್ದೇ, ಅಲ್ಲದೆ ಮನೆಯಲ್ಲಿ ಪ್ರತಿಗಳನ್ನು ಇಟ್ಟುಕೊಳ್ಳುತ್ತಿದ್ದುದು ಒಂದು ಸಂಪ್ರದಾಯವಾಗಿರುತ್ತಿತ್ತು.

ಪ್ರತಿಕಾರರು, ಲಿಪಿಕಾರರು, ಪ್ರತಿ ಎತ್ತುವವರು, ಮಸಿಕಾಯಕದವರು ಎಂಬ ಒಂದು ವೃತ್ತಿ ವರ್ಗದವರೇ ಇರುತ್ತಿದ್ದರು. ಇವರು ಊರಿಂದ ಊರಿಗೆ ವೃತ್ತಿ ಮಾಡುತ್ತಾ ಅಂದರೆ ಲಿಪಿಕಾರ, ಪ್ರತಿಕಾರ ವೃತ್ತಿಗಳನ್ನು ಅನುಸರಿಸುತ್ತಾ ಸಂಚರಿಸುತ್ತಿದ್ದರು. ಇದಕ್ಕೆ ನಿದರ್ಶನವೆಂಬಂತೆ ರಾಷ್ಟ್ರಕವಿ

ಕುವೆಂಪುರವರ 'ಮಣಿಹ' ಕೃತಿಯಲ್ಲಿರುವ 'ಸರಸ್ವತಿ ಪೂಜೆ' ಎಂಬ ಲೇಖನದಲ್ಲಿ ಅವರು ಹೇಳುವ ಈ ಮಾತುಗಳನ್ನು ಗಮನಿಸಬಹುದು. "ಅಜ್ಜಯ್ಯನ ನೇತೃತ್ವದಲ್ಲಿ ನವರಾತ್ರಿಯ ಒಂಬತ್ತು ದಿನಗಳೂ ಅಖಂಡವೆಂಬಂತೆ ನಡೆಯುತ್ತಿದ್ದ ಸರಸ್ವತಿ ಪೂಜೆ. ಅದು ನಡೆಯುತ್ತಿದ್ದುದು ನಮ್ಮ ಮನೆಯ ಉಪ್ಪರಿಗೆಯ ಮೇಲಣ ಮಳಿಗೆ ಕೋಣೆಯಲ್ಲಿ. ಯಾವ ಚಿತ್ರಪಟವಾಗಲಿ, ವಿಗ್ರಹವಾಗಲಿ, ವಾಗ್ದೇವಿಯನ್ನು ಪ್ರತಿಮಿಸುತ್ತಿರಲಿಲ್ಲ' ಪುಸ್ತಕಗಳು! ಪುಸ್ತಕಗಳು! ಮತ್ತು ಪುಸ್ತಕಗಳು!! ಮತ್ತು ನಾವು ಓದು ಬರೆಯಲು ಪ್ರಾರಂಭಿಸಿದ ಮೇಲೆ ನಮ್ಮ ಸ್ಲೇಟ್, ಬಳಪ, ಸೀಸದಕಡ್ಡಿ, ಲೇಖನಿ, ಕಾಪಿಪುಸ್ತಕ, ಕೊನೆಗೆ ಮಸಿದೌತಿ! ಪುಸ್ತಕಗಳೆಂದರೆ ನಮ್ಮ ಮನೆಯಲ್ಲಿ ಆಗ ಅಚ್ಚಾದ ಪುಸ್ತಕಗಳ ಲೈಬ್ರರಿಯಿತ್ತು. ಅವೆಲ್ಲ 'ಓಲೆಗರಿ' ಪುಸ್ತಕಗಳು! ಎರಡೋ ಮೂರೋ ದೊಡ್ಡ ದೊಡ್ಡ ಬೆತ್ತದ ಪೆಟ್ಟಿಗೆಗಳಲ್ಲಿ ತುಂಬಿ ಇಡುತ್ತಿದ್ದ ಓಲೆಗರಿ ಪುಸ್ತಕಗಳು. ರಾಮಾಯಣ, ಭಾರತ, ಜೈಮಿನಿ, ಸಹ್ಯಾದ್ರಿ ಕಾಂಡ ಇತ್ಯಾದಿ ಇತ್ಯಾದಿ ಬಹುಶಃ ಅವುಗಳೆಲ್ಲ ಕನ್ನಡಜಿಲ್ಲೆಯಿಂದ ಬಂದ ಐಗಳ ಕೈಯಿಂದ ಬಹಳ ಹಿಂದಿನಿಂದಲೂ ಬರೆಯಿಸಿದ್ದಿರಬೇಕು. ಒಂದೊಂದು ಗ್ರಂಥಕ್ಕೂ ವರುಷವೆಲ್ಲ, ಅದನ್ನು ಬರೆದು ಮುಗಿಸುವ ತನಕ, ಮನೆಯಲ್ಲಿಯೇ ಊಟ, ಬಟ್ಟೆ, ತಿಂಡಿ ಎಲ್ಲವನ್ನು ನೀಡಿ ಅದು ಮುಕ್ತಾಯವಾದಂದು ವಿಶೇಷ ಪೂಜೆ ನಡೆಸಿ ಲಿಪಿಕಾರನಿಗೆ ಕೊಡಬೇಕಾಗಿದ್ದ ಆಗಿನ ಕಾಲಕ್ಕೆ ತುಂಬಾ ದುಬಾರಿಯಾದ ನೂರೋ ಇನ್ನೂರೋ ರೂಪಾಯಿಗಳನ್ನು ಸಂತೋಷದಿಂದ ಸಂಭಾವನೆಯಾಗಿ ಕೊಟ್ಟಿರಬೇಕು"[9] ಈ ಮಾತು ಕೇಳಿದಾಗಲೇ ತಿಳಿಯುತ್ತದೆ ಹಸ್ತಪ್ರತಿ ಕಾಯಕದವರಿರುತ್ತಿದ್ದರೆಂದು ಪ್ರತಿಯೊಂದು ಹಸ್ತಪ್ರತಿಯಲ್ಲಿಯೂ ಕೊನೆಯಲ್ಲಿ ಯಾರಿಂದ ಯಾರಿಗೆ ಪ್ರತಿ ಮಾಡಲಾಯಿತೆಂಬ ವಿವರಣೆಯಿರುತ್ತದೆ.

೭. ಹಸ್ತಪ್ರತಿಗಳ ಸಂರಕ್ಷಣೆ :-

ಹಸ್ತಪ್ರತಿಗಳು ಐತಿಹಾಸಿಕ ದಾಖಲೆಗಳ ಕಣಜ. ಶತ ಶತಮಾನದ ಗತಕಾಲದ ಇತಿಹಾಸವನ್ನು ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಿರುತ್ತವೆ. ಆದ್ದರಿಂದ ಇವುಗಳ ಸಂರಕ್ಷಣೆ ಅತ್ಯಗತ್ಯವಾಗಿರುತ್ತದೆ. ಹಸ್ತಪ್ರತಿಗಳು ನಶಿಸಿ ಹೋಗದಂತೆ ಕಾಪಾಡಿಕೊಳ್ಳಬೇಕು. ತುಂಬ ಶಿಥಿಲವಾಗಿರುವ ಹಸ್ತಪ್ರತಿಯನ್ನು ಫೋಟೋ ತೆಗೆಯುವ, ಜೆರಾಕ್ಸ್ ತೆಗೆಯುವ, ಮೈಕ್ರೋಫಿಲಂ ಮಾಡುವ ವಿಧಾನಗಳಿವೆ. ಹಸ್ತಪ್ರತಿಗಳನ್ನು ಆಗಾಗ ಧೂಳು ತೆಗೆದು ಸ್ವಚ್ಛಗೊಳಿಸಬೇಕು. ಸಿಟ್ರನೆಲ್ಲಾ ಎಣ್ಣೆಯನ್ನು ಲೇಪಿಸಿ ನೆರಳಿನಲ್ಲಿ, ಗಾಳಿಯಲ್ಲಿ ಒಣಗಿಸಿ ಇಡಬೇಕು. ಕೀಟ ರಕ್ಷಣೆಗಾಗಿ ಪ್ರಧೂಮನ ಕಪಾಟನ್ನು ಬಳಸಲಾಗುತ್ತದೆ. ವಿಶಾಲವಾದ ಕೊಠಡಿಯಲ್ಲಿ ಗಾಳಿ ಬೆಳಕು ಒಂದೇ ಸಮನೆ ಇರುವಂತೆ ಮತ್ತು ಕಪಾಟುಗಳಿಗೂ ಪ್ರವೇಶಿಸುವಂತೆ ಮಾಡಿರಬೇಕು. ಜಿರಲೆ, ಬೆಳ್ಳಿಮೀನು, ಪುಸ್ತಕಕ್ರಿಮಿ, ಬೂಸ್ಟು, ಗೆದ್ದಲು ಬಾರದಂತೆ ಕೀಟನಾಶಕಗಳನ್ನು ಬಳಸಬೇಕು. ಜೀರ್ಣವಾದ ಗರಿಗಳನ್ನು ಸೂಕ್ತವಾದ ಅಂಟು,

ಟೇಪುಗಳನ್ನು ಅಂಟಿಸಿ ಯಥಾಸ್ಥಿತಿಗೆ ತರಬೇಕು. ಶಿಥಿಲಾವಸ್ಥೆಯಲ್ಲಿರುವ ಹಸ್ತಪ್ರತಿಗಳನ್ನು ಆಗಾಗ ಸಂಪ್ರತಿ ಮಾಡಿಸುತ್ತಿರಬೇಕು.

೮. ಆಕರ ಸಾಮಗ್ರಿಗಳಾಗಿ ಹಸ್ತಪ್ರತಿಗಳು :-

ಹಸ್ತಪ್ರತಿಗಳು ಒಂದು ನಾಡಿನ, ಒಂದು ದೇಶದ ಆಸ್ತಿ. ಚರಿತ್ರೆ, ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಆಡಳಿತ ವ್ಯವಸ್ಥೆ ಎಲ್ಲವೂ ಅಡಗಿರುವುದು ಹಸ್ತಪ್ರತಿಗಳಲ್ಲಿ. ಯಂತ್ರ ವಿಜ್ಞಾನವು ಕೂಡ ಹಸ್ತಪ್ರತಿಗಳಲ್ಲಿ ದೊರೆಯುತ್ತವೆ. ಈ ಎಲ್ಲಾ ವಿಷಯಗಳು ಪ್ರಾಚೀನ ಕಾಲದಲ್ಲಿ ಶಾಸನಗಳ ಮೂಲಕ ತಿಳಿಯುವುದಾದರೆ, ಮಧ್ಯಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗಳ ಮೂಲಕ ತಿಳಿಯಬಹುದು. ಆದ್ದರಿಂದ ಹಸ್ತಪ್ರತಿಗಳು ಆಕರ ಸಾಮಾಗ್ರಿಗಳ ತೊಟ್ಟಿಲು. ಇಂತಹ ಹಲವು ಶಿಸ್ತುಗಳಲ್ಲಿ ಪತ್ರವ್ಯವಹಾರಗಳು ಕೂಡ ಆಕರ ಸಾಮಾಗ್ರಿಗಳಾಗಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ.

೯. ಆಕರ ಸಾಮಾಗ್ರಿಗಳಾಗಿ ಪತ್ರ ಸಾಹಿತ್ಯ ಮತ್ತು ಅದರ ಬೆಳವಣಿಗೆ :-

ಇತಿಹಾಸ ರಚನೆಗೆ ಕಾಗದ ಪತ್ರಗಳ ಅಮೂಲ್ಯತೆಯ ಅರಿವಾದದ್ದು ಕ್ರಿ.ಶ.೧೪-೧೬ನೇ ಶತಮಾನದಲ್ಲಿ ಯೂರೋಪಿನಲ್ಲಾದ 'ರೆನೆಸಾನ್ಸ್' ಚಳುವಳಿಯ ಪರಿಣಾಮವಾಗಿ, ಇತಿಹಾಸವನ್ನು ಕ್ರಮಬದ್ಧವಾಗಿ ಹಾಗೂ ಆಧಾರಭೂತವಾಗಿ ನವೀನ, ಶಾಸ್ತ್ರ ಮಾರ್ಗದಲ್ಲಿ ಬರೆಯಲು ತೊಡಗಿದಾಗಿನಿಂದ ಎಂದು ಹೇಳಬಹುದು. ಇತಿಹಾಸ ಕಲೆ ಬಹು ಪ್ರಾಚೀನವಾದರೂ, ಪ್ರಾಕ್ತನ ವಸ್ತುಗಳ ಸಂರಕ್ಷಣೆಯಲ್ಲಿ ಶ್ರದ್ಧೆ ಹಳೆಯದಾದರೂ, ಸಾಮಾನ್ಯ ವ್ಯವಹಾರದ ಕಾಗದ ಪತ್ರಗಳ ಅಮೂಲ್ಯತೆಯನ್ನು ತಿಳಿದಿದ್ದು ಮತ್ತು ಆಸಕ್ತಿ ಹುಟ್ಟಿದ್ದು ಇತ್ತೀಚಿಗೆ. ಅಂದರೆ ಕೇವಲ ಸುಮಾರು ನೂರು ವರ್ಷಗಳ ಹಿಂದೆ ಎನ್ನಬಹುದು. ಕಾಗದ ಪತ್ರಗಳ ಅನ್ವೇಷಣೆ, ಸಂಗ್ರಹಣೆ, ಸಂರಚನೆ ಪರಿಶೋಧನೆ, ಶಾಸ್ತ್ರಮಟ್ಟಕ್ಕೇರಿತು. ಇದನ್ನೇ 'ಕಾಗದ ಪತ್ರಶಾಸ್ತ್ರ' ಅಥವಾ 'ಕಾಗದ ಪತ್ರವಿಜ್ಞಾನ. (Archival Science) ಕಾಗದ ಪತ್ರ ನಿರ್ವಹಣ ಕ್ರಮ' (Archival Administration) ಎಂದು ನಾಮಾಂಕಿತವಾಗಿದೆ. ಹದಿನಾಲ್ಕನೆ ಶತಮಾನದಿಂದೀಚಿಗೆ ಆದ ಸಾಂಸ್ಕೃತಿಕ, ವೈಜ್ಞಾನಿಕ, ಔದ್ಯೋಗಿಕ, ಆರ್ಥಿಕ ಕ್ರಾಂತಿಗಳ ಪರಿಣಾಮವಾಗಿಯೂ, ಪೂರ್ವಿಕರ ವಿಷಯದಲ್ಲಿ ಯಾವತ್ತೂ ಇವರಿಗಿದ್ದ ಹೆಚ್ಚಿನ ಶ್ರದ್ಧೆಯಿಂದಲೂ ಅಮೇರಿಕದ ಸಂಯುಕ್ತರಾಷ್ಟ್ರ, ಯೂರೋಪ್ ಇತ್ಯಾದಿ ಪ್ರಗತಿಪರ ದೇಶಗಳಲ್ಲಿ ಉಳಿದುಬಂದಿರುವ ಕಾಗದ ಪತ್ರಗಳ ಸ್ಥಿತಿ ಹಳ್ಳಿತಿಟ್ಟಲ್ಲದೆ ಸಮವಾಗಿ ಸರ್ವತೋಮುಖವಾಗಿದೆ.

ರಾಜಕೀಯ ಯುದ್ಧ ವಿಚಾರಗಳಿಗೆ ಬಹುಹೆಚ್ಚಿನ ಪ್ರಾಧಾನ್ಯವಿದ್ದರೂ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದ ಕಾಗದಗಳು ಹೇರಳವಾಗಿವೆ. ವಿಜ್ಞಾನಿಗಳ, ಸಾಹಿತಿಗಳ, ಕಲಾವಿದರ, ವಿದುಷರ ಸ್ಥಾನವೂ ಹಿರಿದಾಗಿಯೇ ಇದೆ. ಇದರಿಂದಲೇ ಆನೇಕ ದೇಶಗಳ ಇತಿಹಾಸ ಸಾರ್ವತ್ರಿಕವಾಗಿ ಸಮರ್ಪಕವಾಗಿ ಬೆಳೆಯಲು ಸಾಧ್ಯವಾಗಿದೆ[೬]

ಕಾಗದ ಪತ್ರಗಳ ಕ್ಷೇತ್ರದಲ್ಲಿ ನಮ್ಮ ದೇಶದ ಪ್ರಗತಿಯೇನೆಂಬುದನ್ನು ನೋಡಬಹುದು. ಸ್ವಾತಂತ್ರ್ಯಕ್ಕೆ ಮುಂಚೆ ಬ್ರಿಟೀಷ್‌ರಿಗೆ ಭಾರತದಲ್ಲಿ ತಮ್ಮ ಆಳ್ವಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ, ಹೆಮ್ಮೆ ಇದ್ದದ್ದು ಸ್ವಾಭಾವಿಕ. ಬ್ರಿಟನ್ನಿನ ಚರಿತ್ರೆ ಲೇಖಕರು ಈ ವಿಷಯದಲ್ಲಿ ತೋರಿಸಿದ ಕುತೂಹಲ ಆಸಕ್ತಿಗಳ ಪರಿಣಾಮವಾಗಿಯೂ ಸರಕಾರದ ಆಡಳಿತ ಸುಸೂತ್ರವಾಗಿ ನಡೆಯಲೂ ಮದರಾಸ್, ಬೊಂಬಾಯಿ, ಕಲ್ಕತ್ತ, ಡೆಲ್ಲಿ, ಈ ನಾಲ್ಕು ಜಾಗಗಳಲ್ಲಿದ್ದ ಸರಕಾರಿ ಪತ್ರಾಗಾರಗಳು ಸಾಕಷ್ಟು ವ್ಯವಸ್ಥಿತವಾಗಿಯೇ ಇದ್ದವು. ಇದರ ಜೊತೆಗೆ ಇತಿಹಾಸ ಕಲೆಯಲ್ಲಿ ಇತರ ದೇಶಗಳು ಮುಂದುವರಿದುದರ ಪ್ರಚೋದನೆಯಿಂದ ನಮ್ಮ ದೇಶದಲ್ಲೂ ಪ್ರಾಕ್ತನ ವಿಷಯಗಳ ಸಂಶೋಧನೆ ಕ್ರಮಶಃ ಹೆಚ್ಚಾಯಿತು. ಮುಖ್ಯವಾಗಿ ೨೦ನೇ ಶತಮಾನದ ಆರಂಭದಲ್ಲಿ ಮೊಗಲರ ಮರಾಠೆಯವರ ಹಿರಿಮೆಯಲ್ಲಿ ಆಸಕ್ತಿ ಹುಟ್ಟಿ ಆ ಕಾಲದ ಕಾಗದ ಪತ್ರಗಳ ಸಂಕಲನದ ಮಹತ್ಕಾರ್ಯ ಆರಂಭವಾಗಿ ಪ್ರಶಸ್ತವಾಗಿ ನಡೆಯಿತು. ಇದಕ್ಕೆ ಉದಾಹರಣೆಯಾಗಿ ಮರಾಠೆಯವರ ಬಖೈರುಗಳು, ಮೊಗಲರ 'ನಾಮೆ'ಗಳನ್ನು ನೋಡಬಹುದು.

ಕಾಗದ ಪತ್ರಗಳ ಬಗ್ಗೆ ನಿಜವಾದ ಕಾವು ಹುಟ್ಟಿದ್ದು ಸ್ವಾತಂತ್ರ್ಯದಿಂದೀಚೆಗೆ. ಇದಕ್ಕೆ ಕಾರಣ ಸರಕಾರ ಎಲ್ಲಾ ಪ್ರಾಂತ್ಯಗಳಲ್ಲೂ ಸುವ್ಯವಸ್ಥಿತ ಪತ್ರಾಗಾರಗಳನ್ನು ಏರ್ಪಡಿಸಿದ್ದು. ಸಂಶೋಧನೆಗಿದ್ದು ಹಲವಾರು ನಿರ್ಬಂಧಗಳನ್ನು, ತೊಡಕುಗಳನ್ನು ಬಗೆಹರಿಸಿದ್ದು, ಇತಿಹಾಸ ಸಂಶೋಧನೆಗೆ ಪತ್ರ ಸಾಹಿತ್ಯದ ಅಗತ್ಯ ಏನೆಂಬುದು ತಿಳಿದ ಮೇಲೆ ಪತ್ರ ಸಂಕಲನಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು. ಅನೇಕ ನ್ಯೂನತೆಗಳಿದ್ದರೂ ಸರಕಾರಿ ಕಾಗದ ಪತ್ರಗಳ ಕಾರುಬಾರು ಬಹುಮಟ್ಟಿಗೆ ಉತ್ತಮಗೊಂಡಿದೆ. ಈ ಸುಧಾರಣೆ ಖಾಸಗಿ ಸಂಘ ಸಂಸ್ಥೆಗಳಲ್ಲಿಯೂ ಹೆಚ್ಚಿ ದೊಡ್ಡ ಔದ್ಯೋಗಿಕ ಆರ್ಥಿಕ ಸಂಸ್ಥೆಗಳೂ ಚರಿತ್ರಾರ್ಹ ಕಾಗದ ಪತ್ರಗಳ ವಿಷಯದಲ್ಲಿ ಹೆಚ್ಚು ಗಮನ ಕೊಡಲು ಆರಂಭಿಸಿದ್ದಾರೆ. ಕಲ್ಕತ್ತದ ನ್ಯಾಷನಲ್ ಲೈಬ್ರರಿ ಪಟ್ನದಲ್ಲಿನ ಖುದಾಬುಕ್ ಲೈಬ್ರರಿ, ಪುಣೆಯ ಭಾರತ ಇತಿಹಾಸ ಸಂಶೋಧಕ ಮಂಡಲಿ, ಮದರಾಸಿನ ಅಡಿಯಾರ್ ಲೈಬ್ರರಿ ಮುಂತಾದ ಸಾಂಸ್ಕೃತಿಕ ಕೇಂದ್ರಗಳು ಒಳ್ಳೆಯ ಕೆಲಸ ನಡೆಸುತ್ತಿದ್ದಾರೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್‌ಮಿನಿಷ್ಟೇಷನ್, ಇನಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಮುಂತಾದ ಸಂಸ್ಥೆಗಳು ಕಾಗದ ಪತ್ರ ವಿಜ್ಞಾನದ ಮೂಲಭೂತ ತತ್ವಗಳ

ವಿಷಯದಲ್ಲೂ ಕಾರ್ಯರಂಗದಲ್ಲಿ ಬೇಕಾದ ಕಾನೂನು ಕಟ್ಟಳೆಗಳ ವಿಷಯದಲ್ಲೂ ವಿಮರ್ಶೆ ಸಂಶೋಧನೆಯನ್ನು ಕೈಗೊಂಡಿದ್ದಾರೆ.

ಇಷ್ಟೆಲ್ಲಾ ಪ್ರಗತಿ ಸಾಧಿಸಿದ್ದರೂ ವಿಜ್ಞಾನಿಗಳ, ಸಾಹಿತಿಗಳ, ಕಲಾವಿದರ. ಇತರ ವಿದ್ವಾಂಸರ ಕಾರ್ಯಕಲಾಪಕ್ಕೆ ಸಂಬಂಧಿಸಿದ ವ್ಯವಹಾರ ಪತ್ರಗಳ ಸಂಗ್ರಹಕಾರ್ಯ ಅಷ್ಟಾಗಿ ನಡೆದಿಲ್ಲ ಎಂದೇ ಹೇಳಬಹುದು. ಉದಾಹರಣೆಗೆ ಡೆಲ್ಲಿಯ ನ್ಯಾಷನಲ್ ಆರ್ಕೈವ್ಸ್‌ನಲ್ಲಿ ನಾಲ್ವರು ವಿದ್ವಾಂಸರ ಸಂಕಲನಗಳು ಮಾತ್ರ ಇವೆ ಎಂಬುದು ತಿಳಿದುಬರುತ್ತದೆ. ಅವರುಗಳ ಅರ್ಥಶಾಸ್ತ್ರಜ್ಞ ಜೆ.ಸಿ.ಕೊಯಾಜಿ, ಹಿಂದಿ ಸಾಹಿತಿಗಳಾದ ಬನಾರಸಿದಾಸ್ ಚತುರ್ವೇದಿ ಮತ್ತು ಪಿ.ಕೆ.ಮಾಳವೀಯ ಹಾಗೂ ವಿಖ್ಯಾತ ಪ್ರವಾಸಿ ಪ್ರಾಚೀನಾನ್ವೇಷಕ ರಾಹುಲ ಸಾಂಕೃತ್ಯಾಯನ.

'ಕಾಗದ ಪತ್ರ' ಎಂಬ ಶಬ್ದವು ಒಂದು ಸಾರ್ವತ್ರಿಕ ನಾಮ. ಇದರ ವ್ಯಾಪ್ತಿ ಬಹುಮಟ್ಟಿಗೆ ಕ್ಷೇತ್ರಾನುಸಾರಿ. ಪಂಡಿತವರ್ಗದ ಕಾಗದ ಪತ್ರಗಳು ಸಾಮಾನ್ಯವಾಗಿ ಈ ರೀತಿ ಇರುತ್ತವೆ.

೧. ಪ್ರಕಟಿತ ಪುಸ್ತಕಗಳು, ಬಿಡಿಲೇಖನಗಳು ಗ್ರಂಥ ವಿಮರ್ಶೆಗಳು ಪತ್ರಗಳ ಮೂಲಕ ಚರ್ಚೆಗಳಾಗಿರುತ್ತವೆ. ಇದಕ್ಕೆ ಉದಾಹರಣೆಯಾಗಿ ಫ.ಗು.ಹಳಕಟ್ಟಿಯವರೊಂದಿಗೆ ಎಸ್.ಮಲ್ಲಪ್ಪನವರ ಪತ್ರಗಳು. ಅಲ್ಲದೆ ಮಾಸ್ತಿ, ಡಿ.ವಿ.ಜಿ ಮುಂತಾದ ಸಾಹಿತಿಗಳ ಸಾಹಿತ್ಯ ವಿಮರ್ಶೆ ಚರ್ಚೆಗಳನ್ನು ನೋಡಬಹುದು.

೨. ಡಾ.ಎಸ್.ವಿ.ದೇಶಿಕಾಚಾರ್ 'ಮಣಿಹ'ದಲ್ಲಿ ಬರೆದಿರುವ ಚರಿತ್ರಾರ್ಹ ಕಾಗದ ಪತ್ರಗಳ ಅನ್ವೇಷಣೆ, ಸಂಕಲನ ಪಾಲನೆಗಳಲ್ಲಿ ವರುಷ ವರ್ಗ ಎಂಬ ಲೇಖನದಲ್ಲಿ ಸೂಚಿಸಿರುವಂತೆ ಪುಸ್ತಕ, ಲೇಖನ, ಗ್ರಂಥ ವಿಮರ್ಶೆಗಳ ಅಸಲು ಹಸ್ತಪ್ರತಿಗಳು.

೩. ಅಪ್ರಕಟಿತ ಪೂರ್ಣ ಅಥವಾ ಅಪೂರ್ಣ ಗ್ರಂಥಾದಿಗಳು

೪. ಸಂಶೋಧನೆಯ ಅಂಗವಾಗಿ ಬರೆದಿಟ್ಟುಕೊಂಡ ಉದ್ಧೃತ ಅಥವಾ ಸಾರಾಂಶಾದಿಗಳು.

೫. ಸಹೋದ್ಯೋಗಿಗಳೊಡನೆ, ಸಹೃದಯರೊಡನೆ, ಮಿತ್ರರೊಡನೆ, ಬಂಧುವರ್ಗದವರೊಡನೆ ಅಥವಾ ಉದ್ಯೋಗಕ್ಕೆ ಸಂಬಂಧವಾಗಿ ನಡೆದ ಪತ್ರವ್ಯವಹಾರ.

೬. ಸಂಶೋಧನೆಗೆ ಸಹಾಯಕವಾಗಿ ಶೇಖರಿಸಿ ಇಟ್ಟುಕೊಂಡಿದ್ದ ಯಾಂತ್ರಿಕ ಸಾಧನಗಳು, ಪುಸ್ತಕಗಳು ಇತ್ಯಾದಿ.

೭. ದಿನಚರಿ ಪಟ್ಟಿ, ಲೆಕ್ಕದ ಪುಸ್ತಕ ಮುಂತಾದವುಗಳು ಕಂಡುಬರುತ್ತವೆ.

ಲೆಕ್ಕ ಪತ್ರಗಳ ಉದಾಹರಣೆಗಾಗಿ 'ನಿರೂಪ'ಗಳನ್ನು ನೋಡಬಹುದು.

ಒಟ್ಟಾರೆ ಹಸ್ತಪ್ರತಿಗಳಲ್ಲಿರುವ ಪತ್ರಸಾಹಿತ್ಯವನ್ನು ನಮ್ಮ ಕನ್ನಡ ಭಾಷೆಯಲ್ಲಿ ಯಥೇಚ್ಛವಾಗಿ ದೊರಕುವುದರಿಂದ ಇವುಗಳ ಸುವ್ಯವಸ್ಥಿತ ಅಧ್ಯಯನ ನಡೆಯಬೇಕಾಗಿದೆ. ಏಕೆಂದರೆ ಈ ಹಸ್ತಪ್ರತಿ ಪತ್ರಗಳು ದಾಖಲೆ ಸಾಹಿತ್ಯದ ವ್ಯಾಪ್ತಿಯಲ್ಲಿ ಬರುವುದು ಗಮನಾರ್ಹ ಸಂಗತಿ. ಇವುಗಳಲ್ಲಿ ಕಂಡುಬರುವ ಸಾಂಸ್ಕೃತಿಕ, ಸಾಹಿತ್ಯಕ ದೃಷ್ಟಿಕೋನವುಳ್ಳ ಹಸ್ತಪ್ರತಿಗಳಂತೂ ಅತ್ಯಮೂಲ್ಯವಾದುವು.

ಅಡಿ ಟಿಪ್ಪಣಿಗಳು

೧. ಹಸ್ತಪ್ರತಿಶಾಸ್ತ್ರ ವಿವೇಚನೆ : ಪಾ.ಗೀತಾಚಾರ್ಯ

೨. ಕನ್ನಡ ಹಸ್ತಪ್ರತಿಶಾಸ್ತ್ರ : ಡಾ.ಎಂ.ಎಂ.ಕಲಬುರ್ಗಿ

೩. ಕನ್ನಡ ಹಸ್ತಪ್ರತಿಶಾಸ್ತ್ರ ವಿವೇಚನೆ : ಡಾ.ಎಂ.ಎಂ.ಕಲಬುರ್ಗಿ ಮತ್ತು ಪಾ.ಗೀತಾಚಾರ್ಯ

೪. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ಪಾ.ಗೀತಾಚಾರ್ಯ

೫. ಮಣಿಪ : ಸಂ. ಪ್ರೊ.ಎಂ.ವಿ.ಸೀತಾರಾಮಯ್ಯ ಮತ್ತು ಆರ್.ಶೇಷಶಾಸ್ತ್ರೀ,
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ.

೬. ಮಣಿಪ : ಲೇಖನ : ಡಾ.ಎಸ್.ವಿ.ದೇಶಿಕಾಚಾರ್ ಸಂ. ಪ್ರೊ.ಎಂ.ವಿ.ಸೀತಾರಾಮಯ್ಯ ಮತ್ತು ಆರ್.ಶೇಷಶಾಸ್ತ್ರೀ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

ಅಧ್ಯಾಯ – ೩

ಕನ್ನಡ ಹಸ್ತಪ್ರತಿ ಪತ್ರಗಳ ಸ್ವರೂಪ

ಇತಿಹಾಸಕಾರನಿಗೆ ಇತಿಹಾಸ ಕೃತಿ ರಚನೆ ಮಾಡಲು ಸ್ಪಷ್ಟ ಮಾಹಿತಿ ಒದಗಿಸುವುವೆಂದರೆ ಒಂದನೆಯದಾಗಿ ಶಾಸನಗಳು, ಎರಡನೆಯದಾಗಿ ನಾಣ್ಯಗಳು ಮತ್ತು ಮೂರನೆಯದಾಗಿ ಹಸ್ತಪ್ರತಿಗಳು.

ಈ ಹಸ್ತಪ್ರತಿಗಳಲ್ಲಿ ದಾಖಲೆ ಸಾಹಿತ್ಯವೆಂದು ಕರೆಯಿಸಿಕೊಳ್ಳುವ ದಾಖಲೆ ಪತ್ರಗಳು, ಕೈಫಿಯತ್ತುಗಳು, ಬಖೈರುಗಳು ಇತಿಹಾಸ ರಚನೆಗೆ ಪ್ರಮುಖ ಆಕರಗಳಾಗುತ್ತವೆ.

ಪ್ರಸ್ತುತ ದಾಖಲೆ ಪತ್ರಗಳು ಎಂದರೆ ಯಾವುದು? ಮತ್ತು ಅವುಗಳ ಸ್ವರೂಪವನ್ನು ತಿಳಿಯಬೇಕಾಗುತ್ತದೆ. ಅದರಲ್ಲಿಯೂ ಹಸ್ತಪ್ರತಿರೂಪದಲ್ಲಿ ದೊರಕುವಂತಹ ದಾಖಲೆ ಪತ್ರಗಳನ್ನು ನೋಡುವುದು ಇಲ್ಲಿ ಬಹುಮುಖ್ಯ ವಿಷಯ.

ನಾಮೆಗಳು, ಸನದುಗಳು, ನಿರೂಪಗಳು ಮುಂತಾಗಿ ದಾಖಲೆ ಪತ್ರಗಳನ್ನು ಗುರುತಿಸಬಹುದು. ಇವುಗಳು ಭಾಷೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ವಿಷಯಗಳ ದೃಷ್ಟಿಯಿಂದ ವಿಶಿಷ್ಟವಾದ ಪಾತ್ರವಹಿಸುತ್ತವೆ.

ಈ ದಾಖಲೆ ಪತ್ರಗಳು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ವ್ಯವಹಾರಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ. ದಾಖಲೆ ಪತ್ರಗಳ ಸ್ವರೂಪ ಹೇಗಿರುತ್ತದೆ ಎಂಬುದಕ್ಕೆ "ಡಾ.ಬಿ.ಆರ್.ಹಿರೇಮಠರವರು ಸಂಗ್ರಹಿಸಿರುವ ಹತ್ತೊಂಬತ್ತನೆಯ ಶತಮಾನದ ಎರಡು ದಾಖಲೆ" ಗಳನ್ನು ನೋಡಿದರೆ ಅರ್ಥವಾದೀತು.

೧. ದಾಖಲೆ ಒಂದು 'ಜಾಹಿರ್‌ನಾಮೆ ಪತ್ರ'[೧] :

ಇದು ಧಾರವಾಡ ಜಿಲ್ಲೆಯ ಮ್ಯಾಜಿಸ್ಟ್ರೇಟ್‌ರಾದ ಜಿ.ಎಸ್.ಅಂಡ್ ಸಾಹೇಬರು ೧೮೫೨ನೆಯ ಇಸ್ವಿಯಲ್ಲಿ ಪೋಲಿಸ್ ಸಿಬ್ಬಂದಿಯವರಿಗೆ ಫೌಜವಾರಿ ಅದಾಲತಿನ ಸರ್ಕ್ಯುಲರ್ ನಂ.೫೩೬/೧೭–೨–೧೮೫೨ರ ಪ್ರಕಾರ ಹೊರಡಿಸಿದ 'ಜಾಹಿರನಾಮೆಯಾಗಿದೆ'. ೧೬ ಸಾಲಿನ ಈ ಜಾಹಿರನಾಮೆಯನ್ನು ಕಾಗದದಲ್ಲಿ ಮಸಿಯಿಂದ ಬರೆಯಲಾಗಿದೆ. "ಧಾರವಾಡ ಮಾಜಿಸ್ಟ್ರೇಟ್" ಅವರ ಅಧಿಕೃತ ಮುದ್ರೆ, ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿರುತ್ತದೆ. ಜಾಹಿರನಾಮೆಯ ಅಂತ್ಯದಲ್ಲಿ ಇದನ್ನು ಹೊರಡಿಸಿದ ದಿನಾಂಕ, ತಿಂಗಳು ಹಾಗೂ ಇಸ್ವಿಯನ್ನು ಸೂಚಿಸಲಾಗಿದೆ. ಇದರ ತರುವಾಯ ಮ್ಯಾಜಿಸ್ಟ್ರೇಟ್‌ರವರ ಸ್ವಹಸ್ತಾಕ್ಷರದ ಸಹಿ ಇದೆ. ಎಲ್ಲಕ್ಕೂ ಕೊನೆಗೆ ಈ ದಾಖಲೆ ಮುದ್ರಿತವಾದ ಸ್ಥಳವನ್ನು

"ಧಾರವಾಡದಲ್ಲಿ ಸುಪರಿಂಟೆಂಡೆಂಟ್ ರಿವಿಸಿಯೂ, ಸರ್ವೇ ಕಛೇರಿಯಲ್ಲಿ ಛ್ಯಾಪಿಸಿದ್ದು" ಎಂದು ನಮೂದಿಸಲಾಗಿದೆ.

ಇದೊಂದು 'ಫೌಜವಾರಿ ಜಾಹಿರನಾಮೆ' ಪತ್ರವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಫೌಜವಾರಿ ಪತ್ರಗಳು ಸಾಮಾನ್ಯವಾಗಿ ಪೋಲಿಸ್ ಅಧಿಕಾರಿವಲಯದಿಂದ ಹೊರಡಿಸುವ ಪತ್ರಗಳಾಗಿರುತ್ತವೆ. ಗ್ರಾಮಗಳಲ್ಲಿ ನಡೆದ ಅಪರಾಧಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿರುತ್ತದೆ. ನಂತರ ಅಪರಾಧಿಗಳನ್ನು ಸರಕಾರದ ವಶಕ್ಕೆ ಒಪ್ಪಿಸುವುದು. ಇವು ಆಂಗ್ಲರ ಕಾಲದ ಪೋಲಿಸ್‌ಪಾಟೀಲರ ಕರ್ತವ್ಯಗಳಾಗಿದ್ದವು. ಬಹುಶಃ ಇಂದು ಕರೆಯುವ ಪಾಟೀಲರು ಎಂದರೆ ಫೌಜುದಾರರು ಎಂದರೆ ಆಂಗ್ಲರ ಕಾಲದ ಪೋಲಿಸರು ಎಂದು ತಿಳಿಯುತ್ತದೆ.

ಈ ದಾಖಲೆಯಲ್ಲಿ ಪೋಲಿಸ್ ಪಾಟೀಲರು ಗ್ರಾಮಾಡಳಿತದಲ್ಲಿ ವಹಿಸುತ್ತಿದ್ದ ಪ್ರಮುಖ ಪಾತ್ರದ ಪರಿಚಯವಾಗುತ್ತದೆ. ಕೆಲವು ಜನ ಪೋಲಿಸ್ ಪಾಟೀಲರು ತಮ್ಮ ಅಧಿಕಾರದ ಬಲದಿಂದ ಗ್ರಾಮೀಣ ಅಪರಾಧಿಗಳಿಗೆ ಹಲವು ರೀತಿಯಲ್ಲಿ ಆಸೆ ಆಮಿಷಗಳನ್ನು ತೋರಿಸಿ, ಮಾಡದ ತಪ್ಪನ್ನು ಒಪ್ಪಿಕೊಳ್ಳೂವಂತೆ ಒತ್ತಾಯಿಸುತ್ತಿದ್ದರು. ಅಪರಾಧಿಗಳು ಒಂದು ವೇಳೆ ತಪ್ಪನ್ನು ಒಪ್ಪಿಕೊಂಡರೆ ಸರಕಾರದಿಂದ ಇನಾಮು ದೊರೆಯುವುದೆಂದು ಕಡಿಮೆ ಶಿಕ್ಷೆ ಲಭಿಸುವುದೆಂದೂ ನಂಬಿಸಿ, ಅವರಿಂದ ತಪ್ಪೊಪ್ಪಿಗೆ ಪಡೆಯುತ್ತಿದ್ದರು. ಇಂತಹ ಹಲವಾರು ಪ್ರಕರಣಗಳು ಬ್ರಿಟೀಷ್ ಸರಕಾರದ ಗಮನಕ್ಕೆ ಬರುತ್ತಿದ್ದವು. ಆದುದರಿಂದ ಪೋಲಿಸ್ ಪಾಟೀಲರೂ ಒತ್ತಾಯ ಪೂರ್ವಕವಾಗಿ ಆಸೆ, ಆಮಿಷಗಳಿಂದ ಕೈದಿಗಳನ್ನು ವಂಚಿಸಿ, ತಪ್ಪೊಪ್ಪಿಗೆ ಪಡೆಯಬಾರದು ಇದು ಕಾಯಿದೆಗೆ ವಿರುದ್ಧವಾದುದೆಂದು ಹೇಳಿ ಇಂಥ ಪ್ರಕರಣಗಳು ನಡೆಯದಂತೆ ಕಟ್ಟುನಿಟ್ಟಾಗಿ ಆಜ್ಞೆ ಹೊರಡಿಸುತ್ತಿದ್ದರು. ಇಂತಹ ಆಜ್ಞೆಗಳನ್ನೇ 'ಜಾಹಿರನಾಮೆ'ಗಳೆಂದು ಕರೆಯುತ್ತಿದ್ದರು. ಇಲ್ಲಿ ಅಧಿಕಾರದ ದುರುಪಯೋಗ ಹಾಗೂ ಅಪರಾಧಿಗಳ ಕೈದಿಗಳ ರಕ್ಷಣೆಯ ಬಗೆಗೆ ಆಂಗ್ಲರು ಹೊಂದಿದ್ದ ಎಚ್ಚರ, ಕಾಳಜಿಗಳನ್ನು ನಾವು ಸ್ಪಷ್ಟವಾಗಿ ಗುರುತಿಸುತ್ತೇವೆ.

ಇದರಿಂದ ೧೯ನೆಯ ಶತಮಾನದ ಗ್ರಾಮಾಡಳಿತ ಪದ್ಧತಿ, ಪೋಲಿಸ್ ಪಾಟೀಲರ ಅಧಿಕಾರ ಹಾಗೂ ಕರ್ತವ್ಯ, ಅಧಿಕಾರ ದುರುಪಯೋಗ, ಸರಕಾರದ ಮೇಲ್ವಿಚಾರಣೆ, ಅಪರಾಧಿ ಕೈದಿಗಳ ರಕ್ಷಣೆ, ಧಾರವಾಡ ಜಿಲ್ಲೆಯ ಮ್ಯಾಜಿಸ್ಟ್ರೇಟ್‌ರ ಹೆಸರು, ಪ್ರಕಟಣೆ ಹೊರಡಿಸಿದ ಮಿತಿ, ಮುದ್ರಣ ಸ್ಥಳ ಮೊದಲಾದ ಮಹತ್ವದ ಸಂಗತಿಗಳು ತಿಳಿದುಬರುತ್ತದೆ.

ಈ ದಾಖಲೆಯ ಪೂರ್ಣಪಾಠ ಕೆಳಗಿನಂತಿದೆ.

೧. "ನೇ ಸಾಲು – ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಂಜ.ಜ್ಯಾ
೨. ನ ಸದರ ಲಂಡಲಾ ಸಾಹೇಬರವರು
೩. ಜಾಹಿರನಾಮಾ ಯಾವತ್ತೂ ಪೋಲ್ಸಿಕಾಮದಾರ ಜನರಿಗೆ ತಿಳಿ
೪. ಯ ತಕ್ಕ ಬಗ್ಗೆ ಪ್ರಕಟ ಮಾಡುವದೇನಂದರೆ – ಸದರ ಪವುಜದಾ
೫. ರಿ ಅದಾಲತಿನ ಸರಕೀಲರ ನಂಬರು ೫೩೬ ತಾರೀಖು ೧೭ ಪೆಬರಿ
೬. ವರಿ ಸಂನ ೧೮೫೨ಯಿಸವೀದು ಪರಾಂಮ್ಮರಿಶಿ ತಿಳಿಯ ಪ
೭. ಡಸುವದೇನೆಂದರೆ ಪೋಲ್ಸಿಪಾಟೀಲ ಜನರು ಕೈದೇರಿಗೆ ಗುನ
೮. ಹೆದ ಕಬುಲು ಆಗುವದರ ದಶಿಯಿಂದಾ ಅವರಿಗೆ ಯೇನಾದರೂ
೯. ಆಶಾ ತೋರಸತಾರೆ ಮತ್ತು ಕಬುಲು ಮಾಡಿದರೆ ನಿಂಮ್ಮಗೆ ಕಡಿ
೧೦. ಯಿ ಶಿಕ್ಷಾ ದೊರದೀತು. ಅಥವಾ ಸರಕಾರದಾದಾ ಯಿನಾಮು
೧೧. ಶಿಕ್ಕೀತು ಅಂತಾ ಹಾಂಗೂ ಕೆಲವ ಜನರು ಜಬರಿಯಿಂದಾ ಕಬು
೧೨. ಲು ಮಾಡಿಸತಾರೆ ಅಂತಾ ಜಾಹಿರನಲ್ಲಿ ಬರತದೆ. ಆದರೆ ಯಿಂ
೧೩. ಥಾ ತರಹೆದಿಂದಾ ಕೈದಿ ಜನರ ಕಡಿಂದಾ ಕಬುಲು ಮಾಡಸಬಾ
೧೪. ರದು ಯಿದು ಕಾಯಿದೇಕ್ಕ ಬಾಹಾಳ ವಿರುಧವದೆ ಛಂದಾಗಿ
೧೫. ತಿಳಕೊಂಡು ಯಿದರಂತೆ ಅಮಲಿನಲ್ಲಿ ತರಬೇಕು ತಾರೀಖು ೨೫
೧೬. ಮಾಹೆ ಮಾರ್ಚ ಸಂನ ೧೮೫೨ ಯಿಸವಿ"[2]

J.S.Land
Magistrate.

ಈ ಒಂದನೇ ದಾಖಲೆಯಿಂದ ನಾವು ಮುಖ್ಯವಾಗಿ ಗಮನಿಸತಕ್ಕದ್ದು 'ಫೌಜವಾರಿ ಜಾಹಿರನಾಮ' ಎಂದ ಕೂಡಲೇ ಇದೊಂದು 'ನಾಮೆ' ಚಾರಿತ್ರಿಕ ದಾಖಲೆ ಪತ್ರ ಎಂದು ಗೊತ್ತಾಗುತ್ತದೆ. ಇದರಲ್ಲಿ ಜಾಹಿರನಾಮಾ, ಕಾಮದಾರ, ಸದರ, ಫೌಜವಾರಿ, ಅದಾಲತ್, ಇನಾಮು, ಅಮಲಿನಲ್ಲಿ ಮುಂತಾದ ಆಡಳಿತ ಪಾರಿಭಾಷಿಕ ಪದಗಳೂ, ಗುನ್ಹೆ, ಕಬುಲು, ದಶಿಂದ, ಜಬರಿಂದ, ಕೈದಿಜನರು, ಕಡಿಂದ ಮೊದಲಾದ ಪ್ರಾದೇಶಿಕ ಭಾಷಾ ಪದಗಳು ತಿಳಿಯುತ್ತದೆ. ಹೀಗೆ ಹಲವಾರು ಉಪಯುಕ್ತ ಮಾಹಿತಿಗಳನ್ನು ಒದಗಿಸುವ ಈ ದಾಖಲೆ ಅತ್ಯಂತ ಮಹತ್ವ ಪೂರ್ಣವಾದುದಾಗಿದೆ.

೨. ಇಸ್ತಿಹಾರ್ ಪತ್ರ: ಒಂದು ದಾಖಲೆ :-

ಇಸ್ತಿಹಾರವೆಂದರೆ 'ಪ್ರಕಟನೆ' ಎಂದರ್ಥ. ಅಂದರೆ ಇದೊಂದು ಪ್ರಕಟನೆ ಮಾದರಿ ಪತ್ರವಾಗಿದೆ. ಈ ಪತ್ರದ ವಿವರ ಏನೆಂದರೆ ಅಲಿಜಾ ಗವ್ಹರ್ನರ್ ಸಾಹೇಬ ಬಹಾದ್ದೂರ ಇನ್ ಕೌನ್ಸಿಲ್ ಇವರ ಹುಕುಮಿನ ಮೇರೆಗೆ ಜೆ.ನ್ಯುಜಂಟ್ ಅವರು ಮುಂಬಯಿಯಿಂದ ೨೪ ಫೆಬ್ರವರಿ ೧೮೮೦ರಂದು ಹೊರಡಿಸಿದ 'ಇಸ್ತಿಹಾರ' ಅಥವಾ 'ಪ್ರಕಟಣೆ'[3].

ಈ ಇಸ್ತಿಹಾರ ಪತ್ರದಲ್ಲಿ ಒಟ್ಟು ಇಪ್ಪತ್ತು ಸಾಲುಗಳಿದ್ದು ಆರಂಭದಲ್ಲಿ 'ಇಸ್ತಿಯಾರು' ಎಂದು ದೊಡ್ಡ ಅಕ್ಷರದಲ್ಲಿ ಬರೆಯಲಾಗಿದೆ. ಈ ದಾಖಲೆಯನ್ನು ಮಸಿಯಿಂದ ಕಾಗದಲ್ಲಿ ಬರೆಯಲಾಗಿದ್ದು, ಅಕ್ಷರಗಳು ಗಾತ್ರದಲ್ಲಿ ದೊಡ್ಡವಾಗಿರುತ್ತವೆ. ದಾಖಲೆಯ ಕೊನೆಗೆ ಒಂದು ಕಡೆ (ಬಲಭಾಗದಲ್ಲಿ) 'ಅಲಿಜಾ ಗವರನರ ಸಾಹೇಬ ಬಹದ್ದೂರ ಇನ್ ಕೌನ್ಸಲ್ಲ್ ಇವರ ಹುಕುಮಿನ ಮೇಲಿಂದ (ಸಹಿ) ಜೆ.ನ್ಯುಜಂಟ್, ಆಕ್ಟಿಂಗ್ ಸೆಕ್ರೆಟರಿ ನಿಸಬತ್ ಸರಕಾರ' ಎಂದೂ ಇನ್ನೊಂದು ಕಡೆ (ಎಡಭಾಗದಲ್ಲಿ) 'ಮುಕ್ಕಾಮ ಜಂಜಿರೆ ಮುಂಬಯಿ, ತಾರೀಖ ೨೪ ಫೆಬ್ರವರಿ ಸನ್ ೧೮೮೦' ಎಂದೂ ನಮೂದಿಸಲಾಗಿದೆ. ಈ ದಾಖಲೆಯ ನಂಬರು ೯೮೩ ಎಂದೂ ಎಸ್.ಪಿ.ಪಂಡಿತ ಸರಕಾರದ ಭಾಷಾಂತರಕಾರರೆಂಬುದನ್ನು ಇದರಲ್ಲಿ ದಾಖಲಿಸಲಾಗಿದೆ.

ಯಾವುದೋ ಕಾರಣದಿಂದ ಇಲ್ಲವೆ ವಿನಾಕಾರಣದಿಂದ ಜನರು ನಾಣ್ಯಗಳನ್ನು ಅನೇಕ ರೀತಿಯಿಂದ ಕೆಡಿಸುತ್ತಿದ್ದರು. ನಾಣ್ಯಗಳನ್ನು ಕುರಿತ ಜನರ ಈ ವರ್ತನೆಯನ್ನು ಗಮನಿಸಿದ ಬ್ರಿಟೀಷ್‌ರ ಸರಕಾರ ಕಟ್ಟು ಮಾಡಿದ ಅಥವಾ ಗುರುತು ಮಾಡಿದ ಇಲ್ಲವೇ ಬೇರೆ ರೀತಿಯಿಂದ ಕೆಡಿಸಿದ ನಾಣ್ಯಗಳನ್ನು ಸರಕಾರಿ ಖಜಾನೆಯಲ್ಲಿ ಸ್ವೀಕರಿಸಿದಂತೆ ಆಜ್ಞೆ ಹೊರಡಿಸಿತು.

ಈ ಆಜ್ಞೆಯೇ ಇಸ್ತಿಹಾರ ರೂಪದಲ್ಲಿ ಪ್ರಕಟವಾಯಿತು. ೧೮೮೦ ಜುಲೈ ೩೧ರವರೆಗೆ ಕೆಡಿಸಿದ ಪೂರ್ಣಾಕ್ಷರದ ನಾಣ್ಯಗಳನ್ನು ಮಾತ್ರ ಸರಕಾರದ ಯಾವುದೇ ಖಜಾನೆಯಲ್ಲಿ ಸ್ವೀಕರಿಸಿ, ಇವುಗಳಿಗೆ ಪ್ರತಿಯಾಗಿ ಸರಕಾರದ ಅಧಿಕೃತ ನಾಣ್ಯಗಳಣ್ನು ಪಡೆಯಲು ಅವಕಾಶವಿದ್ದಿತು. ಇದು ಬ್ರಿಟೀಷ್ ಸರಕಾರ ಜನರಿಗೆ ನೀಡಿದ ವಿನಾಯಿತಿಯಾಗಿದೆ. ಹಚ್ಚಾದ ನಾಣ್ಯಗಳು ಒಂದು ವೇಳೆ ಸವಕಳಿ ಹೊಂದಿದ್ದರೆ, ಪ್ರತಿ ತೊಲಿಗೆ ಒಂದು ರೂಪಾಯಿ ಮಾತ್ರ ಆಕರಿಸುತ್ತಿದ್ದರು. ಆದರೆ ೧ ಆಗಸ್ಟ್ ೧೮೮೦ರಿಂದ ಹಾಗೂ ನಂತರ ಇಂಥ ಕುಲಗೆಟ್ಟ ನಾಣ್ಯಗಳನ್ನು ಜನರು ಖಜಾನೆಗೆ ಸಂದಾಯ ಮಾಡಲು ಸರಕಾರ ಅನುಮತಿಯನ್ನು ನಿರಾಕರಿಸುತ್ತಿದ್ದರು. ಇಷ್ಟೇ ಅಲ್ಲ ಇಂಥ ನಾಣ್ಯಗಳನ್ನು ಜನರು ಖಜಾನೆಗೆ ತುಂಬಲು ಬಂದರೆ ಅಧಿಕಾರಿಗಳು ಅವುಗಳನ್ನು ಸ್ವೀಕರಿಸದೆ, ಕಡಿದು ತಿರುಗಿ ಕೊಡಬೇಕೆಂಬ ಆದೇಶವನ್ನು ಸರಕಾರ ನೀಡಿದ್ದಿತು. ಹೀಗೆ "ನಾಣ್ಯಗಳನ್ನು ಕೆಡಿಸುವ ಜನರ ವಿರುದ್ಧ ಸರಕಾರ

ನಿರ್ದಾಕ್ಷಿಣ್ಯವಾಗಿ ಕಠೋರ ಕ್ರಮಗಳನ್ನು ಕೈಗೊಳ್ಳುತ್ತಿತ್ತು ಎಂಬುದು ಇದರಿಂದ ಗೊತ್ತಾಗುತ್ತದೆ ಇದಕ್ಕೆ ಸಂಬಂಧಿಸಿದ ಹಸ್ತಪ್ರತಿ ಈ ರೀತಿ ಇದೆ[೪]

೧. ಇದರ ಮೂಲವಾಗಿ ಜಾಹಿರು ಮಾಡುವದೇನೆಂದರೆ, ಕಚ್ಚು
೨. ಹಾಕುವ ಅಥವಾ ಗುರ್ತ ಮಾಡುವ ಅಥವಾ ಯರಡ್ನೆ ರೀತಿಯಿಂದ
೩. ನಾಣ್ಯವನ್ನು ಕೆಡಿಸುವ ನಡತಿ ಇರುವದ್ದರಿಂದ ಅಂಥಾ ನಾಣ್ಯವು
೪. ಹಣದ ಭರಣಾ ಮಾಡುವದರಲ್ಲಿ ತಂದರೆ ಅದನ್ನು ತೆಗೆದುಕೊಂಬು
೫. ವದಿಲ್ಲೆಂದು ಹೇಳುವುದಕ್ಕೆ ಬಂದೀತು. ಮತ್ತು ಸನ್ ೧೮೮೦ನೇ ಇಸ
೬. ವಿಯ ಆಗಸ್ಟ ತಿಂಗಳ ವೊಂದನೇ ತಾರೀಖಿನ ಲಾಗಾಯಿತು
೭. ಮತ್ತು ಆ ತಾರೀಖಿನ ನಂತರಾ ಸರಕಾರದ ಬೇಡುವಿಕೆಗಳ
೮. ನ್ನು ಕೊಡುವುದರಲ್ಲಿ ಇಂಥಾ ನಾಣ್ಯವನ್ನು ತೆಗೆದುಕೊಂಬುವರ
೯. ಕ್ಕೆ ಇಲ್ಲೇನಬೇಕು. ಹೀಂಗೆ ಸರಕಾರದ ಇರಾದೆ ಅದೆ
೧೦. ಬರುವ ಜುಲೈ ತಿಂಗಳ ೧ನೇ ತಾರೀಖಿನ ವರೆಗೆ ಇಂಥಾ
೧೧. ಕೆಡಿಸಿದ ಪೂರಾತೂಕದ ಯಲ್ಲಾ ನಾಣ್ಯವು ಯಾವದಾದರೂ
೧೨. ಸರಕಾರದ ಟ್ರೆಷರಿಯಲ್ಲಿ ತೆಗೆದುಕೊಂಡು ಅದರ ಬದಲು
೧೩. ಕಾಯಿದೆ ಸಿರವಾದ ನಾಣ್ಯವು ಅಡ್ಡಿ ಹೇಳದಲೆ ಕೊಡುವದ
೧೪. ರಲ್ಲಿ ಬಂದೀತು. ಯಾವ ಕೆಡಿಸಿದ ನಾಣ್ಯವು ಯೋಗ್ಯವಾಗಿ ಸರಿ
೧೫. ವಿಯದಲೆ ಯರಡ್ನೆ ರೀತಿಯಿಂದ ನೂರಕ್ಕೆ ಯರಡು ರೂಪಾಯಿ
೧೬. ದಕಿಂತಾ ಕಡಿಮೆ ತೂಕದಲ್ಲಿ ಕಮ್ಮಿ ಬಂದರೆ ೨ ನಾಣ್ಯವುದರ ತೂ
೧೭. ಲಿಗೆವೊಂದು ರೂಪಾಯಿಯಂತೆ ತೆಗೆದುಕೊಂಬುವದರಲ್ಲಿ ಬಂ
೧೮. ದೀತು, ಪರಂತು ಬರುವ ಆಗಸ್ಟ ತಿಂಗಳ ವೊಂದನೇ ತಾರೀಖುನಿಂ
೧೯. ದ ಇಂಥಾ ನಾಣ್ಯಗಳು ಕೊಡಲಿಕ್ಕೆ ಬಂದವರಿಗೆ ಅವುಗಳನ್ನು ಕಡಿ
೨೦. ದು ತಿರಿಗಿ ಕೊಡುವುದರಲ್ಲಿ ಬಂದಾವು.

ಮಕ್ಕಾಮ : ಜಂಜಿರೆ ಮುಂಬಯಿ

ತಾರೀಖು ೨೪ ಫೆಬ್ರವರಿ

ಸನ್.೧೮೮೦

ಅಲಿಜಾಗವರನರ ಸಾಹೇಬ ಬಹದ್ದೂರಕೌನಸಲ್ಲ
ಇವರ ಹುಕುಮಿನ ಮೇಲಿಂದ
(ಸಹಿ) ಜೆ.ನ್ಯುಂಜಂಟ
ಆಕ್ಟಿಂಗ್ ಸೆಕ್ರೆಟರಿ ನಿಸಬತ ಸರಕಾರ
S.P.PANDIT
Oriental Translator to Government

ಈ ದಾಖಲೆಯಲ್ಲಿ ಬರುವ ಜಾಹಿರ, ಭರಣಾ, ಲಾಗಾಯಿತ, ಇರಾದೆ, ಹುಕುಮ, ಕಾಯಿದೆಸಿರ, ಪರಂತು ಮೊದಲಾದ ಆಡಳಿತ ಪಾರಿಭಾಷಿಕ ಪದಗಳನ್ನು ಎರಡ್ನೆ, ನಡತಿ, ಬಂದೀತು, ಸಂವಿಯದಲೆ, ಕಮ್ಮಿ, ಬಂದಾವು, ತಿರಿಗಿ ತೆಗಿದುಕೊಂಬುವದು ಮುಂತಾದ ಪ್ರಾದೇಶಿಕ ಆಡುನುಡಿಗಳನ್ನು ಲಕ್ಷಿಸಬೇಕು. ಹೀಗೆ ಈ ಎರಡನೆಯ ದಾಖಲೆ ಬ್ರಿಟೀಷರ ಕಾಲದ ಚಲಾವಣಾ ನಾಣ್ಯವನ್ನು ಕುರಿತು ಮಹತ್ವದ ವಿಷಯವನ್ನು ತಿಳಿಸಿಕೊಡುತ್ತದೆ.

ಇದೇ ರೀತಿ ಮಠಗಳು ಹಾಗೂ ರಾಜಮಹಾರಾಜರುಗಳ ನಡುವಿನ ವ್ಯವಹಾರ ಪತ್ರಗಳ ಸ್ವರೂಪಗಳು ಇನ್ನೂ ವಿಭಿನ್ನವಾಗಿರುತ್ತವೆ. ಮಠಗಳಿಂದ ಹೊರಡುವ ಪತ್ರಗಳನ್ನು ಸಾಮಾನ್ಯವಾಗಿ ಶ್ರೀಮುಖಗಳೆಂದು ಕರೆಯುವ ವಾಡಿಕೆಯಿದೆ. ಶ್ರೀಮುಖಗಳಲ್ಲದೆ ನಿರೂಪಗಳು, ದಾನಪತ್ರಗಳು, ದತ್ತಿ ಪತ್ರಗಳು, ಸನ್ನದುಗಳು ಕೂಡ ಮಠಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ : "ಡಾ.ಬಿ.ನಂಜುಂಡಸ್ವಾಮಿಯವರು ಸಂಪಾದಿಸಿ ಪ್ರಕಟಿಸಿರುವ 'ಬಿಜ್ಜಾವರದ ಚನ್ನಬಸಪ್ಪಗೌಡ – ಸಂಪಾದನೆ ಶಿವಲಿಂಗ ಸ್ವಾಮಿಗಳು ಮತ್ತು ಮುಮ್ಮಡಿಕೃಷ್ಣರಾಜರ ಪ್ರತ್ಯೇಕ ದಾಖಲೆ ಪತ್ರಗಳನ್ನು ನೋಡಬಹುದು."

ಒಂದನೇ ಪತ್ರ ಮಹಾನಾಡ ಪ್ರಭು ಬಿಜ್ಜಾವರದ ಚನ್ನಬಸಪ್ಪಗೌಡರಿಗೆ ಸಂಪಾದನೆ ಶಿವಲಿಂಗ ಸ್ವಾಮಿಗಳು ಬರೆದ ಪತ್ರ

ತುಮಕೂರು ಪರಿಸರದ 'ಮಧುಗಿರಿ-ಬಿಜ್ಜಾವರ' ಅರಸು ಮನೆತನಕ್ಕೆ ಸಂಬಂಧಪಟ್ಟ ಈ ದಾಖಲೆ. ಹೈದರ್, ಟಿಪ್ಪು, ಮರಾಠರು ಬ್ರಿಟಿಷ್‌ರಿಂದ ಸಾಕಷ್ಟು ಕಂಗಾಲದ ಈ ಮನೆತನ ಕಡೆಯ ಪಾಪದಲ್ಲಿ ಎಂತಹ ಸಂಕಷ್ಟವನ್ನು ಎದುರಿಸಿದೆ ಅನ್ನುವುದನ್ನು ತಿಳಿಸುತ್ತದೆ. ತಾವೇ ಕಟ್ಟಿ ಬೆಳೆಸಿದ ಭಕ್ತಿ, ಶ್ರದ್ಧೆಯಿಂದ ನಡೆದುಕೊಂಡ ಮಠದ ಒಡವೆಗೆ ಆಸೆಪಟ್ಟದ್ದು, ಅದನ್ನು ಮಠದ ಪರಂಪರೆಯ

ಸ್ವಾಮಿಗಳು ನವಿರಾಗಿ ಪರಿಸ್ಥಿತಿಯನ್ನು ನಿವಾರಿಸಿದ ಪತ್ರ, ಚನ್ನಬಸಪ್ಪಗೌಡನ ಸಾಕಷ್ಟು ಪರಿಸ್ಥಿತಿ, ಸಹ ಇದರಿಂದ ವೇದ್ಯವಾಗುತ್ತದೆ.

ಸಂಪಾದನೆ ಶಿವಲಿಂಗ ಸ್ವಾಮಿಗಳವರು ಪತ್ರವನ್ನು ರತ್ನಗಿರಿಯಿಂದ ಬರೆದಿದ್ದಾರೆ. ಪತ್ರದಲ್ಲಿ ಮಠದ ಹೆಸರು, ಊರು ಮತ್ತು ಕಾಲ ಸ್ಪಷ್ಟವಾಗುವುದಿಲ್ಲ. ಸಿದ್ಧಾಪುರದಲ್ಲಿ ಗದ್ದುಗೆಯಾಗಿರುವ ಬೋಳಬಸವೇಶ್ವರರೆ ಸಂಪಾದನೆ ಬೋಳಬಸವೇಶ್ವರರು. ಸಂಪಾದನೆ ಶಿವಲಿಂಗ ಸ್ವಾಮಿಗಳು ಸಿದ್ಧಾಪುರದ ಬೋಳಬಸವೇಶ್ವರರ ಪರಂಪರೆಯಾಗಿರಬಹುದು.

ಚನ್ನಬಸಪ್ಪಗೌಡನು ಪಟ್ಟಕ್ಕೆ ಬಂದು ಒಂಬತ್ತು ತಿಂಗಳಾಗಲು, ರತ್ನಗಿರಿಯ ರಾಜರಿಗೆ ಆಶ್ರಯಕೊಟ್ಟರೆಂಬ ನೆಪದಿಂದ ಟಿಪ್ಪುಸುಲ್ತಾನರು ಫೌಜು ತೆಗೆದುಕೊಂಡು ಬಂದು ದೊಡ್ಡಮಾಲೂರು ಬಳಿ ಇಳಿಸಿ ಮಿದಗೇರೆ ಠಾಣ್ಯ ಹಾಕಿಕೊಂಡರು. ಕ್ರಿ.ಶ.೧೭೯೦ರಲ್ಲಿ ಲಾರ್ಡ್ ಕಾರನ್‌ವಾಲೀಸ್ ಸಾಹೇಬರು ಶ್ರೀರಂಗಪಟ್ಟಣದ ಮೇಲೆ ಹೊರಟಿದ್ದಾರೆಂದು ತಿಳಿದು ಚನ್ನಬಸಪ್ಪಗೌಡನು ಅವರ ವುರಿಬಿದ್ದನು. ಅವರು ನಿಮ್ಮ ಸಂಸ್ಥಾನಕ್ಕೆ ಹೋಗಿ ಸ್ಥಳ ಸ್ವಾಧೀನ ಮಾಡಿಕೊಂಡಿರಿ ಎನ್ನಲು ಮತ್ತೆ ಮಿಡಿಗೇರಿಗೆ ಬಂದು ಏಳು ತಿಂಗಳಾದ ಮೇಲೆ ಶ್ರೀರಂಗಪಟ್ಟಣದಲ್ಲಿ ಕುಂಪಣಿಯವರಿಗೂ ಸುಲ್ತಾನರಿಗೂ 'ಸಲ್ಲಾ' ಆದ ವರ್ತಮಾನ ಕೇಳಿ ಇನ್ನು ಉಳಿಗಾಲವಿಲ್ಲವೆಂದು ಸಂಸ್ಥಾನಬಿಟ್ಟು ಕುಟುಂಬ ಸಮೇತ ವೇಮುಲ ಪಾಳೆಯಗಾರರ ಹತ್ತಿರಹೋಗಿ ಒಂಬತ್ತು ತಿಂಗಳೀದ್ದು ಅಲ್ಲಿಂದ ಕಣಿವೆ ಕೆಳಗಿನ ಮೊಗಲ್ ವೆಂಕಟಗಿರಿಗೆ ಹೋಗಿ ಕೃಷ್ಣಗಿರಿ ಬಳಿ ಕರ್ನಲ್ ರೀಟ್ಸ್ ಸಾಹೇಬರಿರಲು ಅವರನ್ನು ಕಂಡು ತನ್ನ ದುರವಸ್ಥೆಯನ್ನು ಹೇಳಿಕೊಂಡನು. ಆತನು "ಇಷ್ಟರಲ್ಲೇ ನಮ್ಮ ದಂಡು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಲು ಬರುತ್ತೆ, ನಾನು ಬೆಂಗಳೂರಿಗೆ ಬರುತ್ತೇನೆ. ನೀವು ನಿಮ್ಮ ಸಂಸ್ಥಾನಕ್ಕೆ ಹೋಗಿ, ಫೌಜ ಜಮಾಯಿಸಿ ಬೊಂಬಾಯಿ ಕಡೆಯಿಂದ ಬರುವ ನಮ್ಮ ದಂಡಿಗೆ 'ರಸದು' ಮುಂತಾದವು ಸರಿಯಾಗಿ ಬರುವಂತೆ ನೋಡಿಕೊಳ್ಳಿ ಎಂದು ಹೇಳಿದರು. ಅಲ್ಲಿಂದ ಸ್ಥಳಕ್ಕೆ ಬರಬೇಕೆಂದು ವೆಂಕಟಗಿರಿಗೆ ಬಂದು ಸೇರಲು ರೀಟ್ಸ್ ಸಾಹೇಬರಿಂದ ಗವರ್ನರ್ ಜನರಲ್ ಸಾಹೇಬರು ಕೃಷ್ಣಗಿರಿಗೆ ಬರುತ್ತಾರೆ. ನೀವು ಬಂದಲ್ಲಿ ಭೇಟಿ ಮಾಡಿಸಿ ಜವಾಬ್ ಕೊಡಿಸುತ್ತೇನೆ" ಎಂದು ಉತ್ತರ ಬರೆದರು.

ಅದರಂತೆ ಕೃಷ್ಣಗಿರಿಗೆ ಹೋಗಲು ಜನರಲ್ ಸಾಹೇಬರು ಶ್ರೀರಂಗಪಟ್ಟಣಕ್ಕೆ ಹೊರಟುಹೋಗಿದ್ದರು. ರೀಟ್ಸ್ ಸಾಹೇಬರು "ನಾವು ಹಿಂದಣಿಯಿಂದ ನಿಮ್ಮ ವಿಚಾರ ತಿಳಿಸಿ ಇಸ್ತಿಹಾರ್ ನಾಮ ಕಳುಹಿಸುತ್ತೇವೆ. ನೀವು ನಿಮ್ಮ ಸ್ಥಳಕ್ಕೆ ಹೋಗಿ ಎಂದರು." ಅದರಂತೆ ಚನ್ನಬಸಪ್ಪಗೌಡನು ಈ ಸೀಮೆಗೆ ಬಂದು ಬೇಡತ್ತೂರಿನಲ್ಲಿ ನಿಂತನು. ಅಲ್ಲಿಗೆ ಜನರಲ್ ಹಾರಿಸ್ ಸಾಹೇಬರಿಂದ "ಟಿಪ್ಪುಸುಲ್ತಾನರು, ಕುಂಪಣಿ, ನಿಜಾಮ, ಮರಾಟಿ ಈ ಮೂರು ಜನಗಳಲ್ಲಿ ದ್ವೇಷ ಮಾಡಿ ಬಾದ್‌ಷಹಾ ಎಂದು ಬಿರುದು ಪಡೆದಿದ್ದಾರೆ. ಅವರನ್ನು ಸೋಲಿಸಲು ಮೂರು ಸರ್ಕಾರದವರೂ ದಂಡು ಕೂಡಿಸಿ

ನಮ್ಮ ವಶಕ್ಕೆ ಕೊಟ್ಟಿದ್ದಾರೆ. ನಿಮಗೆ ಯಾವ ತೊಂದರೆಯನ್ನು ಕೊಡುವುದಿಲ್ಲ; ನೀವು ಶತ್ರುಗಳ 'ಬಾತಮಿ' ತರಿಸಿ ಕಳುಹಿಸುವುದಲ್ಲದೆ ಸೈನ್ಯಕ್ಕೆ ಸರಬರಾಯಿ ವಗೈರೆ ಒದಗಿಸತಕ್ಕದ್ದು" ಎಂದು ತಾರೀಖು ೯ನೇ ಮಾರ್ಚ್ ೧೭೯೯ರಲ್ಲಿ ಉತ್ತರಬಂತು. ಅದರಂತೆ ನಡೆದುಕೊಂಡು ಕಾದು ಕುಳಿತಿರಲು ರೀಟ್ಸ್ ಸಾಹೇಬರಿಂದ ನಮ್ಮ ಕುಂಪಣಿ ಇಲಾಖೆ ತಪ್ಪಿ ರಾಜ್ಯ ಯಾವತ್ತೂ ಮೈಸೂರಿಗೆ ಸೇರಿಹೋಯಿತು. ನೀವು ಅಲ್ಲಿರುವ ಕೆಲಸವಿಲ್ಲ ಬೆಂಗಳೂರಿಗೆ ಬರುವುದು" ಎಂದು ಪತ್ರ ಬಂತು. ಅದೇ ಮೇರೆಗೆ ಗೌಡನು ಬೆಂಗಳೂರಿಗೆ ಹೋಗಲು ಅವರು "ನಿಮ್ಮ ವಕೀಲರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಡಿ. ಅಲ್ಲಿ ಹೇಳಿ ಸನ್ನದು ಮಾಡಿಸಿಕೊಡುತ್ತೇವೆ ಎಂದರು. ಅದರಂತೆ ಗೌಡನು ಕಪ್ಪಯ್ಯ, ಶಿವರಾಮಯ್ಯ ಎಂಬ ವಕೀಲರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಲು ರೀಟ್ಸ್ ಸಾಹೇಬರು ಚನ್ನಪಟ್ಟಣಕ್ಕೆ ಹೋಗಿದ್ದರು. ಈ ಸುತ್ತಾಟದಲ್ಲಿ ನಿರಾಶೆ ಹೊಂದಿ ಚನ್ನಬಸಪ್ಪಗೌಡನು ತೀರಿ ಹೋದನು. ಇಷ್ಟು ವಿಷಯ ಚನ್ನಬಸಪ್ಪಗೌಡರ ಬಗ್ಗೆ ತಿಳಿದುಬರುತ್ತದೆ"[೫]

೩. ಸಂಪಾದನೆ ಶಿವಲಿಂಗ ಸ್ವಾಮಿಗಳ ನಿರೂಪ :-

"ತನ್ನ ಜೀವಿತದಲ್ಲಿ ಮಧುಗಿರಿ ಪಾಳೆಪಟ್ಟು ಉಳಿಸಲು ಸಾಕಷ್ಟು ಕಷ್ಟಪಟ್ಟ ಚನ್ನಬಸಪ್ಪಗೌಡರಿಗೆ ಹಣದ ಮುಗ್ಗಟ್ಟು ಬಹಳ ಇದ್ದು ನಮ್ಮ ವಂಶಸ್ಥರು ಮಠಕ್ಕೆ ಹಿಂದೆ ಕೊಟ್ಟಿದ್ದು ಎಂದು ತನ್ನ ಅನುಚರರಿಂದ ಹಸುಗಳನ್ನು ತರಿಸಿರಬೇಕು. ಅದಕ್ಕೆ ಸ್ವಾಮಿಗಳು ಚನ್ನಬಸಪ್ಪಗೌಡನಿಗೆ ಈ ನಿರೂಪವನ್ನು ಸ್ವಲ್ಪ ಕಠಿಣವಾಗಿ ಬರೆದಿದ್ದಾರೆ. ಆ ಪತ್ರದ ಸ್ವರೂಪ ಕೆಳಗಿನಂತಿದೆ."[೬]

ಶ್ರೀಸಾಂಬಶಿವ

ಶ್ರೀಮತ್ಪರ ತತ್ವ ಪರಮಾನಂದ ಪರಂಜ್ಯೋತಿ ಪರಿಪೂರ್ಣ ಅಪ್ರಮೇಯ
ಅನುಪಮ. ಅಪ್ರತರ್ಕ್ಯಮಹಾಗ್ನಾನ ಪ್ರಭಾಮಯ ಯಮನಿಮಯಾಸನ
ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗ
ಯೋಗೀಶ್ವರ ದೇಹೇಂದ್ರಿಯ ಮನಃ ಪ್ರಾಣಾದ್ಯಂತಃಕರಣ ಗುಣ
ಧರ್ಮಕರ್ಮ ನಿರ್ಲೇಪನ ಸಕಲ ಭುವನಾಂತರ ನಿತ್ಯ ನಿರ್ಮಲ
ಸ್ವರೂಪ ಭಕ್ತಹೃತ್ಕಮಲ ಕರ್ಣಿಕಾಂತರ್ವಾ ಸಮತ್ತ
ಮಧುಕರಾಯ ಮಾನೆಷ್ಟಲಿಂಗ ಪ್ರಾಣಲಿಂಗ ತೃಪ್ತಿಲಿಂಗಾಂಗಿ
ತಾಂಗ ಗುರುಲಿಂಗಜಂಗಮ ಪ್ರಸಾದ ಪಾದೋದಕಾದ್ಯಷ್ಟಾವರಣ
ಪಂಚಾಚಾರ ಪ್ರತಿಷ್ಠಾಸ್ಥಾಪನಾಚಾರ್ಯರಾದ ಸಂಪಾದನೆ ಶಿವಲಿಂಗ ಸ್ವಾಮಿಗಳವರು.
ಆಸ್ಮದತ್ಯಂತ ಪ್ರಿಯಭಕ್ತನಾದ ಶ್ರೀಮನ್ಮಹಾನಾಡುಪ್ರಭು ಬಿಜವರದ ಮುಮ್ಮಡಿ

ಚಿಕ್ಕಪ್ಪಗೌಡರ ಚಂನಬಸಪ್ಪಗೇ ತ್ರಿಸಂಧ್ಯಾ ಶಿವಪೂಜಾ
ಕಾಲತ್ರಯದಲ್ಲಿಯು ಧನಕನರ್ ವಸ್ತುವಾಹನ
ಪ್ರಾಜ್ಯರಾಜ್ಯ ಸಮೃದ್ಧಿಯಾಗಲೀಯಂದು ಹರಶಿ ಕಳುಹಿಸ್ತ
ಆಶೀರ್ವಾದ ಸಾಂಪ್ರತ್ತವು ನಾವು ನಿಂನ ಶ್ರಯೋಭಿವೃದ್ಧಿಯಂನು
ಕುರಿತು ತಪೋನಿಷ್ಠತೆಯಿಂದಾ ರತ್ನಗಿರಿಯಲ್ಲಿ ಯಿಧೆವೆ/ ನಂಮ್ಮ ಮಠದ
ದನಗಳು ಕೆಲವು ಪುಟೇನಹಳ್ಳಿಯಲ್ಲಿ ಬಿಡಿಶಿಯಿತ್ತು/ ಯಲಕೂರು
ಯಂದಾ ಮಂದಿ ಆ ಪ್ರಾಂತ್ಯಕ್ಕೆ ಸ್ವಾರಿ ಹೋಗಿ ಯಿದ್ದಾಗ್ಯೆ ಆ
ಬಗ್ಗೆ ಜೀವ ದನಗಳಂನು ತೆಗೆದುಕೊಂಡು
ಬರದುಯಿಧಾರೆಂಬುದಾಗಿ ಶೃತವಾಗಿಯಿರುವದರಿಂದಾ
ಮಠಕೆ ಸತ್‌ಲೋಪಯೋಗ್ಯವಾಗಿ ಯಿರುವಧೇನುಗಳು
ಮುಂತಾದ್ದು ಆಗಿಯಿರುವದರಿಂದಾ ಯೀ ವಿವರ ನಿನಗೆ ತಿಳಿದು
ಯಿದೆಯೊ ಯಿಲ್ಲವೂ ಯಂಬದಾಗಿ ಯಿಗ ಶ್ರೀಮುಖವಂನು
ವೀರೈನ ಸಂಗಡ ಕಳುಯ್ಸಿಯಿಧೀತ್ತು. ನೀನು ಪ್ರಾಗ್ಣನಾದ್ದರಿಂದ
ವಿಶೇಷ ಬರಸತ್ಕದುಯಿಲ್ಲ ಮಠದ ವಡವೆಯಂನು ವಿಚಾರ
ಮಾಡಿ ಕಳುಯ್ಸಿಕೊಟು ಶ್ರೇಯಸ್ಸಂಪಾದನೆ ಮಾಡಿಕೊಂಡು ಯಿರುವುದು

ಇಂತಿ ಅನೇಕ ಆಶೀರ್ವಾದಾಃ

ಮೇಲಿನ ನಿರೂಪವನ್ನು ಶ್ರೀಮುಖಗಳೆಂದು ಕರೆಯುತ್ತಾರೆ. ದಾಖಲೆ ಪತ್ರಗಳಲ್ಲಿ ಶ್ರೀಮುಖಗಳು ಸಾಮಾನ್ಯವಾಗಿ ಮಠ ಮಾನ್ಯಗಳಿಂದ ಹೊರಡಿಸುವ ನಿರೂಪಗಳಾಗಿರುತ್ತದೆ. ಇಂತಹ ಶ್ರೀಮುಖಗಳು ಧಾರ್ಮಿಕ ವಿಚಾರಗಳು, ಧಾರ್ಮಿಕ ಕೇಂದ್ರಗಳಾದ ಸಾಂಸ್ಕೃತಿಕ ಸಂಸ್ಥೆಗಳಿಂದ ಪ್ರಕಟಿಸಲ್ಪಟ್ಟಿರುತ್ತವೆ. ಧಾರ್ಮಿಕ ಮುಖಂಡರುಗಳಿಗೂ ಸಾಮಾನ್ಯ ಜನರಿಗೂ ಇರುವ ಸಂಬಂಧಗಳು ಶ್ರೀಮುಖಗಳಿಂದ ತಿಳಿದುಬರುತ್ತದೆ. ಇದೇ ರೀತಿ ರಾಜಮಹಾರಾಜರುಗಳು ಮಠ ಮಾನ್ಯಗಳೊಡನೆ ಎಂತಹ ಸಂಬಂಧಗಳನ್ನು ಹೊಂದಿದ್ದರು ಎನ್ನುವುದಕ್ಕೆ ಮತ್ತೊಂದು ಉದಾಹರಣೆಯನ್ನು ನೋಡಬಹುದು. ಮೈಸೂರು ಮಹಾರಾಜರು ತೋಂಟದ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಮಠಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತ ಒಂದು ನಿರೂಪವನ್ನು ನೋಡಿದರೆ ತಿಳಿಯುತ್ತದೆ.

ಹೈದರಾಲಿ-ಟಿಪ್ಪುವಿನ ಆಡಳಿತದ ನಂತರ ಮೈಸೂರು ಸಂಸ್ಥಾನದ ಆಡಳಿತದ ಧರ್ಮಪ್ರಭುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕೈಗೆ ಬಂದ ಮೇಲೆ ನಾಡಿನ ನಾನಾ

ಪರಂಪರೆಯ ಮಠದೇವಸ್ಥಾನಗಳಿಗೆ, ವಿದ್ವಾಂಸರಿಗೆ, ಧರ್ಮದತ್ತಿಗಳನ್ನು ಕೊಟ್ಟು ಪೋಷಣೆ ಮಾಡುತ್ತ ಬಂದರು.

ಮುಮ್ಮಡಿಯವರು ಎಡೆಯೂರು ತೋಂಟದ ಶ್ರೀಸಿದ್ಧಲಿಂಗೇಶ್ವರ ಸೇವೆಗೆ ಕೊಟ್ಟ ನಿರೂಪಗಳ ಉಲ್ಲೇಖವನ್ನು ತೋಂಟದ ಸಿದ್ಧಲಿಂಗೇಶ್ವರ ದೇವಾಲಯದ ಲಿಂ॥ ಶ್ರೀ ನಂಜಪ್ಪಯ್ಯನವರು ರಚಿಸಿದ "ಸ್ಥಳ-ಪುರಾಣ" ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್‌ರವರು ಕ್ರಿ.ಶ.೧೮೧೮ ಮತ್ತು ೧೮೨೩ರ ಕಾಲಮಾನದ ನಿರೂಪದ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಪೂರ್ಣಪಾಠ ಕೊಟ್ಟಿಲ್ಲ.

ಎಡೆಯೂರು ಗ್ರಾಮ ಠಾಣ ದಪ್ತರ್‌ನಲ್ಲಿ ೧೮೨೨ ಚಿತ್ರಭಾನು ಸಂವತ್ಸರದ ಕಾರ್ತಿಕ ಶು.೧೨, ಕುಷ್ಕಿ, ಮಹಾರಾಜ ರಾಜ ಕೃಷ್ಣರಾಜ ಒಡೆಯರು ಕೊಟ್ಟಿರುತ್ತಾರೆ. ಗ್ರಾಮಠಾಣRcord ನಲ್ಲಿ ಸ್ಪಷ್ಟವಾಗಿ ಬರೆದಿದೆ. ಆದರೆ ಮೂಲ ಸನ್ನದ್ದು ಸಿಕ್ಕಿಲ್ಲ; Jangama Inam ಚಿತ್ರ ಮಠದ ಗುರುಸಿದ್ಧಯ್ಯನ ಮಗ ಶಿದ್ವೀರೈಯ್ಯಗೆ ಶಾಲಿವಾಹನ ಶಕವರ್ಷ ೧೭೬೮, ಇದರ ಇಂಗ್ಲೀಷ್ ಕ್ಯಾಲೆಂಡರ್ ದಿನಾಂಕ ಕ್ರಿ.ಶ.೧೮೨೨ ನವೆಂಬರ್ ೨೬ರ ಮಂಗಳವಾರ.

ಧರ್ಮಪ್ರಭುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕೊಟ್ಟ ೧೮೧೮, ೧೮೨೨, ೧೮೨೩ನೇ ವರ್ಷದ ನಿರೂಪಗಳಲ್ಲಿ ೧೮೨೩ಳ ನಿರೂಪ ಮಾತ್ರ ಲಭ್ಯವಿದು, ಆ ನಿರೂಪ ತೋಂಟದ ಸಿದ್ಧಲಿಂಗೇಶ್ವರರ ಬಗ್ಗೆ ಮೈಸೂರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಇದ್ದ ಭಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಕೈಯಲ್ಲಿ ತಯಾರು ಮಾಡಿದ ಒರಟು ಕಾಗದದ ಮೇಲೆ ರಾಗಿ ಮಸಿಯಿಂದ ಬರೆದಿರುವ ಈ ನಿರೂಪದ ಶಿರೋಭಾಗದಲ್ಲಿ ಮುದ್ರೆ ಇದ್ದು ಅದರಲ್ಲಿ ಸೂರ್ಯ-ಚಂದ್ರರ ಚಿನ್ಹೆ ಇದೆ. ಶ್ರೀಚಾಮರಾಜ ಒಡೆಯರ್ ತನುಜ ಕೃಷ್ಣರಾಜವಡೇರ್ ಎಂದಿದೆ. ಮುದ್ರೆಯ ಕೆಳಭಾಗ ಕೃಷ್ಣರಾಜ ವಡಯರವರು ಎಂದು ಲಿಖಿಸಲ್ಪಟ್ಟಿದೆ. ಹದಿನೇಳು ಸಾಲಿನ ಈ ಪತ್ರದಲ್ಲಿ ಐದನೇ ಸಾಲು ಲುಪ್ತವಾಗಿದೆ. ನೂರಾರು ವರ್ಷ ಪತ್ರವನ್ನು ಮಡಚಿ ಇಟ್ಟಿದ್ದರಿಂದ ಅ ಸಾಲು ತ್ರುಟಿತವಾಗಿದೆ, ಓದಲು ಸಾಧ್ಯವಿಲ್ಲವಾಗಿದೆ. ನಿರೂಪದ ಪಾಠವನ್ನು ಸಂವತ್ಸರ ಭಾದ್ರಪದ ಶು ೭ ಗುರುವಾರ ಈ ಸನ್ನದಿನ ಇಂಗ್ಲೀಷ್ ದಿನಾಂಕಕ್ಕೆ ಹೊಂದಿಕೊಳ್ಳುತ್ತದೆ.

"ಶ್ರೀ ಚಾಮರಾಜ ವಡೇರ ತನುಜ ಕೃಷ್ಣರಾಜವಡೇರ್

ಕೃಷ್ಣರಾಜವಡಯರವರು

೧. ಸ್ವಭಾನು ಸಂವತ್ಸರದ ಭಾದ್ರಪದ ಶು೭ ಗುರುವಾರದಲು

೨. ಶ್ರೀಮತ್ತು ಕುಣಿಗಿಲ ಆಮೀಲ ವೆಂಕಟಾಚಲೈಯ ಬರಶೀ

೩. ಕಳುಹಿದ ನಿರೂಪ ಅದಾಗೀ ತಾಲುಕು ಮಜಕೂರ್‍ರು
೪. ಯಡೆಯೂರು, ಶಿಧೇಶ್ವರ ದೇವರಿಗೆ ತಿಂಗಳು ವಂದಕೆ ಗು ೧೦
೫. ಲು ಸಾಲ್ಲಿನಾ ಕಂಟಿರಾಯಿ ೧೨ ೦ ತಸದಿಕು ಯಿರುವದರಲ್ಲಿ
೬. ಪಡಿತರ ದೀಪಾರಾದನೆ (ಸಲುವಾಗಿ ವರುಷಕೆ ಸಾಲಿಯಾನಾ)
೭. XXXXXX ತಸರಿಕು ಶಿವಾಯಿ ಖುಷಿ ಗು ೮॥೨ ಜಮಾ
೮. ಸರ್ವಮಾನ್ಯವಾಗಿ ನಡೆಸತಕದಕೆ ಅಪಣೆ ಕೊಡಿಶೀಯಿಧಿತ್ತು
೯. ಸಾಗುವಳಿ ಆಗಿಯಿರು ವಾರದ ಭೂಮಿ ಆಗಲ್ಲಿ ಯಿ
೧೦. ದೇವಸ್ಥಾನದ ಯಿಲಾಖೆಯವರು ಮಾಡಿರು ಕಂದಾಯದ
೧೧. ಭೂಮಿ ಆಗಲ್ಲಿ ಸದರ ಮೇರೆ ಕಂಟಿರಾಯಿ ಯಂಟುವರಹಾವು
೧೨. ಯೇಳು ಹಣಕೆ ಸರಿಯಾಗಿ ವಿಂಗಡಿಶೀ ಕೊಟು ಯಿ
೧೩. ಭೂಮಿಗಳ ಲ್ಲಿಂಗ ಮುದ್ರೆ ೮॥೨. ಶಿಲಾಪ್ರತಿಷ್ಠೆ ಮಾಡಿಶಿ ಕೊಟು
೧೪. ಯಿ ಸ್ವಭಾನು ಸಂ॥ಆರಭ್ಯಯಿ ನಾಮತಿ ದಾಖಲು ಮಾಡಿ
೧೫. ಹರಸಲು ತಾಜಾ ಸಂನದುವುಜೂರು ಮಾಡದೆ ಯಿ
೧೬. ದೇವಸ್ತಾನದ ಪಡಿತರ ದೀಪಾರಾಧನೆ ಮುಂತಾದಕೆ
೧೭. ಸರ್ವಮಾನ್ಯವಾಗಿ ನಡಶೀಕೊಡು ಬರುವುದು ಯಿ ಸಂನದು
೧೮. ನಕಲು ಶಿರಸ್ತೆದಾರ ದಸ್ತವಕೆ ಬರಶೀ ಅಸಲು ದೆವಸ್ಥಾನಕೆ
೧೯. ಕೊಡವದು ತಾರೀಕು ೧೧ನೆ ಮಾಹೆ ಶಪಟಂಬರ ಸನ್ ೧೮೨೩ನೇ
೨೦. ಇಸವಿ ಖತ್ತಾ ಕೃಷ್ಣಾ ಪಾ ಮನಿಷಿ ಹಜೂರು
೨೧. ಸಾಲ್ಲಿಯಾನಾ ಕಂಟಿರಾಯಿ ಯಂಟು ವರಹಲು ಕೊಟ್ಟು
೨೨. ಹುಂಡಿಯ ಭೂಮೀ ನಡಶಿದೆ ಬಿಟ್ಟು ಯಿರುವ ರುಜು ಶ್ರೀಕೃಷ್ಣ"[೭]

ಹಸ್ತಪ್ರತಿ ಕಾಗದ ಪತ್ರಗಳಲ್ಲಿ ಇನ್ನೂ ವಿಶಿಷ್ಟವಾದ ದಾಖಲೆ ಪತ್ರಗಳೆಂದರೆ ಕಡತಗಳ ಸ್ವರೂಪದ ಪತ್ರಗಳು. ಕಡತಗಳು ಮಧ್ಯಯುಗ ಮತ್ತು ಆಧುನಿಕ ಚರಿತ್ರೆಯ ಆಕರ ರೂಪದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮೈಸೂರು ಪ್ರದೇಶದ ವ್ಯಾಪಾರ ವರ್ಗದವರು ತಮ್ಮ ಜಮಾಖರ್ಚಿನ ಪುಸ್ತಕಗಳನ್ನು 'ಅರಿವೆ' ಕಪ್ಪು ಹಾಳೆಗಳಿಂದ ಸಿದ್ಧಪಡಿಸುತ್ತಿದ್ದರು. ಹೀಗೆ ಸಿದ್ಧಪಡಿಸುವಾಗ ಹುಣಸೆಬೀಜಗಳ ಹುಡಿಯ ಅಂಟನ್ನು ಅರಿವೆಯ ಹಾಳೆಗಳಿಗೆ ಬಡಿದು, ನಂತರ ಅವುಗಳಿಗೆ ಮಸಿ ಬಳಿಯಲಾಗುತ್ತಿತ್ತು ಎಂದು ಡಾ.ಡಿ.ಸಿ.ಸರ್ಕಾರ್ ಅವರು ಹೇಳುತ್ತಾರೆ. ಒಂದು ಪ್ರದೇಶದಿಂದ

ಇನ್ನೊಂದು ಪ್ರದೇಶಕ್ಕೆ ಸಮಾಚಾರ ಕಳಿಸಲೂ ಕಡತಗಳನ್ನು ಬಳಸಲಾಗುತ್ತಿತ್ತು. ಕಡತದಲ್ಲಿ "ಸೀಸದಿಂದ ಬರೆಯುತ್ತಿದ್ದರು" ಎಂದು ಡಾ.ಕೆ.ಜಿ.ವಸಂತಮಾಧವ ಅವರು ಉಲ್ಲೇಖಿಸಿದ್ದಾರೆ.

ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಪಂಚಗಂಗಾವಳಿಯ ನದಿಮುಖದಲ್ಲಿರುವ ಗಂಗೊಳ್ಳಿ, ಈ ಸ್ಥಳದ ಆರ್ಥಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ತಿಳಿಸುವ ಅನೇಕ ಪತ್ರಗಳು ಕಡತಗಳಲ್ಲಿ ಕಂಡುಬರುತ್ತವೆ' ಡಾ.ಕೆ.ಜಿ.ವಸಂತಮಾಧವ ಅವರು ಹೇಳುವಂತೆ "ಕೆಲವು ವ್ಯಕ್ತಿಗಳ ವಶವಿದ್ದ ಕಪ್ಪು ವಸ್ತ್ರದಲ್ಲಿ ಸೀಸದಿಂದ ಬರೆದ ದಾಖಲೆಗಳಾದ ಕಡತಗಳಲ್ಲಿ ಗಂಗೊಳ್ಳಿಯಲ್ಲಿ ವ್ಯಾಪಾರ ಮಳಿಗೆಗಳು ಇದ್ದುದನ್ನು ಅಲ್ಲಿ ಅಕ್ಕಿ, ಮೆಣಸು, ಕಬ್ಬು, ಹೊಗೆಸೊಪ್ಪು, ತೆಂಗಿನಕಾಯಿಗಳು ಘಟ್ಟದಿಂದ ಬರುತ್ತಿದ್ದುದನ್ನು ಮತ್ತು ಬರುತ್ತಿರುವ ಸರಕುಗಳೀಗೆ ರಹದಾರಿ ಸುಂಕ ಹೇರುತ್ತಿರುವುದು ಉಲ್ಲೇಖವಾಗಿದೆ. ಘನವಂತ ಕೊಂಕಣಿಗಳು ವ್ಯಾಪಾರಸ್ಥರಾಗಿದ್ದರೆಂದು ಕೆಲವು ಕಡತಗಳು ತಿಳಿಸಿವೆ. ಇಲ್ಲಿನ ವ್ಯಾಪಾರ ಕಾಠೆವಾಡದಿಂದ ಕೊಚ್ಚಿಯವರೆಗೂ, ಅರೇಬಿಯಾ ಮಸ್ಕತ್ ಮಾಲ್ದೀವ್‌ವರೆಗೆ ಹಬ್ಬಿತ್ತು ಎಂದು ಕೆಲವು ಕಡತಗಳ ಅಧ್ಯಯನದಿಂದ ತಿಳಿದುಬರುತ್ತದೆ. ಇಲ್ಲಿ ಬೆಳೆಯುವ ಬೆಳೆಗಳನ್ನು ಕೃಷಿಯ ಪ್ರಗತಿ ಕಡತದಿಂದ ತಿಳಿದು ಬರುತ್ತಿದೆಂದು ಹೇಳುತ್ತಾರೆ.

ಕಡತಗಳು ಆರ್ಥಿಕ, ಧಾರ್ಮಿಕ, ಕೃಷಿಕ ವಿಚಾರಗಳಿಗೂ ಬರೆಯಲು ಬಳಕೆಯಲ್ಲಿರುತ್ತಿದ್ದವು ಎಂದು ಗೊತ್ತಾಗುತ್ತದೆ.

ಒಟ್ಟಾರೆ ಹಸ್ತಪ್ರತಿ ಪತ್ರಗಳ ಸ್ವರೂಪ ವಿಶಿಷ್ಟ ಬಗೆಗಳಿಂದ ಕೂಡಿರುತ್ತವೆ. ಇವುಗಳ ಸ್ವರೂಪವನ್ನು ಹಸ್ತಪ್ರತಿ ಪತ್ರಗಳ ಪ್ರಕಾರಗಳು ಎಂಬ ಮುಂದಿನ ಅಧ್ಯಾಯದಲ್ಲಿ ಸವಿವರವಾಗಿ ತಿಳಿಯಬಹುದು.

ಅಡಿ ಟಿಪ್ಪಣಿಗಳು

೧. ಇತಿಹಾಸದರ್ಶನ ಸಂಪುಟ-೬, ಲೇಖನ, ಡಾ.ಬಿ.ಆರ್.ಹಿರೇಮಠ, ೧೯೯೧, ಪುಟ-೨೦೫

೨. ಅದೇ, ಪುಟ-೨೦೭

೩. ಅದೇ, ಪುಟ-೨೦೬

೪. ಅದೇ, ಪುಟ-೨೦೮

೫. ಇತಿಹಾಸದರ್ಶನ ಸಂಪುಟ-೧೫, ಲೇಖನ; ಡಾ.ಬಿ.ನಂಜುಂಡಸ್ವಾಮಿ, ೨೦೦೦, ಪುಟ-೧೨೨

೬. ಅದೇ, ಪುಟ-೧೨೩, ೧೨೪

೭. ಇತಿಹಾಸದರ್ಶನ : ಸಂಪುಟ-೭, ಲೇಖನ : ಡಾ.ಕೆ.ಜಿ.ವಸಂತಮಾಧವ, ೧೯೯೨, ಪುಟ-೧೧೪

ಅಧ್ಯಾಯ – ೪

ಹಸ್ತಪ್ರತಿ ಪತ್ರ ಪ್ರಕಾರಗಳು

ಆಕರಶಾಸ್ತ್ರದ ಅಧ್ಯಯನ ಸಂದರ್ಭದಲ್ಲಿ ಪತ್ರ ಸಾಹಿತ್ಯವು ಪ್ರಮುಖ ಪಾತ್ರವಹಿಸುತ್ತದೆ. ಆಕರಶಾಸ್ತ್ರ ಇತಿಹಾಸಕಾರನ ಮಾಹಿತಿ ಕಣಜ. ಪ್ರತಿಯೊಂದು ಪ್ರಕಾರದ ಆಕರಗಳನ್ನು ಇತಿಹಾಸಕಾರನು ಬಹು ಎಚ್ಚರಿಕೆಯಿಂದ ಜವಾಬ್ದಾರಿಯುತವಾಗಿ, ಸುವ್ಯವಸ್ಥಿತಿ ರೀತಿಯಲ್ಲಿ ಅಧ್ಯಯನ ಮಾಡಿ ತದನಂತರ ಇತಿಹಾಸ ರಚನೆಗೆ ತೊಡಗಬೇಕಾಗುತ್ತದೆ. ಆಕರಗಳು ಸಾಕ್ಷೀಭೂತ ವಸ್ತುಗಳು, ಯಾವುದೇ ಭೂತಕಾಲದ ನೈಜಘಟನೆಯಿಲ್ಲದ ಇತಿಹಾಸ ಇತಿಹಾಸವಾಗಲಾರದು. ಅದು ಪುರಾಣವಾಗಬಹುದು. ಏಕೆಂದರೆ ಪುರಾಣಕ್ಕೆ ಕಾಲಿಲ್ಲ ಎಂಬ ಮಾತು ಜನಜನತಿವಾದುದು. ಪುರಾಣವು ಆಧಾರರಹಿತವಾದುದು. ಕೇವಲ ಕಾಲ್ಪನಿಕ ಪರ್ವತ ಪುರಾಣ, ಬಹು ಸ್ವಾರಸ್ಯಕರವಾಗಿ ವೈಭವೀಕರಿಸಿ ಎಂಥವರೂ ಮೆಚ್ಚುವಂತೆ ನಂಬುವಂತೆ ಆಕರ್ಷಣೀಯವಾಗಿ ಹೇಳುವ ವಸ್ತುವಿಷಯ ಪುರಾಣವೆನಿಸಿಕೊಳ್ಳುತ್ತದೆ. ಆದರೆ ಇತಿಹಾಸವೆಂಬುದು ಇದ್ದದ್ದು 'ಇತ್ತು' ಎಂದೂ 'ಹಾಸ' ಎಂದರೆ ಕತೆ, ಚರಿತ್ರೆ ಆಗುತ್ತದೆ. ಇದ್ದ ಹಿಂದಿನ ಚರಿತ್ರೆ, ಹಿಂದಿನ ಕತೆ, ನಡೆದುಹೋದ ಘಟನೆ, ಇತಿಹಾಸಕ್ಕೆ ಆಧಾರಭೂತವಾಗಿ ಶಾಸನಗಳು, ತಾಮ್ರಪಟಗಳು, ಹಳೆಯ ಓಲೆಗರಿಗಳು, ತಾಳೆಗರಿಗಳು ಅಥವಾ ತಾಡಪತ್ರಗಳು, ಕೋರಿಕಾಗದಗಳು, ಕಡತಗಳು.

ಇಂತಹ ಹಲವಾರು ಇತಿಹಾಸವನ್ನು ಹೇಳುವ ವಿಷಯಗಳಲ್ಲಿ ಪತ್ರಸಾಹಿತ್ಯವು ಒಂದು. ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ರೀತಿಯ ಪ್ರಕಾರಗಳಲ್ಲಿ ಹುಟ್ಟಿಕೊಂಡ ಬರೆಯಲ್ಪಟ್ಟ, ವ್ಯವಹಾರಿಸಲ್ಪಟ್ಟ ಪತ್ರಗಳನ್ನು ನೋಡುತ್ತೇವೆ. ಇವುಗಳನ್ನು ಐತಿಹಾಸಿಕ ಪತ್ರಗಳು ಎಂದರೂ ತಪ್ಪಾಗಲಾರದು. ಅವುಗಳಲ್ಲಿ ಬಹುಮುಖ್ಯವಾಗಿ

ಸನ್ನದುಗಳು

ನಿರೂಪಗಳು

ದಾನಪತ್ರಗಳು

ವಂಶಾವಳಿ ಪತ್ರಗಳು

ಕಡತಗಳು

ಕ್ರಯಪತ್ರಗಳು

ಶ್ರೀಮುಖಗಳು

ರಹದಾರಿ ಪತ್ರಗಳು

ಜೀತಪತ್ರಗಳು

ಇವುಗಳನ್ನು ಸವಿವರವಾಗಿ ನೋಡುವುದು ಇಲ್ಲಿನ ಮುಖ್ಯ ಅಧ್ಯಯನವಾಗಿದೆ.

೪.೧ ಸನ್ನದುಗಳು :-

ಸನ್ನದುಗಳು ಎಂದರೆ ಹಿಂದಿನ ಕಾಲದಲ್ಲಿ ರಾಜ ಮಹಾರಾಜರುಗಳಿಂದ ಹೊರಡಿಸುತ್ತಿದ್ದಂಹ 'ಅಧಿಕಾರಪತ್ರ'. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟು ಎಂಟನೇ ಸಂಪುಟದಲ್ಲಿ "ಸನದು ಎಂಬ ಅರ್ಥವನ್ನು ಅರ್ಥೈಸಿರುವುದು ಇನಾಂಭೂಮಿಗಳನ್ನು ಅವುಗಳಿಗೆ ಆಧಾರವಾದ ದಾಖಲೆಗಳನ್ನು ಸನ್ನದು ಎಂಧು ಕರೆಯಲಾಗಿದೆ. ಅಂದರೆ ಮಹಾರಾಜರು ಅಪ್ಪಣೆ ಮಾಡಿಸುವುದು ಎಂದರ್ಥ. 'ಸನದು ಪತ್ರ' ಎಂದರೆ ಅಧಿಕಾರ ಪತ್ರವನ್ನು ಬರೆದಿರುವ ಕಾಗದ, ನಿರೂಪದ, ಓಲೆ ಮುಂತಾಗಿ ಅರ್ಥೈಸಲಾಗಿದೆ. ಇದೇ ರೀತಿ 'ಸನದಿ' ಎಂದರೆ; ಅಧಿಕಾರವನ್ನು ಹೊರಡಿಸುವವನು ಅಧಿಕಾರಿ; ಕಲೆಕ್ಟರ್‌ನ ಕೈಕೆಳಗೆ ಕೆಲಸ ಮಾಡುವವನು ಅಂದರೆ ಯೂರೋಪಿಯನ್ ಅಸಿಸ್ಟೆಂಟ್ ಕಲೆಕ್ಟರ್, 'ಡಿಸ್ಟ್ರಿಕ್ಟ್ ಡೆಪ್ಯುಟಿ' ಎಂಬ ಇಬ್ಬರು ದೇಶಿಯ ಅಧಿಕಾರಸ್ಥರರೂ ಇರುವವರು ಎಂದು ನಮೂದಿಸಲಾಗಿದೆ. 'ಅಧಿಕಾರ ಪತ್ರ'ವನ್ನು 'ರಾಯಸ', 'ನಿರೂಪ' ಎಂದು ಕೂಡ ಕರೆಯುತ್ತಾರೆ."[೧]

೧. ಸಾಂಸ್ಕೃತಿಕ ಆಕರಗಳಾಗಿ ಸನದುಗಳು :

ಕರ್ನಾಟಕ ಇತಿಹಾಸ ದರ್ಶನ ಸಂಪುಟ ೧೬/೨೦೦೧ ಪುಟ ಸಂಖ್ಯೆ ೮೬ರಲ್ಲಿ ಡಾ.ಚೆನ್ನಕ್ಕಪಾವಟೆಯವರು ಪ್ರಕಟಿಸಿರುವ ಒಂದು ಲೇಖನ 'ಕಿತ್ತೂರು ರಾಣಿ ಚೆನ್ನಮ್ಮ ಕಂಪನಿ ಸರಕಾರದ ಪತ್ರ ವ್ಯವಹಾರಗಳು' ಎಂಬುದರಲ್ಲಿ "ಸಂಸ್ಥಾನಿಕರಿಗೆ ಕೊಡ ಮಾಡಿದ ಸನದು"[೨] ಎನ್ನುವುದನ್ನು ನೋಡಿದರೆ ಸಾಂಸ್ಕೃತಿಕವಾಗಿ ಸನದುಗಳು ಎಂತಹ ಮಹತ್ವವನ್ನು ಪಡೆದುಕೊಳ್ಳುತ್ತವೆಂದು ತಿಳಿಯುತ್ತದೆ.

ಚನ್ನಕ್ಕ ಪಾವಟೆಯವರು ಹೇಳುವಂತೆ ಕಂಪನಿ ಪತ್ರವ್ಯವಹಾರಗಳಲ್ಲಿ ಸುಮಾರು ೩೦ ಪತ್ರಗಳು ಕಂಡುಬರುತ್ತವೆ. ಇವುಗಳಲ್ಲಿ ೨೫೦೦ ರೂಪಾಯಿಗಳಿಗೆ ಸನದು ಕಳಿಸಿರುವ ದಾಖಲೆಗಳು ದೊರೆಯುತ್ತವೆ. ಇವುಗಳಲ್ಲಿ ಮೊದಲನೆಯ ಪತ್ರ ಒಂಬತ್ತು ಜಾನುವಾರುಗಳೀಗೆ ಸಂಬಂಧಿಸಿದಂತೆ ಬೇಬರ್ ಸಾಹೇಬರು ಚನ್ನಪ್ಪ ಸರ್‌ದೇಸಾಯಿಯವರಿಗೆ ಬರೆದ ಸನದು ಪತ್ರವಾಗಿದೆ.

ನಾಲ್ಕನೇ ಪತ್ರ ಅಸಿಸ್ಟೆಂಟ್ ಕಲೆಕ್ಟರ್ 'ಹಂಟನ್ ಸಾಹೇಬರು ಸಂಪಗಾಂವ ಮಾಮಲೆದಾರರಿಗೆ 'ಹುಕುಂ' ನೀಡಿದ ಬಗ್ಗೆ ಆಕರವಿದೆ.

ಐದನೆಯ ಪತ್ರ ಮಾನಿನೀಯ ವೀರಪ್ಪ ಮತ್ತು ಚನ್ನಪ ಸರದೇಸಾಯಿಣಿ ರಾಣಿಯರಿಗೆ ಬರೆದಿದ್ದು. ಬೇಬರ ಸಾಹೇಬರು ಗೋವಪ್ಪಿ ಎಂಬುವರ ಮೂಲಕ ಕಳಿಸಿದ ಪತ್ರ ಮುಟ್ಟಿದೆ. ಆಯಾ ತಿಂಗಳಿನ ಬಾಬತ್ತು ಖಜಾನೆಗೆ ಕಳಿಸಲಾಗಿದೆ. ತೊಂಗಿಬಸಪ್ಪನು ಕೋಟೆಯಲ್ಲಿ ಪ್ರವೇಶ ಮಾಡುವ ಬಗ್ಗೆ ಪರವಾನಿಗೆ ಇರಬೇಕೆಂದು ಆತ ಕೇಳಿದ ಮುಂಗಡ ಕೊಡುವ ಪದ್ಧತಿ ಸರಕಾರದಲ್ಲಿ ಇಲ್ಲ ಎಂಬುದರ ಬಗ್ಗೆ ಸೂಚಿಸುತ್ತ, ಸುಗ್ಗಿ ಕಾಲದಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗಲೆಂದು ಅವನು ಹೊಂಗಲಕ್ಕೆ ಬಂದಾಗ 'ಹುಕುಂ' ಮಾಡುವ ಬಗ್ಗೆ ಪ್ರಸ್ತಾಪ ಮಾಡಿರುವವರು. ಹೊಂಗಲದ ಬಾಬೂರಾವ್ ತೊನಸಿಹಾಳ ಇವರ ಜಮೀನು ಚೌಕಾಸಿಯಾಗಿ ಕಾಯ್ದೆ ಪ್ರಕಾರ ಹುಕುಂ ಕೊಡುವ ಪ್ರಸ್ತಾಪ ಬೇಬರ ಸಾಹೇಬನು ಹದಿಮೂರನೆ ಪತ್ರದಲ್ಲಿದ್ದರೆ, ಸ್ಟಿವಿಂಗ್‌ಸನ್ ಸಾಹೇಬನ ಪತ್ರ ಉಭಯ ಕುಶಲವನ್ನು ವಿಚಾರಿಸುತ್ತ, ಮನೆಯಲ್ಲಿ ಸಂತೋಷವಾಗಿದ್ದು ತಮಗೆ ಹಣ್ಣು ಹಂಪಲು ಕಳಿಸಲಾಗಿದೆ. ಉಳಿದ ಮಜಕೂರ ವೀರಪ್ಪ ಈತ ನಿಮಗೆ ತಿಳಿಸುವನು. ಇಲ್ಲವಾದರೆ ತಪ್ಪಾಗುವುದು' ಎಂದಿದ್ದು ಹದಿನೇಳನೆಯ ಪತ್ರದ ಫಲಶ್ರುತಿಯಾಗಿದೆ.

ಇವೆಲ್ಲಕ್ಕಿಂತ ಹೆಚ್ಚಿನ ಕುತೂಹಲಕಾರಿ ಅಂಶಗಳನ್ನು ಒಳಗೊಂಡ ಕೆಲವು ಅಪರೂಪದ ಐತಿಹಾಸಿಕ ಮೌಲ್ಯವನ್ನೊಳಗೊಂಡ ಪತ್ರಗಳಿವೆ. ಅವುಗಳಲ್ಲಿ ಒಂದು ಬೈಲಹೊಂಗಲದ ಗುರುಸಿದ್ಧಯ್ಯ ಕಲ್ಮಠ ಅವರಿಗೆ ಕಂಪನಿ ಸರಕಾರದವರು 'ಹುಕುಂ' ಮಾಡಿರುವರು. ವೀರಮ್ಮ ಮತ್ತು ಚೆನ್ನಮ್ಮ ದೇಸಾಯಿಯವರ ಕಡೆಗೆ ಹೋಗಬೇಡಿರೆಂದು ಕೃಷ್ಣಾರಾವ್ ಮುಕ್ಕಾಂ ಬೈಲಹೊಂಗಲ ಇತರ ಹೆಸರಿನಿಂದ ಶ್ರಾವಣಮಾಸದ ಪಾದಪೂಜೆಯ ಬಗ್ಗೆ ನಿಮ್ಮನ್ನು ಕರೆ ಕಳಿಸಲು ಪಾದಪೂಜೆಯ ಕಾರ್ಯವನ್ನು ಮಧ್ಯಕ್ಕೆ ಬಿಡಬೇಕಾಗಿದೆ. ಈ ಬಗ್ಗೆ ಗೋವಿಂದರಾವ್ ಶ್ರೀನಿವಾಸರಾವ್ ಕಾರಕೂನ ದೇಸಾಯಿಯವರ ಕಡೆಗೆ ಹೋಗಿ ಬರಲು ಅಪೇಕ್ಷೆ ಇಲ್ಲದ್ದು. ಸದರಿ ರೀತಿಯ ಜಾಹೀರ ಮಾಡಿದ್ದರಿಂದ ಗುರುಸಿದ್ದಯ್ಯ ಕಲ್ಮಠರು ದೇಸಾಯಿಯರು ಪೂಜೆಗೆ ಬರಲು ತಿಳಿಸಿದ್ದರ ಮೇರೆಗೆ ಕಾರ್ಯದ ಮಟ್ಟಿಗೆ ಮಾತ್ರ ಹೋಗಬೇಕು. ಅದರ ಹೊರತು ಬೇರೆ ಯಾವುದೇ ದುರಾಲೋಚನೆ ಮತ್ತು ಸಲಹೆ ಕೊಟ್ಟರೆ ನಿಮಗೇ ಮೂಲ. ನಿಮ್ಮನ್ನು ಹೊರಗೆ ಕಳಿಸಲಾಗುವದು ಎಂಬ ಸಂಶಯ ಪ್ರವೃತ್ತಿ ಕಾಣಿಸುತ್ತದೆ. ಬೇಬರ ಸಾಹೇಬನ ಪತ್ರ ತಾ.೧ ಆಗಸ್ಟ್ ೧೮೨೭ ಇದ್ದುದನ್ನು ಗಮನಿಸಿದರೆ ಕಿತ್ತೂರು ರಾಣಿಯವರು ಕಂಪನಿ ಸರಕಾರದ ಕೈದುವಿನಲ್ಲಿಯೂ ಕಿತ್ತೂರು ಸ್ವಾತಂತ್ರ್ಯದ ಕ್ಷ ಕಿರಣ ಕಾಣಲು ತವಕ ಪಡುತ್ತಿರುವ ಸೂಕ್ಷ್ಮ ಅಂಶ ವಿದಿತವಾಗುವುದು.

ಬೈಲಹೊಂಗಲದ ಗುರುಸಿದ್ದಯ್ಯ ಕಲ್ಮಠರಿಗೆ ಕಂಪನಿ ಸರಕಾರ ಕೊಡ ಮಾಡಿದ ಹುಕುಂ ಸನದು ಪ್ರಕಾರ ನಮಗೆ ತಿಳಿದುಬರುವುದೇನೆಂದರೆ ಕಂಪನಿ ಸರ್ಕಾರದವರು ಹಿಂದೂಗಳ ಧಾರ್ಮಿಕ ವಿಚಾರಗಳಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದರು ಎಂಬುದು ಗೊತ್ತಾಗುತ್ತದೆ.

ಕಂಪನಿ ಸರ್ಕಾರದ ೨೩, ೨೪ ಪತ್ರಗಳಲ್ಲಿ ಕೈವಶಪಡಿಸಿಕೊಂಡ ಕಿತ್ತೂರು ಸಂಸ್ಥಾನದ ಮೇಲೆ ಅಧಿಕಾರ ನಡೆಸಲು ಪ್ರಯತ್ನಿಸುವ ಮಹತ್ವದ ಅಂಶವಿದ್ದರೆ, ಕಳೆದು ಹೋದ ಸಂಸ್ಥಾನವನ್ನು ಮರಳಿ ಪಡೆದ ಯತ್ನ ಮಾಡುವಲ್ಲಿ ವೀರಮ್ಮ ಚೆನ್ನಮ್ಮರು ತಮ್ಮ ಅಧಿಕಾರ ಪುನಃ ಸ್ಥಾಪಿಸುವ ಕನಸು ಕಟ್ಟಿಕೊಂಡ ಅಂಶ ಇಲ್ಲಿದೆ. ಶ್ರೀಮಂತ ಮಹಾರಾಜ ಛತ್ರಪತಿ ಸಾಹೇಬ ರಾಜಮಂಡಲ ಕರವೀರ ಇವರ ಕಡೆಯಿಂದ ಚೇಜೂರಿಗೆ ಜಾತ್ರೆಗೆ ಹೋಗುವ ಜನರು ಹೊಂಗಲಕ್ಕೆ ಬರುತ್ತಾರೆ. ಅವರಿಂದ ದೇವನೂರ ಮೇಲಾದ ಪಾಶ್ಚಪುರಕ್ಕೆ ತಲುಪಿಸಬೇಕಿದ್ದು ಇದಕ್ಕೆ ಮಾರ್ಗದರ್ಶನದ ಪರವಾನಿಗೆ ನೀಡಲು ಬೇಬರ್ ಸಾಹೇಬ್ 'ಮುದ್ದಾಂ' ಪತ್ರ ಬರೆದಿರುವರು.

ಇನ್ನು ಕೆಲವು ಪತ್ರಗಳೇ ಪ್ರತಿ ತಿಂಗಳು ಕೊಡಬೇಕಾದ ಕೆಲ ತಿಂಗಳಿಂದ ಸ್ಥಗಿತಗೊಂಡಿರಲು ಆಗಸ್ಟ್‌ನಿಂದ ಜನವರಿವರೆಗಿನ ಆರು ತಿಂಗಳಲ್ಲಿ ಎರಡು ಸಾವಿರದ ಐನೂರರಂತೆ ಹದಿನೈದು ಸಾವಿರ ರೂಪಾಯಿ ಪೈಕಿ ಹತ್ತು ಸಾವಿರ ರೂಪಾಯಿಗಳನ್ನು ಗೋದಪ್ಪ ಎಂಬುವರ ಕೂಡ ಕಳಿಸಿಕೊಟ್ಟಿದ್ದು ಅದನ್ನು ಮತ್ತೆ ಮುಂದುವರೆಸುವಂತೆ ಖಜಾನೆಗೆ 'ಹುಕುಂ' ಕೊಟ್ಟಿರವರು. ಈಗ ಕಳಿಸಿದ ಹಣದ ಬಗ್ಗೆ ಪಾವತಿ ಕಳಿಸಬೇಕೆಂದು ಜೋಷಾಯಾ ಕಲೆಕ್ಟರ್ ಪತ್ರ ಬರೆದಿರುವರು. ಇದರಿಂದ ಕಿತ್ತೂರು ಸಂಸ್ಥಾನದ ರಾಣಿವರ್ಗದವರಿಗೆ ಪ್ರತಿ ತಿಂಗಳು ಕೊಡುವ ಸನ್ನದಿನಲ್ಲಿಯೂ ನಿಯಮಿತತೆ ಇಲ್ಲದವರು ಇಪ್ಪತ್ತೇಳನೆಯ ಪತ್ರದಿಂದ ತಿಳಿದುಬರುವುದು.

ಈ ಮೇಲಿನ ಸನದುಗಳ ವಿವರಗಳಿಂದ ಬ್ರಿಟಿಷ್ ಅಧಿಕಾರಿಗಳ ಕುತಂತ್ರ, ಒಡೆದು ಆಳುವ ನೀತಿಯನ್ನು ಕುರಿತಂತೆ ರಾಣಿಯರ ನಡುವೆ ಮನಸ್ತಾಪಗಳನ್ನು ಹುಟ್ಟಿಸುವುದು, ತಮ್ಮ ಅನುಕೂಲ ಸಾಧಿಸುವುದು ಕೂಡ ಕೆಲವು ದಾಖಲೆಗಳಲ್ಲಿ ಕಂಡುಬರುತ್ತದೆ.

ಇಲಿಯಟ್ ಮ್ತು ಸ್ಟೀಜ್ ಎಂಬ ಅಧಿಕಾರಿಗಳು ಬರೆದ ಪತ್ರ ಇವುಗಳಾಗಿದ್ದು ಕಿತ್ತೂರು ಸಂಸ್ಥಾನದ ವೀರಮ್ಮ ಮತ್ತು ಜಾನಕಿಬಾಯಿಯವರಿಗೆ ಚನ್ನಮ್ಮ ರಾಣಿ ಮರಣ ಹೊಂದಿದ ದುಃಖದ ವಿಷಯ ವ್ಯಕ್ತಪಡಿಸಿರುವರು. ಮುಂದಿನ ಪತ್ರದಲ್ಲಿ ಜೀವಿಸಿದ್ದ ಉಭಯ ದೇಸಾಯಣಿಯರಲ್ಲಿ ವೈಮನಸ್ಸು ಪ್ರಾರಂಭವಾಗಿದ್ದು, ಅವರು ಬೇರೆ ಬೇರೆ ಊಟ ಮಾಡುವುದನ್ನು ಬಿಟ್ಟು ಒಂದಾಗಿರಬೇಕೆಂದು ಕಿವಿಮಾತು ವ್ಯಕ್ತಪಡಿಸಿದ್ದು ಕಂಪನಿ ಸರಕಾರದ ಕುಹಕತೆ, ಈ ಉಭಯ ಮನಸ್ತಾಪವೇ ಅಳಿದುಹೋದ ಸಂಸ್ಥಾನ ಮರಳಿ ಕೈಗೂಡದೇ ಹೋದುದು ಗಮನಿಸಬೇಕಾದ ಸಂಗತಿ.

ಚೆನ್ನಮ್ಮ ವೀರಮ್ಮ ಅತ್ತೆಸೊಸೆಯರಲ್ಲಿ ವೈರತ್ವ ಹುಟ್ಟಿಸಿ ಲಾಭ ಪಡೆದ ಕಂಪನಿ ಸರಕಾರ ಚೆನ್ನಮ್ಮನ ಸೊಸೆ ಜಾನಕಿಬಾಯಿ, ಸಂಜಾನ ಮಾಲಕಿಯ ಸಾಹೇಬರಿಗೆ ಫಲ-ಮಿಠಾಯಿಗಳನ್ನು ಕಳಿಸಿ ಆತ್ಮೀಯವಾಗಿ ವಿಚಾರಿಕೊಂಡ ಬಗ್ಗೆ ಪತ್ರವಿದ್ದು ಫಲಮಿಠಾಯಿಗಳು ಸಕಾಲಕ್ಕೆ ದೊರಕಿದ ಬಗ್ಗೆ ಸಂಜಾನ್ ಮಾಲಕಿಯರ ವಿಚಾರವೂ ಒಂದು ಪತ್ರದಲ್ಲಿದೆ. ಸಂಸ್ಥಾನದ ಒಡಕನ್ನರಿತ ಮಹಿಳೆಯರು ಅದರ ದುಷ್ಪರಿಣಾಮ ಗಮನಿಸದೇ ಕಂಪನಿ ಅಧಿಕಾರಿಗಳಿಗೆ ಹಣ್ಣು ಹಂಪಲು ಸಿಹಿ ಮಿಠಾಯಿ ಕಳಿಸಿ ಬ್ರಿಟೀಷ್ ಅಧಿಕಾರಿಗಳ ಆತ್ಮೀಯತೆ ಸಂಪಾದಿಸುವ ಪ್ರಯತ್ನವನ್ನು ಇಲ್ಲಿ ಅಲ್ಲಗಳೆಯುವಂತಿಲ್ಲ.

ಸಂಸ್ಥಾನದ ಜಾನಕಿಬಾಯಿ ಮತ್ತು ಚೆನ್ನಮ್ಮರು ಜಾಸಿಯ ಮತ್ತು ಜೋಸೆಫ್ ಕಲೆಕ್ಟರಿಗೆ ಪತ್ರ ಬರೆದು ಫೆಬ್ರವರಿ ೨ ರಂದು ಏನೂ ಇಲ್ಲದ್ದರಿಂದ ಹತ್ತು ಸಾವಿರ ರೂಪಾಯಿ ಕೇಳಿದರೆ ಕಂಪನಿ ಸರಕಾರದವರು ಅವರಿಗೆ ಐದು ಸಾವಿರ ಕೊಡಲಾಗುವ ಬಗ್ಗೆ ಪತ್ರ ಬರೆದಿರುವರು. ಕಿತ್ತೂರಿನಲ್ಲಿ ಸುಗ್ಗಿಯ ಕಾಲದ ಬಗೆಗಿನ ಪ್ರಸ್ತಾಪ ನಾಲ್ವತ್ನಾಲ್ಕನೆಯ ಪತ್ರದಲ್ಲಿದ್ದರೆ, ಪ್ರತಿಯೊಂದು ವಸ್ತುವನ್ನು ಒಂದು ವರ್ಷದ ಉಪಯೋಗಕ್ಕಾಗಿ ಮುಂಚಿತವಾಗಿ ಸಂಗ್ರಹಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಆರು ಸಾವಿರ ರೂಪಾಯಿ ಕಳಿಸಲಾಗಿದ್ದು ಅದರ ನಕಲನ್ನು ಪುಣೆಯ ಮೇಸ್ತರ ಜನರಲ್ ಚಾಪಲಿನ್ ಸಾಹೇಬ ಕಮಿಷನರ ಅವರಿಗೆ ಕಳಿಸಿಕೊಡುವ ಬಗ್ಗೆ ಬರೆದಿರುವುದು.

ಒಟ್ಟಿನಲ್ಲಿ ಕಿತ್ತೂರು ಸಂಸ್ಥಾನದ ದೇಸಾಯಿಯರನ್ನು ಬಂಧನದಲ್ಲಿಟ್ಟದ್ದರು. ಕಟ್ಟುನಿಟ್ಟಿನಿಂದ ಅವರೊಂದಿಗೆ ಪತ್ರವ್ಯವಹಾರ ಮುಂದುವರೆಸಿದುದು. ಇದರಿಂದ ತಿಳಿದು ಬರುವ ಅಂಶ ಪ್ರತಿ ಪತ್ರದ ಕೊನೆಯ ಸಾಲಿನಲ್ಲಿ 'ಹಮೇಷಾ ಪತ್ರ ಕಳಿಸುತ್ತ ಮನಸ್ಸಿಗೆ ಸಂತೋಷ ನೀಡುತ್ತಿರಬೇಕು' ಎಂಬ ಮೊಸಳೆಕಣ್ಣೀರು ಕಂಪನಿ ಸರಕಾರದವರ ವ್ಯವಹಾರ ಕುಶಲತೆಗೆ ಸೂಚನೆ ಎನಿಸಿದೆ. ಅಲ್ಲದೆ ಕಿತ್ತೂರು ಸಂಸ್ಥಾನ ಮತ್ತು ಕಂಪನಿ ಸರಕಾರದ ಐತಿಹಾಸಿಕ ಪ್ರಮುಖ ಆಯಾಮಗಳನ್ನೊಳಗೊಂಡಿದ್ದು ಸಂಶೋಧಕರಿಗೆ ಇನ್ನೂ ಆಳವಾದ ಅಧ್ಯಯನ ಕೈಗೊಳ್ಳುವಲ್ಲಿ ಪ್ರೇರಕ ಆಕರಗಳೆನಿಸಿವೆ.

೨. ಚಾರಿತ್ರಿಕ ಆಕರಗಳಾಗಿ ಸನ್ನದುಗಳು :–

ಇತಿಹಾಸಕಾರರಿಗೆ ಬಖೈರುಗಳನ್ನು ಬರೆಯಲು ಸನ್ನದು ಪತ್ರಗಳು ಉಪಕಾರಿಗಳಾಗಿರುತ್ತವೆ. ಉದಾಹರಣೆಗೆ ಬೆಂಗಳೂರಿನ ಬಖೈರುಗಳು: ಲೇಖಕರು ಡಾ.ಎಂ.ಜಿ.ಮಂಜುನಾಥ್‌ರವರು ಹಲವಾರು ಸನ್ನದುಗಳನ್ನು ಉದಾಹರಿಸಿದ್ದಾರೆ. ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಬೆಂಗಳೂರಿನ ಸುತ್ತಮುತ್ತ ಇರುವಂತಹ ಕೆಂಪಾಪುರ ಅಗ್ರಹಾರ, ಐಗಂಡಪುರ ಅಗ್ರಹಾರ, ಸಿಂಗಾಪುರ ಮುಂತಾದುವುಗಳನ್ನು ಬ್ರಾಹ್ಮಣರಿಗೆ ದತ್ತಿ ಬಿಟ್ಟಿರುವುದಕ್ಕೆ ಅನೇಕ ಸನ್ನದು ಪತ್ರಗಳು ಸಾಕ್ಷಿಯಾಗಿವೆ.

ಕೆಲವು ಪ್ರದೇಶಗಳನ್ನು ಕಂದಾಯ ಪ್ರದೇಶಗಳೆಂದು ಗುರುತಿಸಿ ಆ ಪ್ರದೇಶಗಳಲ್ಲಿ ಕಂದಾಯ ಎತ್ತುವುದನ್ನು ಮರಾಠರ ಕಾಲದ ಸನ್ನದು ಪತ್ರಗಳು ತಿಳಿಸುತ್ತವೆ.

ಉದಾಹರಣೆಗೆ : ೧೭೧೯ರಲ್ಲಿ ಬಾಳಾಜಿ ವಿಶ್ವನಾಥನು ಮುಘಲ್ ಸಾಮ್ರಾಟ್ ಫರೂಖ್‌ಸಿಯಾರ ಇವನ ಕಡೆಯಿಂದ ಸ್ವರಾಜ್ಯ, ಚೌಥಾಯಿ ಮತ್ತು ಸರದೇಶಮುಖಿ. ಈ ಬಗ್ಗೆ ಮೂರು ಸನ್ನದುಗಳನ್ನು ಪಡೆದನು. ಈ ಸನ್ನದುಗಳು ಶಾಹೂ ಛತ್ರಪತಿಯ ಹಿಸ್ಸೆಯಲ್ಲಿ ಇದ್ದವು. ಸ್ವರಾಜ್ಯ ಸನ್ನದಿನ ಮೂಲಕ ಶಾಹೂ ಛತ್ರಪತಿಯ ಕೈಕೆಳಗೆ ಆಳುತ್ತಿದ್ದ ಪೇಶ್ವೆಗೆ ಹಿಂದೆ ಶಿವಛತ್ರಪತಿಯ ಸ್ವತಂತ್ರ ರಾಜ್ಯದಲ್ಲಿಯ ಪ್ರದೇಶಗಳ ಮೇಲೆ ಪೂರ್ಣ ಅಧಿಕಾರ ಸಿಕ್ಕಿತ್ತು. ಚೌಥಾಯಿ ಮತ್ತು ಸರದೇಶಮುಖಿ ಸನ್ನದುಗಳಿಂದ ಪೇಶ್ವೆಗೆ ಇಲ್ಲವೆ ಮರಾಠರ ರಾಜ್ಯಕರ್ತರಿಗೆ ವಿಜಾಪುರ, ಗೋವಳಕೊಂಡ, ಬಿದರೆ, ವರ್ಹಾಡ, ಔರಂಗಬಾದ್ ಹಾಗೂ ಖಾನದೇಶ ಈ ಆರು ದಕ್ಷಿಣ ಸಭೆಗಳಲ್ಲಿ ವಾರ್ಷಿಕ ಉತ್ಪನ್ನದ ಅನುಕ್ರಮವಾಗಿ ಶೇಕಡ ೨೫ ಮತ್ತು ೧೦ ಭಾಗಗಳನ್ನು ತೆಗೆದುಕೊಳ್ಳುವ ಅಧಿಕಾರವು ಪ್ರಾಪ್ತವಾಯಿತು. ಚೌಥಾಯಿಯು ಅಲ್ಲಿಯ ಪ್ರದೇಶದ ಸಂರಕ್ಷಣಕ್ಕಾಗಿ ತೆಗೆದುಕೊಂಡ ಬೆಲೆಯಂತೆಯೂ ಮತ್ತು ಸರದೇಶಮುಖಿಯು ಆ ಪ್ರದೇಶದಲ್ಲಿಯ ಕಂದಾಯವನ್ನು ಎತ್ತಿ ಒಟ್ಟುಕೂಡಿಸಿ ರಾಜ್ಯದ ಆಡಳಿತಕ್ಕೆ ಅದರ ಉಪಯೋಗ ಮಾಡುವ ಕೆಲಸಕ್ಕೆಂದು ಅನುವಂಶಿಕವಾಗಿ ಸಿಗುವ ವೇತನವೆಂದೂ ನಂಬಲಾಗಿತ್ತು.

ಚೌಥಾಯಿ ಮತ್ತು ಸರದೇಶಮುಖಿ 'ಸನ್ನದು'ಗಳ ಪ್ರಕಾರ ಈ ಹಣವನ್ನು ಎತ್ತುವ ನೆವದಿಂದ ಮತ್ತು ದಕ್ಷಿಣದಲ್ಲಿ ತಮ್ಮ ವರ್ಚಸ್ಸನ್ನು ಸ್ಥಾಪಿಸುವ ಉದ್ದೇಶದಿಂದ ೧ನೆಯ ಬಾಜಿರಾಯ ಮತ್ತು ಇತರ ಸರದಾರರ ನೇತೃತ್ವದಲ್ಲಿ ಮರಾಠರು ಚಿತ್ರದುರ್ಗಕ್ಕೆ ವಿಜಾಪುರ, ಎಲಬುರ್ಗಿ ಮತ್ತು ಕೊಪ್ಪಳ ಮಾರ್ಗವಾಗಿ ದಾಳಿ ಮಾಡಿ ತಿರುಗಿ ಬಂದರು. ಹೀಗೆ ದಾಳಿಯ ಮೂಲಕ ಕಾಣಿಕೆಗಳನ್ನು ತೆಗೆದುಕೊಂಡು ತಮ್ಮ ವರ್ಚಸ್ಸನ್ನು ಸ್ಥಾಪಿಸುವುದನ್ನು ಸನ್ನದುಗಳು ತಿಳಿಸುತ್ತವೆ.

೩. ಶಾಸನಗಳಲ್ಲಿ ಸನ್ನದುಗಳು :

ಕನ್ನಡ ಶಾಸನಗಳಲ್ಲಿ ಕಂಡುಬರುವ ಸನ್ನದುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಪ್ರಸ್ತುತವೆನಿಸಿದರೂ, ಸಾಂದರ್ಭಿಕವಾಗಿ ಸೂಚಿಸುವುದು ಸೂಕ್ತವೆಂದು ಕಾಣುತ್ತದೆ. ಶ್ರೀಜಗದ್ಗುರು ಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನಗಳಲ್ಲಿ ಸಂತೆಬೆನ್ನೂರು ನಾಯಕರು ಆ ಮಠಕ್ಕೆ ಶಾಸನ ಸನ್ನದುಗಳನ್ನು ಬರೆಯಿಸಿ ಕೊಟ್ಟುದಾಗಿ ತಿಳಿದುಬರುತ್ತದೆ. ಈ ಸನ್ನದುಗಳಿಂದ ತಿಳಿದು ಬರುವ ಮುಖ್ಯ ವಿಷಯ ಏನೆಂದರೆ ಶೃಂಗೇರಿ ಮಠಾಧೀಶ್ವರರಾಗಿದ್ದ ಶ್ರೀನರಸಿಂಹ ಭಾರತೀಸ್ವಾಮಿಗಳು ಕಾಶೀಯಾತ್ರೆಗೆ ಹೋಗಿ ಬಹಳ ದಿನಗಳ ಕಾಲ ಹಿಂತಿರುಗಿ ಬಾರದಿದ್ದುದರಿಂದ ಆ ಪೀಠಕ್ಕೆ ಬೇರೆ ಪೀಠಾಧಿಪತಿಗಳನ್ನು ಅಲ್ಲಿನ ಜನ ಮಾಡಿದರೆಂದೂ ಆ ನಂತರ ಹಿಂತಿರುಗಿ ಬಂದ ಶ್ರೀನರಸಿಂಹ ಭಾರತೀಸ್ವಾಮಿಗಳು

ಶೃಂಗೇರಿಗೆ ಹೋಗದೆ ಕೂಡಲಿಯಲ್ಲಿ ಉಳಿದುಕೊಂಡಿದ್ದರೆಂದೂ. ಅವರು ಅಲ್ಲಿಯೇ ನೆಲೆನಿಂತು ಪ್ರತ್ಯೇಕ ಪೀಠ ಪ್ರಾರಂಭಿಸಿ ಮಠ ಕಟ್ಟಿಕೊಂಡು ಇರುವಂತೆ ಸಂತೇಬೆನ್ನೂರು ನಾಯಕರು ಅವರಿಗೆ ಆಶ್ರಯ ನೀಡಿ ಅನೇಕ ದತ್ತಿ-ದಾನ ಕೊಟ್ಟರಲ್ಲದೆ ಕೂಡಲಿಯಲ್ಲಿ ಪ್ರತ್ಯೇಕ ಶೃಂಗೇರಿ ಮಠ ಒಂದು ಅಸ್ಥಿತ್ವಕ್ಕೆ ಬರುವಂತೆ ವ್ಯವಸ್ಥೆ ಕಲ್ಪಿಸಿಕೊಟ್ಟಿದರೆಂದು ತಿಳಿದುಬರುತ್ತದೆ. ಅದಕ್ಕಾಗಿ ಈಗಲೂ ಕೂಡಲಿಯಲ್ಲಿ ಸಂತೇಬೆನ್ನೂರು ನಾಯಕನ ಉಬ್ಬುಶಿಲ್ಪವೊಂದಕ್ಕೆ ಮಠದಿಂದ ಗೌರವ ಪೂಜೆ ಸಲ್ಲಿಸಲಾಗುತ್ತದೆ.

ಮುಂದೆ ಶೃಂಗೇರಿ ಮತ್ತು ಕೂಡ್ಲಿ ಶೃಂಗೇರಿ ಮಠಗಳ ಮಧ್ಯೆ ನಡೆದ ವಿವಾದಗಳಲ್ಲಿ ಸಂತೆಬೆನ್ನೂರು ನಾಯಕರು ಕೂಡ್ಲಿ ಮಠದ ಪರವಾಗಿ ನಿಂತು ಕೆಲಸ ಮಾಡಿದರೆಂದೂ ಈ ಸನ್ನದುಗಳಿಂದ ತಿಳಿದು ಬರುತ್ತದೆ. ಅಲ್ಲದೆ ಶೃಂಗೇರಿ ಮಠಕ್ಕೆ ಬಿಟ್ಟ ಅನೇಕ ಜಮೀನು ದತ್ತಿದಾನಗಳನ್ನುಕೂಡ್ಲಿಮಠಕ್ಕೆ ಬಿಡಿಸಿಕೊಟ್ಟರೆಂದೂ ಇದರಿಂದ ಈ ನಾಯಕರ ಬಗ್ಗೆ ಶೃಂಗೇರಿ ಮಠದವರಿಗೆ ತೀವ್ರ ಅಸಮಾಧಾನ ಇದ್ದವಿಚಾರ ಆ ಮಠದ 'ಗುರುವಂಶ' ಕಾವ್ಯದಲ್ಲಿ ವ್ಯಕ್ತವಾಗಿದೆ.

"ಸಂತೇಬೆನ್ನೂರು ನಾಯಕರು ಕೂಡ್ಲಿ-ಶೃಂಗೇರಿ ಮಠಕ್ಕೆ ಬರೆಯಿಸಿಕೊಟ್ಟ ೧೫ ಸನ್ನದುಗಳಲ್ಲಿ ೮ ದಾನಶಾಸನಗಳು, ೭ ಲೇಖನಗಳೂ"[5] ಆಗಿವೆ. ಈ ಎಲ್ಲ ದಾನಶಾಸನಗಳ ಮೇಲೆ ಶ್ರೀಪುತ್ರ ಸರಜಹನುಮಪ್ಪ ನಾಯಕ ಎಂಬ ಮುದ್ರೆಯೂ ಕೆಳಗೆ 'ಶ್ರೀರಾಮ' ಎಂಬ ಅಂಕಿತವು ನಾಗರೀಲಿಪಿಯಲ್ಲಿ ಹಾಕಲಾಗಿದೆ.

೪.೨ ನಿರೂಪಗಳು :-

'ನಿರೂಪ' ಎಂಬ ಪದದ ಅರ್ಥ ಕನ್ನಡ ನಿಘಂಟು ಐದನೇ ಸಂಪುಟ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಯಲ್ಲಿ ಕೊಟ್ಟಿರುವಂತೆ "ನಿರೂಪ ಎಂದರೆ ಬರಹ ರೂಪದಲ್ಲಿರುವ ಆಜ್ಞೆ 'ಆಜ್ಞಾಪತ್ರ' ಶಾಸನ, 'ಉಂಬಳಿಪತ್ರ' ಮುಂತಾಗಿ ಕರೆಯಲಾಗಿದೆ."[೪] ಹಿಂದಿನ ಕಾಲದಲ್ಲಿ ನಿರೂಪದ ಚಾವಡಿಗಳೆಂದೇ ಇರುತ್ತಿದ್ದವು. ಆಧುನಿಕ ಕಾಲದಲ್ಲಿ ಪತ್ರಾಗಾರ ಇಲಾಖೆಯೆಂದು ಕರೆಯುವುದಕ್ಕೆ ಹಿಂದೆ ನಿರೂಪದ ಚಾವಡಿಗಳೆಂದು ಕರೆಯುತ್ತಿದ್ದರು. ನಿರೂಪದ ಚಾವಡಿ ಎಂದರೆ 'ಅಪ್ಪಣೆ ಮಾಡುವ ಸ್ಥಳ'. ಇದರಲ್ಲಿ 'ರಾಯಸ'ದವರು ಇರುತ್ತಿದ್ದರು. 'ರಾಯಸ' ಎಂದರೂ ಕೂಡ ಪತ್ರವ್ಯವಹಾರಕ್ಕೆ ಸಂಬಂಧಿಸಿದ ಶಬ್ದ. ಈ ರಾಯಸದವರ ಕೆಲಸ ಅಪ್ಪಣೆಯಾದ ಪತ್ರಗಳನ್ನು ಬರೆದು ಅದರ ನಕಲನ್ನು ಇಟ್ಟುಕೊಂಡು ಜನಗಳಿಗೆ ಕಳುಹಿಸಿಕೊಡುತ್ತಿದ್ದರು. ಜನರಿಗೆ ಕಳುಹಿಸುವಾಗ ದೊರೆಗಳ 'ದಸ್ಕತ್ತು' ಮೊಹರು ಮಾಡಿಸಿ 'ನಿಬಂಧನೆಗಳೊಂದಿಗೆ ಕಳುಹಿಸುತ್ತಿದ್ದರು'. ನಿರೂಪಗಳನ್ನು 'ನಿಬಂಧನೆಗಳು' ಎಂಬುದಾಗಿ ಕೂಡ ಕರೆಯಬಹುದಾಗಿದೆ.

೧. ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ನಿರೂಪಗಳು :

ಕೆಳದಿ ಐತಿಹಾಸಿಕ ದಾಖಲೆಗಳ ಸರ್ವೇಕ್ಷಣೆಯ ಸಂದರ್ಭದಲ್ಲಿ "ಮದ್ರಾಸಿನ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿನ ಮೆಕಂಜಿ ಸಂಗ್ರಹದಲ್ಲಿ ಕಂಡ ಬಂದ ನಿರೂಪಗಳು ಕೆಳದಿ ಅರಸರಿಗೆ ಸಂಬಂಧಿಸಿದವುಗಳನ್ನು ನೋಡಿದಾಗ ತಿಳಿಯುತ್ತದೆ. ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ನಿರೂಪಗಳ ಪಾತ್ರ ಎಷ್ಟೆಂಬುದು ಇಲ್ಲಿ ಒಟ್ಟು ಮೂರು ನಿರೂಪಗಳಿದ್ದು ಮೊದಲನೆ ಎರಡು ಕೆಳದಿ ಚೆನ್ನಮ್ಮಾಜಿಗೂ, ಕೊನೆಯದು ಕೆಳದಿ ಸೋಮಶೇಖರ ನಾಯಕನಿಗೂ ಸಂಬಂಧಿಸಿದ್ದಾಗಿದೆ".[೫]

ಮೊದಲನೆಯ ನಿರೂಪ ರಾಮಪ್ಪನೆಂಬುವನು ಮುಗುವಿನ ಶೀಮೆಯಲ್ಲಿ ಕಟ್ಟಿಸಿದ ವೆಂಕಟೇಶ್ವರ ದೇವಸ್ಥಾನಕ್ಕೆ ಬಿಟ್ಟ ಸ್ವಾಸ್ತವಾದರೆ, ಎರಡನೆಯದು ಕುಂದಾಪುರದ ಚನ್ನಕೇಶವದೇವರಿಗೆ ಬಿಟ್ಟ ಸ್ವಾಸ್ತಿಯನ್ನು ತಿಳಿಸುತ್ತದೆ. ಮೂರನೆಯದು ಕುಂದಾಪುರದಲ್ಲಿ ತಿಮ್ಮ ಶೇನುಬೋಪನು ಕಟ್ಟಿಸಿದ ವಿಠಲದೇವರ ಮಠಕ್ಕೆ ಬಿಟ್ಟ ಸ್ವಾಸ್ತವಾಗಿದೆ.

೨. ನಿರೂಪ ಒಂದು :

ರಉದ್ರಿ ಸಂವತ್ಸರದ ಮಾರ್ಗಶಿರ ಶುದ್ಧ ೩ರಲ್ಲು
ಶ್ರೀಮತು ಕೆಳದಿ ಚಂನ್ನಂಮಾಜಿಯವರು ಬಸಪ್ಪಯ್ಯಗೆ ಬರಶಿ
ಕಳುಹಿಸಿದ ಕಾರ್ಯ ಸೇಮಾರ ರಾಮಪ್ಪ । ತಿಂಮರ್ಸಯ ।
ರಾಜೂರಿಗೆ ಬಂದು ಮುಗುವಿನ ಶೀಮೆಯಲ್ಲು ರಾಮಪ್ಪ
ಕಟ್ಟಿಸ್ತ ದೇವಸ್ಥಾನಕ್ಕೆ ಸ್ವಾಸ್ತಿಯನ್ನು । ಕ್ರಯವ ಕೊಡುತ್ತೇನೆ
ಪಾಲಿಸಿಕೊಳ್ಳಬೇಕು ಯಂದು ಹೇಳಿಕೊಂಡ ಸಂಮಂಧಾ ಯಿತ್ತನ
ಕೈಯಾ। ಗ ೧೭೫ ನೂರಾಯಪ್ಪತ್ತು ಆಯಿದು ವರಹಾಂನ್ನ
ತೆಗೆದುಕೊಂಡು ಬಿಟ್ಟ ಸ್ವಾಸ್ತಿ ಮುಗುವಿನ ಶೀಮೆವಳಗಣ
ಯಡಹಡಲ್ಲಿನ ಗ್ರಾಮದಲ್ಲೂ ನಾಗನ ತಿಂಮಾಮಿ ವರ್ಗದ
ಭೂಮಿಯಿಂದ ಗ ೧೧॥ ಚಕ್ರದ ಮಟದ ಸ್ವಾಸ್ತಿ । ಅರ್ಧ ನಿವಿಶಿದ
ಬಗೆಯಲ್ಲು ॥೧॥೧॥ ಯಿ ದೇವಸ್ಥಾನ ಕಟ್ಟಿದ ತೆಂಗಿನಮರನ
ತೆರು ಗಂ ॥೦/೦ ಅಂದು ಗಂ೩॥೨ ಹದಿಮೂರು ವರಹಾನ್ನ
ಯೇಳು ಗಣ ಬ್ಯಾಳೆ ಸ್ವಾಸ್ತಿ । ಆ ವೆಂಕಟೇಶದೇವರ
ದೇವತಾ ವೆಚ್ಚಕ್ಕೆ ಶಿವಾರ್ಪಿತವಾಗಿ ಬಿಟ್ಟಿದೆ। ರೇಖೆ
ಪ್ರಮಾಣ ಭೂಮಿ ವಿಂಗಡಿಸಿಕೊಡುವುದು। ಯೀ ಭೂಮಿಗೆ
ವಾಮನ ಮುದ್ರೆ ಶಿಲಾಸ್ತಾಪಿತ ಮಾಡಿಕೊಡುವ ಬಗ್ಗೆ
ಹಜರಲ್ಲು ಯಿಗ ಊಳಿಗದ ಲಿಂಗನ ಕಳುಹಿ ಅದೆ
ಯೀತನ ಮುಂತಿಟ್ಟು ಚಉಗ್ರಾಮದವರ । ಕರಶಿಕೊಂಡು
ಗಡಿ ನಿಗದಿ ತತ್ವಾರ ಬಾರದ ರೀತಿ ಸ್ತಳದ ಶ್ಯಾನಭೋವನ ।
ಕೈಯಾ ಚಪ್ಪು ಬರಶಿಕೊಟ್ಟು ವಾಮನ ಮುದ್ರೆ । ಶಿಲಾಸ್ತಾಪಿತ
ಮಾಡಿಶಿ ಆ ವಿವರಕ್ಕೆ ಹಜೂರಿಗೆ ಬರೆಯುವುದು ಯೀ ಕಾಗದ
ಶ್ಯಾನಭೋವನ ಕಡಿತಕ್ಕೆ ಬರೆಶಿ ತ್ತಿರುಗಾ । ಯಿತನ ಕೈಯಲ್ಲಿ
ಕೊಡುವುದು ಬರೆದು ಬಂದ ನಿರೂಪ ಪ್ರತಿ.

ಈ ಮೇಲಿನ ನಿರೂಪದ ವೈಶಿಷ್ಟ್ಯತೆಯೆಂದರೆ ಭಾಷೆ. ಜನರಾಡುವ ಭಾಷೆಯಲ್ಲಿ ನಿರೂಪವನ್ನು ಬರೆದು ಉಳಿಗದವನ ಮೂಲಕ ಕಳುಹಿಸಿಕೊಟ್ಟಿರುವುದು. ಅಲ್ಲಿನ ಧಾರ್ಮಿಕ ರೀತಿ ರಿವಾಜುಗಳು ಹೇಗಿದ್ದವು ಎಂಬುದು ಈ ನಿರೂಪದ ಮೂಲಕ ತಿಳಿದುಬರುತ್ತದೆ.

೩. ನಿರೂಪ ಎರಡು :-

೧೦೨॥ ರಕ್ತಾಕ್ಷಿ ಸಂವತ್ಸರ ಮಾರ್ಗಶಿರ ಶು॥೭ ರಲ್ಲು
ಶ್ರೀಮತ್ಕೆಳದಿ ಚೆಂನಮ್ಮಾಜಿಯವರು ಶಿದ್ದ ಬಸಪ್ಪಯ್ಯಗೆ
ಬರಶಿ ಕಳುಹಿದ । ಕಾರ್ಯ ಕುಂದಾಪುರದಲ್ಲು ದೇವಸ್ಥಾನವ ಕಟ್ಟಿಸಿ ।
ಪ್ರತಿಷ್ಠೆ ಮಾಡಿದ । ಚಂನಕೇಶವದೇವರಿಗೆ ಸ್ವಾಸ್ತಿಯಿಲ್ಲಾ ।
ಮುಗುವಿನ ಶೀಮೆ ಮುಡಕುದುರಿ । ಕಮ್ಮರ ಕೊಡಲ್ಲು ।
ಕಂಚಗೌಡ ಊಚಿಣಲಾಡಿ ಕೋಡಿಗ್ರಾಮದಲ್ಲಿ ಸಹ ಪ್ರಾಕು
ನಷ್ಟಕ್ಕೆ ಕಳದ ಭೂಮಿ ಅಥೆ ಪಾಲಿಶಿ ಕೊಂಡರೆ। ಆ
ಭೂಮಿಯಲ್ಲಿ ತೆಂಗಿನ ಸಶಿಬಾಳೆ ಹಾಕಿಶಿ ಸಾಗುಮಾಡಿ ।
ದೇವತಾ ಶೇವೆ । ನಡೆಶಿಕೊಂಡು ಬಂದೆನೆಂದು ರಾಯನು
ಹೇಳಿ ಕೊಂದ। ಸಂಮಂಧಾ ಬಿಟ್ಟ ಸ್ವಾಸ್ತಿ ಮುಗುವಿನ
ಶೀಮೆಯಿಂದಾ । ಪ್ರಾಕುಕಳೆದ ನಷ್ಟದಿಂದ ಮುಂಡಕುಮ
ಆ ಗ್ರಾಮದಿಂದ । ಗ೯೨।೦ ಚಂನಕಮರಿಯಲ್ಲು ।
ಗ೯೦ ಉಭಯಂ । ಗ೪೯೨। ಕಂಮರ ಕೊಡಲ್ಲು ಗ್ರಾಮದಿಂದಾ ।
ಗ ೩೯೧ ಕಂಚಗೌಡ ಗ್ರಾಮದಿಂದಾ ೧೭॥೧॥ ಅಚಿಣಲಾಡಿ
ಗ್ರಾಮದಿಂದ । ಚಕ್ರಸಾನಂತನ ಸ್ವಾಸ್ತಿಯಲ್ಲು ಗ ೩॥೩೧॥ ಅಂತು
।ಗ೧೮॥೩= ಹದಿನೆಂಟು ವರಹಾಂನು ಯೆಂಟು ಹಣ
ಬೇಳೆ ಸ್ವಾಸ್ತಿಯಂನು ದೇವತಾವೆಚಕ್ಕೆ ಶಿವಾರ್ಪಿತವಾಗಿ
ಬಿಟ್ಟೆವು । ಸಸಿಬಾಳೆ ಮುಂತಾಗಿ ಸಾಗು ಮಾಡಿಕೊಂಡು
ಅದ ಹುಟ್ಟುವಳಿ ಆದಾಯ ವೆಚ್ಚದಿಂದಾ ದೇವತಾ ಶೇವೆಯನ್ನು
ಸಾಂಗವಾಗಿ ನಡೆಶಿ ಬಾಹಾಗೆ ಕಟ್ಟು ಮಾಡಿಯೆದೆವೆ ।
ರೇಖೆ ಪ್ರಮಾಣು ಭೂಮಿಯಂನು ವಿಂಗಡಿಸಿಕೊಟ್ಟು ಯಿ ಕಾಗದ
ಶೇನಬೋವನ ಕಡಿತಕ್ಕೆ ಬರಶಿ ತಿರುಗಾ ಯೀತನ ವಶಕ್ಕೆ
ಕೊಡಿಶಿ ಕೊಡುವುದು ಯಂದು ಬರದ ನಿರೂಪ ಪ್ರತಿ.

ಕೆಳದಿ ಅರಸರಿಗೆ ಸಂಬಂಧಿಸಿದಂತೆ ಸುಮಾರು ಇನ್ನೂರಕ್ಕೂ ಹೆಚ್ಚು ನಿರೂಪಗಳು ಲಭ್ಯವಿದ್ದು, ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅರಸರು ದೇವಸ್ಥಾನ ಇತ್ಯಾದಿ

ಧರ್ಮಕಾರ್ಯಗಳಿಗೆ ಬಿಟ್ಟ ಸ್ವಾಸ್ತಿಯ ಬಗ್ಗೆ ಹಾಗೂ ಅವರಿಗೆ ಎಲ್ಲ ಧರ್ಮಗಳಲ್ಲಿಯೂ ಇದ್ದ ಧರ್ಮ ಶ್ರದ್ಧೆಯ ಬಗ್ಗೆ ತಿಳಿದುಬರುತ್ತದೆ.

೪. ನಿರೂಪಗಳ ಪರ್ಯಾಯ ರೂಪಗಳು :-

ನಿರೂಪಗಳಲ್ಲಿ ವಿಶಿಷ್ಟ ಬಗೆಗಳಿರುತ್ತವೆ. ಇವುಗಳಿಗೆ ಸಮಾನ ಅರ್ಥ ನೀಡುವ ದಾಖಲೆ ಪತ್ರಗಳನ್ನು ಕೂಡ ನೋಡಬಹುದು. ನಿರೂಪಗಳಿಗೆ ಸಮಾನವಾಗಿ 'ಶಿಸ್ತು' 'ಹುಕುಂ' ಅಥವಾ 'ಹುಕುಂನಾಮೆ'ಗಳೆಂದು ಕರೆಯಬಹುದಾದ ನಿರೂಪಗಳು ಕಂಡುಬರುತ್ತವೆ. ಉದಾಹರಣೆಗೆ "ಕೊಡಗಿನ ದೊಡ್ಡವೀರರಾಜೇಂದ್ರ ಒಡೆಯನ ಶಿಸ್ತು, ಹುಕುಂನಾಮೆ-ನಿರೂಪಗಳು"[೫]

ಶಿಸ್ತು ಎಂಬ ಪದ 'ಸಿಸ್ತ' ಎಂಬ ಪರ್ಶಿಯನ್ ಭಾಷಾ ಶಬ್ದದ ನಮ್ಮ ದೇಶೀಯ ರೂಪವಾಗಿ ಬಳಕೆಯಾಗಿದೆ. 'ಸಿಸ್ತ' ಎಂದರೆ ಆಧುನಿಕ ಪಾರಿಭಾಷಿಕ ಅರ್ಥದಲ್ಲಿ ಪ್ರಮಾಣ ಭೂತವಾದ 'ಭೂಕಂದಾಯ'ದ ದರ ಎನ್ನುವುದಿದೆ. ಗದ್ದೆ, ಬೆದ್ದಲು, ತೋಟವೆಂದು ಮೂರು ಪ್ರಕಾರದ ವಿಂಗಡಣೆಯಲ್ಲಿ ಮತ್ತು ಉಪಪ್ರಕಾರಗಳಿದ್ದು ನೀರಾಸರೆಲಭ್ಯತೆ, ಬೆಳೆದ ಬೆಳೆಗಳು, ಮಣ್ಣಿನ ಸ್ವಭಾವ ಇವುಗಳನ್ನು ಅವಲಂಬಿಸಿ ವಿಂಗಡನೆ ಮಾಡಿ ಭೂಮಿಯನ್ನು ಅಳೆಯಲು ವಿವಿಧ ಮಾನಗಳನ್ನು ಬಳಸಿರುವುದಿದೆ. ಇವುಗಳನ್ನು ಆಧರಿಸಿ ಭೂಕಂದಾಯ ನಿಗದಿ ಮಾಡುವ ಪದ್ಧತಿ. ಇದಕ್ಕಾಗಿ ಹೊರಡಿಸುವ ಆಜ್ಞಾ ಪತ್ರಗಳೇ ನಿರೂಪಗಳು.

'ಶಿಸ್ತು' ಎಂದರೆ ಗುರಿ, ಲಕ್ಷ್ಯ ಹಾಗೂ ಕಂದಾಯ ತೆರಿಗೆ ಎಂಬ ಅರ್ಥಗಳನ್ನು ರಾಜೇಂದ್ರನಾಮೆಯಿಂದ ಹೆಕ್ಕಿ ಕನ್ನಡ ಕನ್ನಡ ನಿಘಂಟು ನೀಡಿದೆ. ಕಂದಾಯ ಬಾಕಿ ನಿಂತ ಕುಳಗಳ ದಾಖಲೆಯ ಪುಸ್ತಕ ಕಟ್ಟು ಎಂದೂ ನಮೂದಿಸಿದೆ. ಅಳತೆಮಾನಗಳು, ಭೂಮಾಪನ ದಾಖಲೆಗಳ ಹಾಗೂ ಜನಜೀವನದ ಸಾಂಸ್ಕೃತಿಕ ದಾಖಲೆಯ 'ಕಟ್ಟಿನ ಹಸ್ತಲಿಖಿತ ಪುಸ್ತಕ'ವಾಗಿಯೂ ವೀರರಾಜೇಂದ್ರ ಒಡೆಯನ ಶಿಸ್ತು ಕಾಣಬರುತ್ತದೆ. ಅದಲ್ಲದೆ ನಮ್ಮ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆ, ಮೈಸೂರು, ಕೆಳದಿ, ವಿಜಯನಗರ ಹಾಗೂ ಕೊಡಗನ್ನು ಆಳಿದ ಪ್ರಾಚೀನ ಅರಸುವಂಶಗಳ ಆಡಳಿತ ಪದ್ಧತಿಯ ಈ ಸಂಬಂಧದ ಅಂಶಗಳ ಪ್ರಭಾವ ಕಾಣಬರುತ್ತದೆ. ಇದು ಹುಕುಂನಾಮೆ, ನಿರೂಪಗಳಿಗೂ ಅನ್ವಯವಾಗುತ್ತದೆ.

ಶಿಸ್ತುವಿನಲ್ಲಿ ಶಿಸ್ತುಸಂಖ್ಯೆ, ವರ್ಗದ ಹೆಸರು, ಭಟ್ಟಿ ಪ್ರಮಾಣ ಒಂದು ಬೈಲು (ಗದ್ದೆ)ವಿಗೂ ಇನ್ನೊಂದು ಬೈಲುವಿಗೂ ಇರುವ ಅಂತರ ಬೈಲುವಿನ ಹಕ್ಕುದಾರ ಗದ್ದೆಯ ಠಾಣೆಕಲ್ಲು (ಗಡಿ)ಗಳ ವಿವರ ರೈತವಾರಿ ವರ್ಗಪದ್ಧತಿಗನುಗುಣವಾಗಿ ವಿವಿಧ ಬಗೆಯ ಹಿಡುವಳಿ (ವರ್ಗದಾರರ ಹೆಸರು ಸಹಿತ)ಗಳಾದ ಬಾಣೆ, ಬಾರಿಗೆ, ಹಿತ್ಲುಮನೆ, ಊರುಗುಪ್ಪೆ, ಉರುಡುವೆ, ದೇವರಕಾಡು, ಜಮ್ಮಮಲೆಗದ್ದೆ,

ಒಂಟಿ ಹೊಲ ಇತ್ಯಾದಿಗಳ ನಮೂದನೆಯೂ ಇದೆ. ಜಮ್ಮ ಹಾಗೂ ಸಾಗೂ ಭೂಮಿಗೆ ನಿಗದಿತ ಕಂದಾಯ ದರದ ನಮೂದು ಇದೆ. ಸೈನಿಕ ಅಥವಾ ಅರಮನೆ ಸೇವೆ ಸಲ್ಲಿಸಿದವರಿಗೆ ಜಮ್ಮ ಭೂಮಿ (ವಂಶಪಾರಂಪರ್ಯವಾದ ಹುಟ್ಟು ಹಕ್ಕಿನ ಭೂಮಿ)ಯಾಗಿ ನೀಡಿಕೆ ಹಕ್ಕು ಅದಕ್ಕಾಗಿ ರಿಯಾಯಿತಿ ದರದ ಕಂದಾಯ ನಮೂದು ಕೂಡ ಇದೆ. ಇದಕ್ಕೆ 'ಹುಕುಂ' ರೂಪದ ನಿರೂಪಗಳು ಚಾಲ್ತಿಯಲ್ಲಿದ್ದದು ಕಂಡುಬರುತ್ತದೆ.

೪.೩ ದಾನಪತ್ರಗಳು :-

ಭಾರತೀಯ ಸಂಸ್ಕೃತಿಯ ಜೀವಾಳವೇ 'ದಾನ-ಧರ್ಮ'. ರಾಮಾಯಣ-ಮಹಾಭಾರತದ ಕಾಲದಿಂದಲೂ ತ್ಯಾಗ ಬಲಿದಾನಗಳಿಗೆ ಭಾರತವು ಪ್ರಸಿದ್ಧವಾಗಿದೆ. ತ್ಯಾಗಕ್ಕೆ ಬಲಿ ಚಕ್ರವರ್ತಿ, ದಾನಕ್ಕೆ - ಕರ್ಣ, ಧರ್ಮಕ್ಕೆ - ಧರ್ಮರಾಯ, ಸತ್ಯಕ್ಕೆ - ಹರಿಶ್ಚಂದ್ರ, ಒಬ್ಬೊಬ್ಬರೂ ಒಂದೊಂದಕ್ಕೆ ಪ್ರತೀಕವಾಗಿದ್ದಾರೆ. ಅಶೋಕ ಚಕ್ರವರ್ತಿಯ ದಾನ-ಧರ್ಮಗಳು ಲೆಕ್ಕವಿಲ್ಲದಷ್ಟು, ಆಶೋಕನು ಕೆರೆಗಳಣ್ನು ಕಟ್ಟಿಸಿದ, ರಸ್ತೆಗಳನ್ನು ಮಾಡಿಸಿದ, ಸಾಲುಮರಗಳನ್ನು ನಡೆಸಿದ, ಅರವಟಿಗೆಗಳ ಇಡಿಸಿದ, ಬಾವಿಗಳನ್ನು ತೋಡಿಸಿದ ಎಂಬ ಮಾತುಗಳು ಸಾವಿರಾರು ವರ್ಷಗಳು ಕಳೆದರೂ ಜನಜನಿತವಾಗಿದೆ. ಆತನ ದಾನ-ದತ್ತಿಯನ್ನು ಕುರಿತ ಎಷ್ಟೋ ಶಾಸನಗಳು ಈಗಲೂ ದೇಶದಾದ್ಯಂತ ದೊರಕುತ್ತವೆ. ಕರ್ನಾಟಕದಲ್ಲಿಯೂ ಅಶೋಕನ ಕೆರೆಗಳನ್ನು ಕಟ್ಟಿಸಿರುವುದಕ್ಕೆ ಅನೇಕ ಶಾಸನಗಳನ್ನು ನೋಡಬಹುದು. ಗಂಗ-ಕದಂಬ ಮುಂತಾದ ರಾಜವಂಶದವರು ಅಗ್ರಹಾರಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಿರುವುದಕ್ಕೆ ಅನೇಕ ನಿದರ್ಶನಗಳನ್ನು ಆಯಾ ಕಾಲದ ಶಾಸನಗಳಲ್ಲಿ ಕಾಣುತ್ತೇವೆ. ಅಂದರೆ ಪ್ರಾಚೀನ ಕಾಲದಲ್ಲಿ ದಾನಶಾಸನಗಳನ್ನು ಶಿಲೆಗಳಲ್ಲಿ ತಾಮ್ರ ಪಟಗಳಲ್ಲಿರುವುದನ್ನು ನೋಡುತ್ತೇವೆ. ಅದೇ ರೀತಿ ಮಧ್ಯಯುಗದಿಂದೀಚೆಗೆ ತಾಳೆಗರಿಗಳಲ್ಲಿ ನೋಡುವುದು ತುಂಬಾ ವಿಶಿಷ್ಟವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ "ಡಾ.ಎಚ್.ಎಸ್.ಗೋಪಾಲರಾವ್ ಅವರು ಸಂಗ್ರಹಿಸಿರುವ ಐದು ದಾನಪತ್ರಗಳು ಓಲೆಗರಿಗಳಲ್ಲಿರುವುದನ್ನು ಇತಿಹಾಸ ದರ್ಶನ ಸಂಪುಟ-೧೩/೧೯೯೮ರಲ್ಲಿ ಪ್ರಕಟಿಸಿರುವುದನ್ನು ನೋಡಬಹುದು."[೬]

ಈ ಐದು ದಾನಪತ್ರಗಳೂ ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಓಲೆಗರಿಗಳಲ್ಲಿ ದಾಖಲಾಗಿವೆ ಎಂಬುದೇ ಇಲ್ಲಿನ ವಿಶೇಷ. ಏಕೆಂದರೆ ಇವುಗಳು ನೇರವಾಗಿ ಹಸ್ತಪ್ರತಿ ದಾನಪತ್ರಗಳು ಎಂಬುದಕ್ಕೆ ನೇರ ನಿದರ್ಶನ.

ಮಾಗಡಿಯಲ್ಲಿ ದೊರೆತಿರುವ ಈ ದಾನಪತ್ರಗಳು ಕ್ರಿ.ಶ.೧೭೪೦(ಶಾಲಿವಾಹನ ೧೬೬೨) ರಿಂದ ಆರಂಭವಾಗಿ ಕ್ರಿ.ಶ.೧೭೬೩ (ಶಾಲಿವಾಹನ ೧೬೮೫)ರ ವರೆಗಿನ ಅವಧಿಯಲ್ಲಿ ಮಾಗಡಿಯ ಆಸುಪಾಸಿನಲ್ಲಿ ಪ್ರಚಲಿತವಿದ್ದ ಭೂಮಿಯ ಶುದ್ಧಕ್ರಯದಾನಗಳ ಬಗೆಗೆ ತಿಳಿಯಲು ಸುರುಳಿಯಾಗಿ ಸುತ್ತಿಟ್ಟಿದ್ದ ಐದೂ ದಾನ ಪತ್ರಗಳು ನೆರವಾಗುತ್ತದೆ. ೧೮ನೆಯ ಶತಮಾನದ ವೇಳೆಗೆ ಭೂವ್ಯವಹಾರಗಳು, ತಾಮ್ರಪತ್ರದ ಬದಲು ಓಲೆಗರಿಗಳ ಮೇಲೆ ದಾಖಲಾಗುತ್ತಿದ್ದ ಕ್ರಮವನ್ನು ಈ ದಾನಪತ್ರಗಳ ಮೂಲಕ ತಿಳಿಯಬಹುದಾಗಿದೆ.

ಅಲ್ಲದೆ ಈ ಐದು ದಾನಪತ್ರಗಳಿಂದ ನಮಗೆ ತಿಳಿದುಬರುವುದೇನೆಂದರೆ ಆ ಕಾಲದ ಭೂವ್ಯವಹಾರಗಳು ಹೇಗೆ ನಡೆಯುತ್ತಿದ್ದವು ಮತ್ತು ಸಾಂಸ್ಕೃತಿಕವಾಗಿ ಭೂಮಿಯನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬ ಸಾಮಾಜಿಕ ಅಂಶ ಗೊತ್ತಾಗುತ್ತದೆ. ಭೂಮಿಯನ್ನು ಮಾರುವುದು ಮತ್ತು ಕೊಳ್ಳುವುದು ಅದೊಂದು ವಾಣಿಜ್ಯ ಸಂಗತಿಯೇ ಆದರೂ ಭಾರತೀಯ ಸಾಂಸ್ಕೃತಿಕ ಸಂದರ್ಭಗಳಲ್ಲಿ ಅದೊಂದು ದಾನದ ವಸ್ತುವಾಗಿ ನಮ್ಮಲ್ಲಿ ರೂಢಿಯಲ್ಲಿತ್ತು. 'ಭೂದಾನ' ಎಂಬುದು ಸಂಪೂರ್ಣ ಮನಷ್ಯನ ತ್ಯಾಗಮಯ ಜೀವನದ ಪ್ರತೀಕವಾದರೆ, 'ಕ್ರಯ' ಎಂಬುದು ವಾಣಿಜ್ಯ ಸಂಕೇತವಾಗಿರುತ್ತಿತ್ತು. ಇಂತಹ ವಾಣಿಜ್ಯೀಕರಣದ ಅಂಶದಲ್ಲಿಯೂ 'ದಾನ' ಎಂಬ ಸಾಂಸ್ಕೃತಿಕ ಪ್ರತೀಕವಾಗಿ ಭೂಮಿಯನ್ನು ಭಾರತೀಯ ಸಮಾಜದಲ್ಲಿ ನೋಡತ್ತಿದ್ದರು ಎನ್ನುವುದು ಈ ಐದು ದಾನಪತ್ರಗಳಿಂದ ತಿಳಿದುಬರುತ್ತದೆ. ಈ ಎಲ್ಲಕ್ಕಿಂತ ಮುಖ್ಯವಾಗಿ ಆಧುನಿಕ ಕಾಲದಲ್ಲಿ ಭೂ ಕ್ರಯ-ವಿಕ್ರಯಗಳಿಗೆ ಛಾಪಾಕಾಗದಗಳನ್ನು ಬಳಸುತ್ತಿರುವುದು ಈ ಕಾಲದ ಭಾಷೆಗೂ ಆ ಕಾಲದ ಭಾಷೆಗೂ ವ್ಯತ್ಯಾಸ, ಕಾಗದ ಪತ್ರಗಳ ಕಾಲದಲ್ಲಿಯೂ ತಾಳೆಗರಿಯ ಮೇಲಿನ ಭೂವ್ಯವಹಾರ ಅದರಲ್ಲಿಯೂ ಒಂದು ಕ್ರಯ ಪತ್ರ ಓಲೆಗರಿಯ ಮೇಲೆ ನಮಗೆ ಇಂದೂ ಕೂಡ ದೊರಕುತ್ತವೆ ಎಂದರೆ ಹಸ್ತಪ್ರತಿಶಾಸ್ತ್ರದ ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತದೆ ಎಂದು ಭಾವಿಸಬಹುದು.

೪.೪ ವಂಶಾವಳಿ ಪತ್ರಗಳು :-

ಆಳಿ ಅಳಿದು ಹೋದ ರಾಜವಂಶಗಳ ಅನುಕ್ರಮಣಿಕೆಯನ್ನು ಈ ವಂಶಾವಳಿ ಪತ್ರಗಳು ತಿಳಿಸುತ್ತವೆ. ಆಯಾ ಕಾಲದ ಚಾರಿತ್ರಿಕ ಘಟ್ಟಗಳನ್ನು ಸೂಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಲ್ಲದೆ ಆ ಕಾಲದ ಸಾಂಸ್ಕೃತಿಕ ಅಂಶಗಳು, ಸನ್ನಿವೇಶ-ಸಂದರ್ಭಗಳನ್ನು ಸವಿಸ್ತಾರವಾಗಿ ಖಚಿತಪಡಿಸುವಲ್ಲಿ ವಂಶಾವಳಿ ಪತ್ರಗಳು ಸಹಕರಿಸುತ್ತವೆ. ಈಗಲೂ ನಾವು ಯಾವುದಾದರೂ ಭೂದಾಖಲೆಯ ವಿಷಯಗಳನ್ನು ಖಚಿತ ಪಡಿಸಿಕೊಳ್ಳಲು ವಂಶವೃಕ್ಷದ ಮೊರೆ ಹೋಗುವುದನ್ನು ಕಂದಾಯ ಇಲಾಖೆಗಳಲ್ಲಿ ಕಾಣುತ್ತೇವೆ. ಆದ್ದರಿಂದ ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ವಂಶಾವಳಿ ಪತ್ರಗಳ ಅಗತ್ಯ ಕಾಣಬರುತ್ತದೆ. ನಮಗೆ ದೊರೆತಿರುವ ಈ ವಂಶಾವಳಿ ಪತ್ರಗಳಿಗೆ ಉದಾಹರಣೆಯೆಂದರೆ ಹಂಪೆಯ ಮುಖ್ಯ ಗೋಪುರ ನಿರ್ಮಾತೃ ಶ್ರೀಬಿಷ್ಟಪ್ಪಯ್ಯನವರು ಮತ್ತು ಅವರ ಸಂತತಿಯವರ ದಾಖಲೆ ಪತ್ರವನ್ನು ನೋಡಬಹುದು. ಅದು ಈ ರೀತಿ ಇದೆ.

" ಶ್ರೀಬಿಷ್ಟಪ್ಪಯ್ಯನವರು ಮತ್ತು ಅವರ ಸಂತತಿಯ ದಾಖಲೆ ಪತ್ರ"

ಶ್ರೀಗಣೇಶಾಯನಮಃ
ಶ್ರೀಬಿಷ್ಟಪ್ಪೈಯಾ ಮಹಾಪುರುಷ ಯಿವರು ಶಕೆ ೧೫೪೦
ಕೀಲಕ ಸಂ।ರದಲ್ಲಿ ಹುಟ್ಟಿದರು ಯಿವರ ತಂದಿ ಹೆಸರು
ಅೈಯಂಭಟ ಜ್ಯೊಶ್ ಯಿವರು ಹರಪನಹಳ್ಳಿ ತಾಲೂಕ
ಪೈಕಿ (ಪಹಣಿ) ಜೋಯಿತನದ ವೃತ್ತಿಹಳ್ಳಿ ಮಾಡಿಕೋತಾಯಿದ್ದರು.
ಸದರಿ ಬಿಷ್ಟಪೈಯಾ ಯಿವರು ಬೆಟ್ಟದ ಮಲ್ಲಪ್ಪನ ಗೊಹಾದಲ್ಲಿ
ಮತ್ತು ಆಲದ ಮರದ ಪೊಳ್ಳಿನಲ್ಲಿ ಅನುಷ್ಠಾನ ಮಾಡಿದರು
ಬೇಡದ(ರ) ಜಾತಿಯವನಾದ ಗೋಣಿಗ್ಯಾಯಂಬುವನ ಬಾಯಿಯಲ್ಲಿ
ವಿಭೂತಿ ಹಾಕು ವುಪದೇಶ ಮಾಡಿದರು ಅವನೇ
ಗುಂಬಗೋಳ ಗೋಣಿಬ್ಸ(ಬಸ)ಪ್ಪನು ಸದರಿ ಬಿಷ್ಟಪೈಯಾ
ಯಿವರ ಹೆಂಡತಿ ಲಕ್ಷ್ಮಿಬಾಯಿಯವರು ಸ್ವಾಗಿಯಲ್ಲಿ ಅಗ್ನಿಪ್ರವೇಶ
ಮಾಡಿ ಆಕೆ ಮಾರ್ಗವಾಗಿಹಂಪಿಗೆ ಬಂದು
ಹಂಪಿಗೋಪುರದಲ್ಲಿ ಕೂತಕೊಂಡರು. ಆ ಮೇಲೆ

ಗೋಪುರ ಕೆಲ್ಸ(ಲಸ) ಪೂರಾ ಮುಗಿತು ಗೋಪುರ ಕೆಲ್ಸ
ಕೂಲಿ ಆಳಿಗೆ ಸದಾ ಸ್ವಾಮಿಯವರು ಮಜೂರಿ ಯಂಬದಲಾ
ವಂದೊಂದು ಹುಲ್ಲಖಡ್ಡಿಕೊಡುತಿದ್ದರು ನಶಿಬ್ಸರಿಯಾಗಿ ಭಂಗಾರ
ಆಗುತಿತ್ತು ಮತ್ತು ಸದರಿಯವರು ಹರ್ಪನಳ್ಳಿ ಜಾಹಗೀರದಾರನ
ಫೌಜಿಗೆ ಹುಣ್ಸೆಮರಕ್ಕೆ ಛಡಿಯಿಂದಾ ಮಂತರ್ಸ ಪೆಟ್ಟು ಹೊಡೆದು
ಸಾಕಾಗುವಷ್ಟು ಸದರಿ ಗಿಡದಿಂದಾ ಹಾಲು ಹೊರಡ್ಸಿ
ಗಳಗಿಯಂಬೋವೂರಲ್ಲಿ ಹೊಲದಲ್ಲಿ ಹರಕಗಳಿಗಿ ಲೈದು
ಮಾರತನಕಾ ತನ್ನಿಂದ ತಾನೇ ನಡ್ಸದರು ಅದರ ಮುಖದಲಾ
ಅಷ್ಟು ಜಮೀನು ಅವರಿಗೆ ಯಿನು ನಡದರೆ ಅದೆ ಮರದಲ್ಲಿ
ದೇವರು ಬೇಕು ಅಂಬೋವುದ್ದಿಶ್ಯದಿಂದ ದೊಡ್ಡದೊಂದು
ಪಂಚಲೋಹದ ದೇವರು ಮಾಡಿದರು ಅಡಿ ಯೋಗಾ
ಮಠದಲ್ಲಿರುವ ಮಹಾಲಿಂಗೇಶ್ವರ ದೇವರು ವಂದು ದಿವ್ಸ
ಅಡ್ವಿಯಲ್ಲಿರುತ್ತಿರಲಿಕ್ಕೆ ಮೊಗಲಾಯರ ಸಾವಿರಾದಂಡು ಬಂತು
ಅದ್ಕ ತಾವು ಮೊದಲಿಗೆ ಅಡ್ವಿಗೆ ಬರಬೇಕಾದರೆ ವಂದು
ತಂಬಿಗಿ ನೀರು ಯರಡು ಮುಷ್ಟಿ ನನೆಗಡ್ಲಿ ತಂಮ್ಮಾ ಸಂಗಡಾ
ತೆಗೆದುಕೊಂಡು ಹೋಗಿದ್ದರು. ಅದನ್ನು ದಂಡಿನ ಪೈಕಿ ಪ್ರತ್ಯೇಕ
ಮನುಷ್ಯನಿಗೆ ಅಷ್ಟಷ್ಟೇ ಕೊಟ್ಟು ತಿರಗಿ ಯಲ್ಲಾ ದಂಡು
ಹೋದ ನಂತರ ಮೊದಲು ತಂದಷ್ಟು ತೊಲಿ ಕೆಳಗಿಕೂತು
ಅನುಷ್ಠಾನ ಮಾಡುವ ಕಾಲಕ್ಕೆ ಆ ತೊಲಿಯು ಶೀಳಿಬಿಟ್ಟಿತು.
ಅದಕ್ಕೆ ಮೂರಬೊಟ್ಟು ವಿಭೂತಿ ಹಚ್ಚಿ ಸದರಿ ಕೀಳಿದ ಜಾಗಕ್ಕೆ
ಅದನ್ನು ಹಾಕಿ ನಿಂದ್ರಿಶಿದರು ಯಿಗ್ಯೂ ಸದರಿ ಗುರ್ತು ಹಾಂಗೆ
ಅದೆ ಅವರು ತಮ್ಮ ವಮಶಿನ ವರುಷಾ ಸನ್ಯಾಸ ತಕ್ಕೊಂಡು
ಮುಂದೆ ಆದ ವರುಷ ಅಂದ್ರೆ ಶಕೆ ೧೬೨೦ನೆ ದರದಲ್ಲಿ ತಂಮ್ಮ
ವಯಿಶಿನ ವರುಷದಲ್ಲಿ ಪರಂಧಾಮಕ್ಕೆ ಹೋಗಬೇಕು ಅಂತ್ತಾ
ಆಲೋಚನಾ ಮಾಡಿ ಸರ್ವಶಿಷ್ಯವರ್ಗಕ್ಕೂ ಮತ್ತು ದೊಡ್ಡ ದೊಡ್ಡ
ಗ್ರಹಸ್ಥರನ್ನು ಕರಿ ಕಳಸಿ ನಾಂವು ಪರಂಧಾಮಕ್ಕೆ ಹೋಗುತ್ತೇವೆ ಅಂತ್ತಾ ಹೇಳಿ

ತಂಮ್ಮ ಮೈಮೇಲಿನ ಭ್ಯಾಟಿ ಮಡಕೆ ಮಾಡಿ ಅದನ್ನು ತುಂಗಭದ್ರಾ
ಪ್ರವಾಹದ ಮೇಲೆ ಹಾಸಿ ಅದರ ಮೇಲೆ ತಾವು ಕೂತಕೊಂಡು
ಯಲ್ಲರಿಗೆ ಫಲಮಂತರಾಕ್ಷತಿ ಕೊಟ್ಟು ನದಿ ಆಚೆ ದಂಡಿಗೆ ಬಿದರಹಳ್ಳಿ
ಕ್ಷೇತ್ರ ಹತ್ತರಾ ದುರ್ಗದ ಕಲ್ಲು ಅಂತ್ತಾ ದೊಡ್ಡದೊಂದು
ಬಂಡಿಗಲ್ಲು ನದಿಯಲ್ಲಿ ಅದೆ ಅದರ ಹತ್ತರಾ ಶೆಕೆ ೧೬೨೦
ಭಾದ್ರಪದ ಶುದಿವ್ಸ ಸದರಿ ಬಿಷ್ಟಪೈಯನವರು ಲೈಕ್ಯರಾದರು.
ಆ ಮೇಲೆ ಶಿಷ್ಯರೂ ಡಿದ ಯಲ್ಲಾ ಮಂದಿ ಹರಹರ
ಮಹಾದೇವಂತ್ತಾ ಗರ್ಜನೆಮಾಡಿದರು.
ಯಿಗ್ಯೂ ಆ ಗಾದಿ ಮೇಲೆ ಕೂತ ಯಜಮಾನರು ಶಿವರಾತ್ರಿ
ದಿವ್ಸ ಸದರಿ ಬಂಡಿಗಲ್ಲು ಹತ್ತಿರಾ ಹೋಗಿ ರುದ್ರ ಅಭಿಷೇಕ ಮಾಡತಾರೆ
ಅಕ್ಕಿ ಅನೇಕ ತರದ ಪುಷ್ಪಗಳು ಮೇಲೆ ತೇಲುತ್ತದೆ ಬಿಲ್ವಪತ್ತರಿ ಯಷ್ಟು
ಹಾಕಿದಾಗ್ಯಾದರೂ ಅದು ವಳಗೆ ಹೋಗುತ್ತದೆ ಸದರಿ ಬಿಷ್ಟಪೈಯಾ ಯಿವರ
ಹೊಟ್ಟಿಲೆ ಶಿವಪೈಯಾ ಯಿವರು ಶೆಕೆ ೧೫೮೦ನೇದರಲಲಿ ಹುಟ್ಟಿದರು
ಯಿವರು ಹೊಟ್ಟಿಲೆ ಮಹಾ ।ಶೆಕೆ ೧೬೨೩ನೆದರಲ್ಲಿ ಭಾದ್ರಪದ ಶ್ರು
ದಿವ್ಸ ದೇಹ ಯಿಟ್ಟರು. ಯಿವರ ಹೊಟ್ಟಿಲೆ ಮಹಾದೇವಪೈಯಾ
ಯಿವರು ಶೆಕೆ ೧೬೨೩ನೇದರಲ್ಲಿ ಹುಟ್ಟಿದರು. ಯಿವರು
ತಂಮ್ಮ ಅಂಜರದರಾದ ಬಿಷ್ಟಪೈಯನವರು ಕಟ್ಟಿಸಿದ ಹಂಪಿಗೋಪುರ
ಮೇಲೆ ಶಿಖರ ಯಿಟ್ಟರು ಸದರಿಯವರು ವಂದೇ ದಿವ್ಸದಲ್ಲಿ
ಲಕ್ಷ್ ಬ್ರಾಂಹ್ಮರ ಅನ್ನಸಂತರ್ಪಣೆ ಮಾಡಿದರು ಆಗ್ಯೆ ಹುರಣಕ್ಕೆ
ಬೆಲ್ಲಾ ಯಿಲ್ಲಾ ಅಂತಾ ಚೊಂಭಾಟಿ ಆಯಿತು. ಆಗ್ಯೆ ಸದರಿ
ಸ್ವಾಮಿಯವರು ಯಿನ್ನೊಂದು ಯರಡ ಘಳಿಗೆ ವಳಗೆ ಶ್ರೀ
ಮಾರುತ್ತಿದೇವರು ನೂರ ಹೇರು ಬೆಲ್ಲಾ ತೆಗೆದುಕೋಂಡು ಬರುತ್ತಾನ ಅಂತ್ತಾ
ಹೇಳಿದರು ಅದರಂತೆ ಯಾವನೊಬ್ಬ ಗ್ರಹಸ್ಥನು ನೂರಹೇರು
ಬಿಲ್ಲಾ ತೆಗೆದುಕೊಂಡು ಬಂದ್ರು. ಆ ಬೆಲ್ಲದ ಹಲಿಗಿಯಲ್ಲಿ ವಂದು ಕಲ್ಲಿನ
ಮಾರುತಿ ಮೂರ್ತಿ ಹೊರಟಿತು ಅದೆಯಿಗಾ ರಂಗಾಪುರ
ಮಠದಲ್ಲಿ ಅದೆ ಸದರಿ ಮಹಾದೇವಪ್ಪಯಾ ಯಿವರು
ಶ್ರೀಮಹಾಲಿಂಗೇಶ್ವರ ಸಮಾರಾಧನಿ ಕಾಲಕ್ಕೆ ತುಪ್ಪಾ ಕಡ್ಮಿಬಿತ್ತು

ಆಗ್ಯೆ ತುಂಗಭದ್ರಾ ನದಿಯ ವಳಗಿನ ನಾಲ್ಕು ಲೈದು ಕೊಡ ನೀರು ತುಂಬಿಸಿ ತಂದು ಸದರಿ ಕೊಡ್ಕ ತೀರ್ಥಪ್ರೋಕ್ಷಣೆ ಮಾಡಲು ನೀರು ತುಪ್ಪ ಆಯಿತು ಅದನ್ನೆ ಬಡ್ಸವರು ಆಗಂತರಾತು ಪ್ಪ ಬಂದ ನಂತರ ಗಂಗಮ್ಮನ ಸಾಲಾ ಯಿರಬಾರದು ಅಂತಾ ಸದರಿ ತುಪ್ಪ ಹೊಳಿಯಲ್ಲಿ ಹಾಕ್ಸಿದರು ಅವರು ಮಕ್ಕಳು ಬಿಷ್ಟಪ್ಪೈ ಯಾ ಯಿವರು ಶಕೆ ೧೬೫೭ನೇದರಲ್ಲಿ ಹುಟ್ಟಿದರು. ಸದರಿ ಮಹಾ ದೇವಪ್ಪೈಯಾ ಯಿವರು ಶಕೆ ೧೬೬ ನೇದರಲ್ಲಿ ಕಾರ್ತಿಕ ಶುದ ದಿವ್ಸ ಸಮಾಧಿಸ್ತರಾದರು

ಸಂಪೂರ್ಣ

೪.೫ ಕಡತಗಳು :-

ಮಧ್ಯಯುಗದಲ್ಲಿ ಬರವಣಿಗೆಗೆಂದೇ ಬಳಸಿಕೊಳ್ಳುತ್ತಿದ್ದ ಒಂದು ವಿಶಿಷ್ಟ ಬಗೆಯ ಸಾಮಗ್ರಿಗಳೆಂದರೆ ಬಟ್ಟೆಗಳು, ಅರಿವೆಗಳ ಮೇಲೆ ಬರೆಯುತ್ತಿದ್ದ ಬರಹ. ಡಾ.ಎ.ಕೆ.ಶಾಸ್ತ್ರೀಯವರು "ಕನ್ನಡದಲ್ಲಿ ಕಡತಗಳು"[೭] ಎಂಬ ಪುಸ್ತಕವನ್ನೇ ಈ ಪ್ರಕಾರದ ಬಗ್ಗೆ ಬರೆದಿದ್ದಾರೆ. ಇವರ ಈ ಪುಸ್ತಕವನ್ನು ಪರಾಮರ್ಶಿಸಿದರೆ ಕಡತದ ಅರ್ಥ, ಸ್ವರೂಪ ತಿಳಿಯುತ್ತದೆ. ಅಲ್ಲದೆ ಶೃಂಗೇರಿಮಠ ಮತ್ತು ಇತರೆ ಸಂಸ್ಥಾನಿಕರ ನಡುವಿನ ವ್ಯವಹಾರಗಳು ಬಹುತೇಕವಾಗಿ ಕಡತಗಳ ಮೂಲಕವೇ ನಡೆದಿರುವುದು ತಿಳಿಯುತ್ತದೆ.

ಕಡತವು ದಾಖಲೆ ಸಾಹಿತ್ಯದ ಬಹುಮುಖ್ಯ ಪ್ರಕಾರ. ಡಾ.ಡಿ.ಸಿ.ಸರಕಾರ ಅವರು 'ಇಂಡಿಯನ್ ಎಫಿಗ್ರಫಿ'ಯಲ್ಲಿ ಹೇಳಿರುವಂತೆ "ಮೈಸೂರು ಪ್ರದೇಶದ ವ್ಯಾಪಾರ ವರ್ಗದವರು ತಮ್ಮ ಜಮಾ ಖರ್ಚಿನ ಪುಸ್ತಕಗಳನ್ನು ಅರಿವೆಯ ಕಪ್ಪು ಹಾಳೆಗಳಿಂದ ಸಿದ್ಧಪಡಿಸುತ್ತಿದ್ದರು. ಹೀಗೆ ಸಿದ್ಧಪಡಿಸುವಾಗ ಹುಣಸೆಬೀಜಗಳ ಹುಡಿಯ ಹಸಿಟ್ಟನ್ನು ಅರಿವೆಯ ಹಾಳೆಗಳಿಗೆ ಬಳಿದು ನಂತರ ಅವುಗಳಿಗೆ ಮಸಿ ಬಳಿಯಲಾಗುತ್ತಿತ್ತು ಎನ್ನುತ್ತಾರೆ. ಅಷ್ಟೇ ಅಲ್ಲದೆ ಅವರೇ ಹೇಳುವಂತೆ ಗಾರೆಗಲ್ಲಿನಿಂದ ತಿಕ್ಕಿ ಕಾಡಿಗೆ ಲೇಪಿಸಿ ಒಣಗಿಸಿ ನಂತರ ಪುಸ್ತಕ ರೂಪದಲ್ಲಿ ಮಡಿಚಿ ಆ ಹಾಳೆಗಳ ಮೇಲೆ ಸೀಸದಂಥ ಬಳಪದ ಕಲ್ಲಿನಿಂದ ಬರೆಯಲಾಗುತ್ತಿತ್ತು. ಕೆಲವೊಮ್ಮೆ ಸುರುಳಿ ಸುತ್ತಿ ಕೊಳವೆಯಲ್ಲಿ ಹಾಕಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಮಾಚಾರ ಕಳಿಸಲೂ ಕಡತಗಳನ್ನು ಬಳಸಲಾಗುತ್ತಿತ್ತು.

ಮಧ್ಯಯುಗ ಮತ್ತು ಆಧುನಿಕ ಯುಗಗಳಲ್ಲಿ ಕಡತಗಳು ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಯಿದ್ದರೂ ಅವುಗಳ ಅಸ್ತಿತ್ವ, ಕ್ರಿ.ಶ.ಪೂರ್ವ ನಾಲ್ಕನೆಯ ಶತಮಾನಕ್ಕೆ ಹೋಗುತ್ತದೆ. ಅರಿವೆಂಬುದರ ಮೇಲೆ ಭಾರತೀಯರು ಬರೆಯುತ್ತಿದ್ದರು ಎಂಬು ನಿಯಾರ್ಕಸ್ ಅಭಿಪ್ರಾಯ ಪಡುತ್ತಾನೆ. ಪಟ, ಪಟಿಕಾ, ಕಾರ್ಪಸಿಕ ಪಟ ಎಂಬುದಾಗಿ ಸಂಸ್ಕೃತದಲ್ಲಿ ಹೆಸರಿಸಲಾಗಿದೆ.

ಭೂವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕಡತಗಳಲ್ಲಿ ಶಾನುಭೋಗರು ದಾಖಲಿಸುತ್ತಿದ್ದರು. ಅನೇಕ ಶತಮಾನಗಳವರೆಗೆ ಭೂಕಂದಾಯದ ಲೆಕ್ಕ ಪತ್ರಗಳನ್ನು ಮತ್ತು ಭೂಮಿಗೆ ಸಂಬಂಧಿಸಿದ ಪತ್ರಗಳು ಮತ್ತು ವರ್ಗಾವಣೆಗಳನ್ನು ದಾಖಲೆ ಮಾಡಿಡಲು ಕಡತಗಳೆಂಬ ಕಪ್ಪು ಪುಸ್ತಕಗಳನ್ನು ಕೆನರಾ ಜಿಲ್ಲೆಯ ಶಾನುಭೋಗರು ಬಳಸುತ್ತಿದ್ದರೆಂದು ಕ್ರಿ.ಶ.೧೮೦೦ರಲ್ಲಿ ಕೆನರಾದ ಕಲೆಕ್ಟರ್ ಆಗಿದ್ದ ಥಾಮಸ್ ಮನ್ರೋ ಅವರು ಅಭಿಪ್ರಾಯ ಪಟ್ಟಿದ್ದಾರೆ. ವಿಜಯನಗರ ಕಾಲದ (ಕ್ರಿ.ಶ.೧೩೩೬–೧೫೬೫) ಭೂ ತೆರಿಗೆಯ ಪದ್ಧತಿಯನ್ನು ಕೆನರಾ ಜಿಲ್ಲೆಯಲ್ಲಿ ಪುನಃ ರಚಿಸಲು ಕಲೆಕ್ಟರ್ ಮನ್ರೋ ಕಡತಗಳನ್ನು ಬಳಸಿದರು.

ಹನ್ನೆರಡನೇಯ ಶತಮಾನದ ಆಕರ ಸಾಮಾಗ್ರಿಗಳನ್ನು ಹೇಳುವಾಗ ಕಡತಗಳನ್ನು ಉಲ್ಲೇಖಿಸಿ ಪೇಟೆಯ ವ್ಯಾಪರಸ್ಥರು ಅವುಗಳನ್ನು ಇನ್ನು ಬಳಸುತ್ತಿರುವುದಾಗಿ ೧೯೦೯ರಲ್ಲಿ ಬಿ.ಎಲ್.ರೈಸ್ ಅವರು 'ಮೈಸೂರು ಅಂಡ್ ಕೂರ್ಗ್ ಫ್ರಮ್ ದಿ ಇನ್ಸ್ಕ್ರಿಪಷನ್'ದಲ್ಲಿ ಹೇಳುತ್ತಾರೆ.

ಸುಮಾರು ಎರಡು ನೂರು ವರ್ಷಗಳಷ್ಟು ಹಳೆಯದಾದ ಎಪ್ಪೋ ಬಂಡಿಗಟ್ಟಲೆ ಕಡತಗಳನ್ನು ಮಠದ (ಶೃಂಗೇರಿಮಠ) ಎರಡು ಮೂರು ಕೋಣೆಗಳಲ್ಲಿ ಸಂಗ್ರಹಿಸಿಕೊಡಲಾಗಿದೆ. ಈ ಕಡತಗಳ ಕೂಲಂಕುಷ ಅಧ್ಯಯನ ಮಠದ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವದ ಸಂಗತಿಗಳನ್ನು ಬೆಳಕಿಗೆ ತರಬಹುದು.

'ಕಡಿತ-ಅಮಾತ್ಯ' ಮತ್ತು 'ಕಡಿತ-ವೆರ್ಗಡೆ' ಎಂಬೆರಡೂ ಪದಗಳನ್ನು ಲೆಕ್ಕಚಾರ ಮತ್ತು ದಾಖಲೆಗಳ ಮೇಲ್ವಿಚಾರಕ' ಎಂಬ ಅರ್ಥದಲ್ಲಿ ಶಾಸನಗಳಲ್ಲಿ ಬಳಸಲಾಗುತ್ತಿತ್ತು' ಎಂದು ಡಾ.ಡಿ.ಸಿ.ಸರ್ಕಾರ್ 'ಇಂಡಿಯನ್ ಎಫಿಗ್ರಾಫಿಕಲ್ ಗ್ಲಾಸ್ಸರಿ'ಯಲ್ಲಿ ಹೇಳಿದ್ದಾರೆ.

ಈ ಕಡತಗಳ ಅಧ್ಯಯನಕ್ಕೆ ಸಾಧ್ಯವಾಗುವ ಸ್ಥಳವೆಂದರೆ ಶೃಂಗೇರಿಮಠ. ಕಡತಗಳು ಈ ಮಠದಲ್ಲಿ ಸುಮಾರು ಹನ್ನೆರಡು ನೂರು ವರ್ಷಗಳ ಹಿಂದೆ ಆದಿಶಂಕರಾಚಾರ್ಯರು ಶೃಂಗೇರಿಯಲ್ಲಿ ಅದ್ವೈತ ಮಠ ಸ್ಥಾಪನೆ ಮಾಡಿದಾಗಿನಿಂದ ಅಲ್ಲಿಯ ಜಗದ್ಗುರು ಪರಂಪರೆಯು ಇಂದಿಗೂ ಅವಿಚ್ಛಿನ್ನವಾಗಿ ಸಾಗಿಬಂದಿದೆ. ಕಾಲಕಾಲಕ್ಕೆ ಆಳರಸರು ಮಠಕ್ಕೆ ಭೂದಾನ ಮಾಡಿ ಪೋಷಿಸಿದ್ದರಿಂದ ಅದೊಂದು ದೇಶದಲ್ಲಿಯೇ ಬಹುದೊಡ್ಡ ಧರ್ಮಸಂಸ್ಥಾನವಾಗಿ ಬೆಳೆದುಬಂದಿತು. ಆದ್ದರಿಂದ ಬರವಣಿಗೆ ಮಾಧ್ಯಮವಾಗಿ ಬೆಳೆದುಬಂದಿರುವುದೇ ಅಲ್ಲದೆ ಅನೇಕ ಚಾರಿತ್ರಿಕ ದಾಖಲೆಗಳನ್ನು ಒಳಗೊಂಡಿದೆ.

ಕಡತಗಳ ಮೂಲ ದಾಖಲೆಗಳಾಗಿರದೆ, ಮೂಲ ದಾಖಲೆಗಳ ಪ್ರತಿಗಳೂ ಆಗಿರುತ್ತವೆ. ಕಾಲದ ದೃಷ್ಟಿಯಿಂದ ಪ್ರಮಾಣಬದ್ಧವಾದವುಗಳೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಕಡತಗಳಲ್ಲಿನ 'ಲಿಪಿ' ಮಾತ್ರ 'ಮೋಡಿ' ಲಿಪಿಗಳಾಗಿರುತ್ತವೆ.

ಶೃಂಗೇರಿ ಮಠದೊಂದಿಗೆ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಇಟ್ಟುಕೊಂಡಿದ್ದ ಸಂಬಂಧಗಳ ಕುರಿತಾಗಿ ಅನೇಕ ಕಡತಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಟಿಪ್ಪುಸುಲ್ತಾನರ ಬಿಂನವತ್ತಳೆಯ ಒಂದು ನಕಲನ್ನು ಇಲ್ಲಿ ನೋಡಬಹುದು.

> ಶ್ರೀಮತ್ಪರಮಹಸಾದಿ ಯಥೋಕ್ತ ಬಿರದಾಂಕಿತರಾದಂಥ ಶ್ರುಂಗೇರಿ ಶ್ರೀ
> ಸಚ್ಚಿದಾನಂದ ಭಾರತಿಸ್ವಾಮಿಗಳವರಿಗೆ । ಟಿಪುಸುಲ್ತಾನ ಪಾದ ಪಾಹರವರು,
> ಸಲ್ಲಾಂ ಕಳುಹಿಸ್ತ ಪತ್ರಿಕೆಯಿಂದೆಲ್ಲಾ ವಿವರಲು ತಿಳಿಯಲಾಯಿತ್ತು. ಸ್ಥಳಕ್ಕೆ ಒಂದು
> ಕೆರಿನಧಾಗಿ ಬರದುಯಿರದ್ದು ಸರಿಯಷ್ಟೇ. ವಳ್ಳೆದ್ಯಾತ್ತು ದೇವರ ಮುಂದೆ ತ್ರಿಕಾಲ

ಯೆಕ ನಿಷ್ಠೆಯಿಂದ ಯಿಾಶ್ವರ ಧ್ಯಾನ ಮಾಡುವಲ್ಲಿ ನಂಮ ಮೆಲೆ ಪರಂಬರ್‍ರಿಕೆಯಿಟ್ಟು ಸಾರ್ವದಾ ಯೀಶ್ವರ ಜಯಾ ಕೊಡಲಿಯಂದು ಯಿಶ್ವರ ಧ್ಯಾನಾ ಮಾಡುತ್ತ ಯಲ್ಲಾ ಪಂಡಿತ್ತ ನರಸಿಂಹಶಾಸ್ತ್ರಿ ಸಹ ಅಲ್ಲಿ ವಿವರಗಳು ಶ್ರುತ ಮಾಡಿದ್ದರಿಂದ ತ್ತಿಳಿಯಿತ್ತು. ನಂಮ ಮನಸ್ಸಿನಲ್ಲಿ ಮೂರು ಬಲದ ಮೆಲೆ ಅಹಂಕಾರಯಿದೆ ಅದು ಯೆನು ಯೆಂದರೆ ಮೊದಲು ಯಿಶ್ವರ ದಯಾಪೂರ್ನಾವಾಗಿ ಯಿರ್‍ರುವರು ವಂದು ಯರಡನೆದು ನಿಂಮಂಥ ಗುರುಗಳ ಆಶಿರ್ವಾದ ಯಿರ್‍ರುವದು ವಂದು, ಮೂರನೆಯದು ಆಯುಧಗಳು ಯಿರ್‍ರುವದು ವಂದು ಯಿ ಮೂರ್‍ರಲ್ಲಿ ಯಿಶ್ವರ ಜಯಾ ಕೊಡಬೆಕಾದರೆ, ನಿಂಮಂಥಾ ದೊಡ್ಡವರ ಆಶಿರ್ವಾದದಿಂದಲೇ ಜಯವಾಗಬೆಕು. ನಿಉ ಮಠದಲ್ಲಿ ಬಹುಜನಕ್ಕೆ ಅನಾಕೊಡತ್ತ ಯಿಧ್ಧಿರ್‍ರಿ ಯಾ ಮೂರು ಜೀವಕ್ಕೆ ಯೇನು ಕಡಿಮೆ ಆಗುತ್ತಾಯಿದೆ ಮಠದಲ್ಲಿ ಯಿರ್‍ರತಕ್ಕದಾದ್ದರ್‍ರಿಂದ ಹಿಂದಕ್ಕೆ ಕಳುಹಿಶಿ ಯಿಧಿತು ಮಠದಲ್ಲಿ ಯಿಡಿಸುವಂತ್ತೆ ಮಾಡುಸುವುದು ಯೀಗ ತಾಉ ಧರಿಸುವ ಬಗ್ಗೆ ಶಹಲು ಜೊಡಿವಂದನ್ನು ಕಳುಹಿಶಿಯಿಧಿತು ತ್ತೆಗೆದುಕೊಳ್ಳುವ ಹಾಗೆ ಮಾಡುಸುವದು ಸ್ವಲ್ಪ ದಿವಸದಲ್ಲಿ ಖಾಸಾ ಸವಾರಿ, ಆ ಪ್ರಾಂತ್ಯಕೆ ಬರುತ್ತಾ ಯಿಧಿತು ಬಂದಲ್ಲಿ ಖೆಲಿಯು ಆದಿತು ಕಡಮೆ ವಿವರವೆಲ್ಲಾ ಯಲ್ಲಾ ಪಂತ್ತ ನರಸಿಂಹಶಾಸ್ತ್ರಿ ಸಹ ಹೆಳಲಾಗಿ ತ್ತಿಳಿಯುತ್ತಯಿದೆ. ತಾರಿಕು ಮಾಹೆತಕ್ಕೆ ಸಾಲ ಪಾದ ಸಂನ್ ೧೨೨೩ ಮಹಂಮದ ರಾಕ್ಷಸ ಸಂವತ್ಸರದ ಜೆಷ್ಠ ಬ ೮ರಲ್ಲು ತಾಜಾ ಕಲಂ ಯೀಗ ತ್ತಂಮ ಸಮೀಪದಲ್ಲಿ ಯಿಟುಕೊಂಡು ಪೂಜೆ ಮಾಡತಕ್ಕ ಬಗ್ಗೆ ಸ್ಪಠಿಕದ ಲಿಂಗ ವಂದು ಮರಕತ್ತ ಶಿವಲಿಂಗ ಯರಡು ಸಹ ಕಳುಹಿಶಿಯಿಧಿತು ಯಿದು ಬಹು ವಳ್ಳೆದು ಪೂಜಾ ಯೋಗ್ಯವಾದ್ದರಿಂದ ಯಿಟ್ಟು ಪೂಜೆ ಮಾಡಸುವ ಹಾಗೆ ಮಾಡಸುವದು ಕರ್ತರ್‍ರಿಗೆ ಸದಾ ಸ್ಮರಣೆ ಯಿರತಕ್ಕ ಬಗ್ಯೆ ಕಳುಹಿಶಿ ಯಿಧಿತು ತ್ತಂಮ ಖಾಸಾ ದೆವತ್ತಾರ್ಚನೆ ವಳಗೆ ಪೂಜೆ ಮಾಡುತ್ತ ತ್ರಿಕಾಲ ಪೂಜೆ ಮಾಡುವಲ್ಲಿ ಸರಕಾರದ ಶ್ರೇಯೋಭಿವೃದ್ಧಿ ಆಗುವ ಹಾಗು ಜಯವಾಗುವ ಹಾಗು ಸರ್ವದಾ ಆಶೀರ್ವಾದ ಮಾಡುವ ಹಾಗೆ ಮಾಡುವದು

ಈ ಬಿನ್ನವತ್ತಳೆ ಕಾಲ ಕ್ರಿ.ಶ.೧೭೪೫

ಈ ಮೇಲಿನ ಬಿನ್ನವತ್ತಳೆ ಭಾಷೆ ತುಂಬಾ ವಿಶಿಷ್ಟವಾಗಿದೆ. ಹೆಚ್ಚು ಆಡುಭಾಷೆಯಲ್ಲದೆ ಬರೆದಿರುವರ ಶೈಕ್ಷಣಿಕ ಮಟ್ಟವನ್ನು ತಿಳಿಸುತತದೆ. ಟಿಪ್ಪುಸುಲ್ತಾನರ ಚಾರಿತ್ರಿಕ ದಾಖಲೆಗೆ ಮುಖ್ಯ ಆಕರದ ಉದಾಹರಣೆ ಈ ಕಡತ ಎಂಬುದು ಗೊತ್ತಾಗುತ್ತದೆ.

ದಾಖಲೆ ಪತ್ರಗಳಲ್ಲಿ ಸನದುಗಳು, ನಿರೂಪಗಳು, ದಾನಪತ್ರಗಳು ಮತ್ತು ಕಡತಗಳಲ್ಲದೆ ಇನ್ನೂ ಹಲವಾರು ಪತ್ರ ಪ್ರಕಾರಗಳನ್ನು ಕಾಣಬಹುದು.

೪.೬ ಕ್ರಯಪತ್ರಗಳು :-

ಈ ಕ್ರಯದಾನ ಪತ್ರಗಳು ಮೂಲತಃ ಕ್ರಯಪತ್ರಗಳೇ ಆಗಿರುತ್ತವೆ. ಭಾರತೀಯ ಸಾಂಸ್ಕೃತಿಕ ಚೌಕಟ್ಟಿನೊಳಗೆ ಬರುವ ಈ ಪತ್ರಗಳು ಹಣದ ಸಂದಾಯದ ಅಂಶವನ್ನೊಳಗೊಂಡಿದ್ದರೂ, ಮತ್ತು ಕೊಡುಕೊಳ್ಳುವ ವ್ಯವಹಾರವಾಗಿದ್ದರೂ ಸಾಂಸ್ಕೃತಿಕ ಬಂಧನವನ್ನು ಮೀರುತ್ತಿರಲಿಲ್ಲ. ಅರಿಶಿನ ಕುಂಕುಮಕ್ಕೆಂದು ಹೆಣ್ಣುಮಕ್ಕಳ ಹೆಸರಿನಲ್ಲಿ ಆಸ್ತಿಪಾಸ್ತಿಗಳನ್ನು ದಾನ ಮಾಡಿದರೂ ಕೆಲವೊಮ್ಮೆ ಕ್ರಯವೇ ಆಗಿರುತ್ತದೆ. ಆದ್ದರಿಂದಲೇ ಅವುಗಳಲ್ಲಿ ಕ್ರಯದಾನ ಪತ್ರಗಳೆಂದು ಕೂಡ ಕರೆಯಲ್ಪಡುತ್ತಿದ್ದರು. ಮಠ ಮಾನ್ಯಗಳಿಗೆ ಭೂಮಿಯನ್ನು ದಾನಬಿಟ್ಟರೂ ಮಠದ ಕಡೆಯಿಂದ ಸ್ವಲ್ಪವಾದರೂ ಹಣವನ್ನು ಪಡೆದುಕೊಂಡು ದಾನದ ರೂಪದಲ್ಲಿ ಭೂಮಿಯನ್ನು ಮಠಗಳಿಗೆ ಕೊಡುತ್ತಿದ್ದುದು ಕಂಡುಬರುತ್ತದೆ. ಅಂದರೆ ಹಣದ ವಹಿವಾಟು ನಡೆಸಿದರೂ ಅಲ್ಲಿ ದಾನದ ಸ್ವರೂಪ ಭಾರತೀಯ ಸಾಂಸ್ಕೃತಿಕ ಹಿರಿಮೆಯನ್ನು ಸಾರುವಂತಹದ್ದಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿದ್ದ ಎಸ್.ಬಾಲಚಂದ್ರ ಕರಣಿಕ ಮತ್ತು ಡಾ.ಕೆಳದಿ ವೆಂಕಟೇಶ್ ಜೋಯಿಸ್‌ರವರು ಸಂಗ್ರಹಿಸಿರುವ ಕಡತದ ಬಟ್ಟೆಯಲ್ಲಿ ಬರೆಯಲ್ಪಟ್ಟಿರುವ ಒಂದು ಕ್ರಯದಾನ ಪತ್ರವನ್ನು ನೋಡಿದರೆ ತಿಳಿಯುತ್ತದೆ. ೧. ಅದು ಕ್ರಿ.ಶ.೧೭೩೪ರಲ್ಲಿ ಬಾರ್ಕೂರು ಸೂರಪ್ಪಯ್ಯನವರು ಉಡುಪಿಯ ನಿಡಂಬೂರು ಶ್ರೀಧರ ಬಲ್ಲಾಳದಿಂದ ನಯಂಪಳ್ಳಿ ಗ್ರಾಮದಲ್ಲಿ ನೂರು ಮುಡಿ ಆಸ್ತಿ ಖರೀದಿಸಿದುದನ್ನು ತಿಳಿಯುವಂತಹ ದಾಖಲೆಯಾಗಿದೆ. ಇಂತಹ ಕ್ರಯಪತ್ರಗಳ ಸ್ವರೂಪಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ನಾವು ನೋಡಬಹುದು.

ಆಡಿತೋಡ ಸಾಧನಪ್ರತಿ :

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯನಗರಾರಂ
ಭ ಮೂಲಸ್ತಂಭಾಯ ಸಂಭವೆ ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ
ವರುಷ ೧೦೫೬ನೆಯ ಪ್ರಮಾದೀಚ ಸಂವತ್ಸರದ ಶ್ರಾವಣ ಶು ೧ಲ್ಲು ಶ್ರೀಮತ್ತು
ವಸಿಷ್ಠ ಗೋತ್ರದ ಬೋಧಾಯನ ಸೂತ್ರದ ।ಯಜು:ಶಾಖೆಯ।ಬಾರಕೂರ।
ಅಪ್ಪಯ್ಯ ಭಟ್ಟರ ಪಉತ್ತರಾದ ಗಣೇಶ ಭಟ್ಟರ ಪಉತ್ರರಾದ ಭೀಮಭಟ್ಟರ
ಪಉತ್ರರಾದ ಸೂರ್ಯಯಭಟ್ಟರಿಗೆ ವಿಶ್ವಾಮಿತ್ರಗೊತ್ರದ ಆಶ್ವಾಯನ ಸೂತ್ರದ ।
ರುಶ್ಯಾಖೆಯ । ರಂಗನಾಥ ಬಲ್ಲಾಳರ ಪ್ರಪಉತ್ರರಾದ ಶ್ರೀಧರ ಬಲ್ಲಾಳರ ಪಉ
ತ್ರರಾದ । ರಂಗನಾಥ ಬಲ್ಲಾಳರ ಪುತ್ರರಾದ । ಶ್ರೀಧರ ಬಲ್ಲಾಳರು ಕೊಟ್ಟ
ಭೂಸ್ವಾಸ್ತಿ ಕ್ರಯದಾನ ಪಟ್ಟಿ ಕ್ರಮವೆಂತೆಂದರೆ । ಬಾರಕೂರ

ಹೋಬಳಿ ನಿಡಂಬೂರ ಮಾ

ಗಣೆವಳಗಣೆ । ನಂಮ ನಷ್ಟದ ಉಂಬಳಿಯಿಂದ । ನಯಂಪಳ್ಳಿ

ಗ್ರಾಮದ । ಅರಿತೊಡ ಬಯಲಲ್ಲು । ಯೆಳುವರಹಾಂನು . . ಣ

ವಡ್ಯದ । ಸ್ವಾಸ್ತಗೆ ಚತುರ್ಗಡಿ ವಿವರ । ಮೂಡಲ್ಲು ಅಂಣೆ

ಗೌಡನ ಗದ್ದೆಯಿಂದ ಪಡವಲು । ತ್ತೆಂಕಯಿ ಕೃಷ್ಣದೆ...

ರಸಂಕೇತರ ಗದ್ದೆಯಿಂದ ಬಡಗಲ್ಲು ಪಡುಬಯಿ ಸಸ್ಂಕೇತರ

ದ್ದೆಯಿಂದ ಮೂ

ಡಲ್ಲು । ಬಡಗಲ್ಲು ಅಂಣೆಗಡಣಗದ್ದೆಯಿಂದಂ ತೆಂಕಲ್ಲು । ಯಿಂತಿಚತುರ್ಗಡಿವಳ

ಗಣ ಗದೆ–ಅಡಿಗಳ ಮನೆ – – – – ಯಿ ಗದ್ದೆವದ್ದಿಬ್ಬನ ಕೊಯಿಲ್ಲು ೭

ಅಂತೆಂಕಲು ವರಹ ೪ ಆಕೆ – – – ಕೊಳ ಆ ತೆಂಕಲುವ ೧ರ ಕೊಲಿಲಾ

ತೆಂಕಯವ ೧ರ ಕೊ ಆ ತೆಂಕಲು ಮಜಲುಗದ್ದೆವ ೨ರ ಕೊಯಿಲ ೨ ಆ ತೆಂಕಲು

ವದಿ ೧ರ ಕೊ೨ ಅಂ – – – ಕೊ।ಯಿ ೨ ಮಜಿಯಕೊಯಿಲು ೬ ಉಭಯಂ

ಕೊಯಿಲು ೨೬ ಯಿ ವಿಷ್ಣು ಮೂರ್ತಿದೇವರ ಪೂರ್ವ ಉತ್ತರದಿಕ್ಕಿನಲ್ಲು

ಮಿಹ । ಮಡಿಹ

ಅವಕೊಯಿಲು ೧೪ ಕೆಳಗಣ ಬೈಲಲ್ಲು । ಮೂಡಲು ಅಂಮನವರ

ದೆವಸ್ವದ ।

ಗಡಿಯಿಂದ । ಪಡುವಲ್ಲು । ತೆಂಕಲ್ಲು ಅಂಣಿಗಡದ ಗದ್ದೆಯಿಂದಂ ಬಡಗಲ್ಲು

ಪಡುವಲು । ಸಸ್ಯಂಸ್ತೆಕದ ಗದಿಯಿಂದಂ ಮೂಡಲು । ಬಡಗಲು ಅಂಣಿಗಡದ

ಗದ್ದೆಯಿಂದಂತೆಂಕಲ್ಲು। ಯಂತ್ತಿ ಚತುರ್ಗಡ್ಡಿವಳಗಣ । ಗದ್ದೆವವಿರಕೊ^ಲೂ

ಡಲು ಅಂಮನವರ ದೆವಸ್ಥಾನದ ಗದ್ದೆಯಿಂದ ಪಡುವಲ್ಲು । ತೆಂಕಲು ಅಯನ

ಕಾಟು ಹೊಡೆದಿದೆ.

ದೆವರ ದೆವಸ್ವ ಸಂಣಿಗಡದ್ನ ಗದ್ದೆ ತೆಕಲು ಯೀರಿತಿ ಚತುರ್ಗಡಿಯ

ಒಳಗಣ ಗಡನ ಗದ್ದೆಯಿಂದ ತೆಂಕಲ್ಲು । ಯಿಂತ್ತಿ ಚತುರ್ಗಡಿವಳಗಣ ಗದ್ದೆ ।

ಏ ೨ರ ಕೊಯಿಲು ೬ ಮೂಡಲು ಅಮ್ಮನವರ ದವಸ್ವದಗದ್ದೆಯಿಂದಂ ಪಡು

ವಲು । ತೆಂಕಲ್ಲು । ಸಂಕೇತದ ಮಂಣೆಗದ್ದೆಯಿಂದಂ ಬಡಗಲು । ಪಡುವಲು

ಸಂಕೇತದ ಗದ್ದೆಯಿಂದಂ ಮೂಡಲ್ಲು । ಬಡಗಲು । ಅಂಣೆಗಡನ ಗದ್ದೆಯಿಂ

ದ್ದತೆಂಕಲು । ಯಿತ್ತ ಚತುರ್ಗಡಿ ಒಳಗಣ ವಥಿ೨ರ ಕೊಯಿಲು ೭ ಅಂ

ತು ಕೊಯಿಲು ೧೯ ಅಂತು --- ಣಯಿಯ ೩೯ ಮಜಿಯ ಕೈಯಲು
೬ ಮಕಿಕೊಯಿಲು ೧೪ ಅಂತು ಕೊಯಿಲು ೫೯ರ ಮಾಸ ಅರಿತೊಡ ವಿಷ್ಣು
ಮೂರ್ತಿದೇವರಿಗೆ । ಅಮೃತಪಡಿ । ನಂದಾದೀಪ್ತಿ ಸಾಂತಉರುತ್ತಿಗೆ ಸಹಾ । ಪ್ರಾಕು
ಉತ್ತಾರ ಗ ೧॥೩ ಯೀ ಗ ಕೃಷ್ಣಾರ್ಪಿತವಾಗಿ ಬಿಟ್ಟರು ಗ ೧ ಹ ೩॥
ಉಭಂ ಗ ೩ ಹ ೧॥೦
ಭೂಮಿ ವಿವರ ॥ ಅಡಿಗಳ ಮನೆ ಮುಂದಣ ಬೈಲುಗದ್ದೆ ವ ೨ ವಕೆಯಿಲು ೭ ಅ
ತೆಂಕಲುವಕೋಜ ಆ ತೆಂಕಲು ಕೊಟಿ ಆ ತೆಂಕಲ ವಾರ ಕೊ ೪ ಆ ತೆಂಕಲು
ವ ಕೊ ೩ ಆ ತೆಂಕಲುಕೊ ೨ ಅವಧಿ ೭ ರ ಕೊಯಿಲು ೨೦ರ ಗೆಣಿ ಆ
ಹೂ ೫೦ ಯಿಮು ೧೨ ದೇವರ ಕೆರೆ ಬನದಲ್ಲು । ಅಂಣೆಗಡ ದಗಡ್ಡೆಯದಂತೆಂ
ಕಲ್ಲು ಕೊ ೩ ಗೆ ಣಿ ಅಕ್ಕಿಮು ॥೫ ಆ ಯಂಕೊಯಿಯರೆ ೩ರ ಗೆಣಿ ಆಕೆಯು
ಬ ೧೨ ॥೫ ಗ ೩ ಹ ೧॥ ಟ್ಟು ಗ ೪ ಯ್ವರ ಹೋರದೃಷ್ಟಿಯಂನ್ನ ನಿ
ದಿ ಸಿದಲ್ಲು ಪ್ರತಿಶೆ ಮಾಡಿದ । ರಾಮಲಿಂಗೇಶ್ವರ ದೇವರ ಅಮೃತಪಡಿ ಬಗೆ
ನಿಂಮ ಕೈಯ ಕ್ರಯ ಪರಿವಿದ್ಯೆದಾಗಿ ತೆಗೆದುಕೊಂಡದು ಗ ೪೦ ನಾಲ್ವತ್ತವರ
ಹಾ ನು ತೆಗೆದುಕೊಂಡು ಶಿವಾರ್ಪಿತವಾಗಿ ಕೊಟ್ಟಿರುದಾಲ್ಕು ವರಹಾಂನ ಭೂ
ಮಿ ವಿವರ ವೇದಮೂರ್ತಿ ದೇವರನೆ ಕೈಯಿಂದಂತೆಂಕಲ್ಲು । ಮಜಯಿಗದ್ದೆ
ಏ ೩ ರ ಕೊಯಿಲು ೬ರ ಗೆಣಿಹಾಗೆ ॥೩॥೦ ಆ ಪಡುವಲಮಕಿಕೊ
ಯಿಲ್ಲು ೧೧ರಲ್ಲು ೬೨ ಹಾ ೧೦ ಕೆಳಗಣ ವೈಲುವ ೬ ರ ಕೊ ೧೯ ರ ಗೆಣಿಕೊ ೧೦।೭
ಅಂತು ಕೊಯಿಲು ೩೬ ಗೆಣಿ ಅಕಿ ಅಕ್ಕಿಯ ೧೬ರ ಗಟಿಸ್ಥ ಭೂಸ್ವಸ್ತಿಯಂನು
ವಸಿಷ್ಠ ಗೋತ್ರದ । ಬೋಧಾಯನ ಗೂತ್ರದ । ಯಜುಶಾಖೆಯ । ಅಪ್ಪಯ್ಯಭಟ್ಟರ ಪ್ರಪ
ಉತ್ರರಾದ । ಗಣೆಶಭಟರ ಪೌತ್ರರಾದ ಶ್ರೀಮಭಟರ ಪುತ್ರರಾದ । ಸೂರ್ರೈಯ
ಭಟ್ಟರಿಗೆ ವಿಶ್ವಾಮಿತ್ರ ಗೊತ್ರದ । ಆಶ್ವಾಯನ ಗೂತ್ರದ । ರುಶ್ಯಾಕೆಯ । ರಂಗನಾಥ
ಬಲ್ಲಾಳರ ಪ್ರಪ
ಉತ್ರರಾದ । ಶ್ರೀಧರಬಲ್ಲಾಳರ ಪೌತ್ರದ । ರಂಗನಾಥ
ಬಲ್ಲಾಳರ ಪುತ್ರರಾದ । ಶ್ರೀಧರ ಬಲ್ಲಾಳರು । ವಿಷ್ಣುಮೂರ್ತಿ ದೇವರ ಶಾಂತಿಸಭಾಸ
ಹಿಲಂಣೋದಸ್ಕ । ದಾನದಾರಾಪೂರ್ವಕವಾಗಿ । ಧಾರೆಯನೆರದು ಕೊಟ್ಟೆವಾಗಿ
ಯೀ ಭೂಸ್ವಾಸ್ತಿವಳಗುಳ್ಳ ನಿಧಿನಿಕ್ಷೇಪ ಜಲಪಾಶಾಣ ಅಕ್ಷಿಣಿ ಆಗಾಮಿ
ಸಿದ್ಧ ಸಾ

ಧ್ಯಂಗಳೆಂಬ ಅಷ್ಟಭೋಗತೇಜಸ್ವಾಂಮ್ಯವನು । ಈ ಉದ್ದೇಶದಲ್ಲಿ ನಿಲು ಪ್ರತಿಷ್ಟೆ ಮಾಡಿದ ।

ರಾಮಲಿಂಗೇಶ್ವರ ದೇವರ । ಅಮೃತಪಡಿದೆವತ್ತಾ ಸೆವೆ ಮುಂತ್ತಾಗಿ ನಡುಶಿಕೊಂಡು ನಿಂಮ ಸಂತಾನ ಪಾರಂಪರ್ಯವಾಗಿ । ಆ ಚಂದ್ರಾರ್ಕ ಸ್ಥಾಯಿಗಳಾಗಿ ಸುಖದಿಂದ ಅನುಭವಿಸಿ ಕೊಂಡು ಬಹಿರಿ ಯೆಂದು । ನಾಲು ನಂಮ ಪುತ್ರ ಪೌತ್ರ ಜಾತೇ ನೆರೆ ಸಾಮಂತ ದಾಯಾದ್ಯನುಕರ್ಮದಿಂದ । ನಮಸ್ಯಾವಂಡಂಬಟು । ವಿಶ್ವಾಮಿತ್ರ ಗೊತ್ರದ । ಆಶ್ಲಾಯನ ಸೂತ್ರದ । ರುಕ್ಕುಶಾಖೆಯ । ರಂಗನಾಥ ಬಲ್ಲಾಳರ ಪ್ರಪೌತ್ರರಾದ ಶ್ರೀಧರಬಲ್ಲಾಳ ಪಉತ್ರ ರಾದ । ರಂಗನಾಥ ಬಲ್ಲಾಳರ ಪುತ್ರರಾದ ಶ್ರೀಧರ ಬಲ್ಲಾಳರು । ವಸಿಷ್ಠ ಗೊತ್ರದ । ಚೆಂದಾಯನ ಸೂತ್ರದ ಯಜುಶಾಖೆಯ । ಅಪ್ಪಯಭಟ್ಟರ ಪ್ರಪೌತ್ರರಾದ । ಗಣೇಶಭಟರ ಪ ಉತ್ರರಾದ ಭೀಮಭಟ್ಟರ ಪುತ್ರ

ರಾದ ಸೂರೈಭಟರಿಗೆ । ಕೊಟ್ಟ ಸ್ವಾಸ್ತಿ ಕ್ರಯದಾನ ಪಟ್ಟಿಯಿದಕೆ

ದೆವಸಾಕ್ಷಿಗಳು

ಆದಿತ್ಯ । ಚಂದ್ರಾಅವನಿಲೊಳಶ್ವ ದೌರ್ಭೂ

ಮಿರಾಪೋಹೃದಯಂಮಯಮಶ್ಚ । ಅಹತ್ ರಾತ್ರಿಶ್ಚ ಉಬೇಚ ಸಂಧ್ಯೆ

ಧರ್ಮಸ್ಯ ಜಾನಾತೆ ನರಸ್ಯ

ಯಿತಂ । ದಾನಪಾಲನಯೋಮನದ್ಯೆ ದಾನಾಸ್ರೇಯೊನುಪಾಲನಂ । ದಾ

ನಾಸ್ವರ್ಗಮ ವಾಪ್ನೋತಿ

ಪಾಲನಾದಚ್ಯುತಂ ಪಲಂ । ನರಸಾಕ್ಷಿ । ಕಂತಿಪಾತ್ರಯಕಲ್ಲು ಕೋಡ

ಸಂಶ್ಕಂಣ । ಮಹಾಬಲಪಾಥ್ವಿ ಸಂಕ ಸಾಕ್ಷಿ । ಅಂನೆಗಡ ಕತ್ರು ವಪ್ಪಿತ

ಶ್ರೀಧರ ಬಲ್ಲಾಳನ ಬರಹಾ । ಸಾ

ಕ್ಷಿಗಳ ವಪ್ಪಿತ್ತಾ । ಪುತ್ರಯನ ಸಾಕ್ಷಿ ಬರಹಾ । ಸಂಕ್ರಸೆಹ್ನ । ಅಂನೆಗಡ ತಮ್ಮ ಮುದ್ದಿ

ದ ಸಾಕ್ಷಿ

ಕ್ಷಯಿಂತಿತವು ಉಬ್ಬಯಾನ್ಮತದಿಂದ । ಮರಿ ರಾಮಯಗಳ ಕೃಷ್ಣಯ್ಯನ ಬರಹ

ಈ ಮೇಲಿನ ಕ್ರಯಪತ್ರ ಸಾಂಸ್ಕೃತಿಕವಾಗಿ ಎಷ್ಟೊಂದು ಶ್ರೀಮಂತಿಕೆಯನ್ನು ಮೆರೆಯಬಲ್ಲದು ಎಂಬುದು ಈ ಪತ್ರದ ಸ್ವರೂಪವೇ ನಿದರ್ಶನವಾಗಬಲ್ಲದು.

೪.೭ ಶ್ರೀಮುಖಗಳು :

ಶ್ರೀಮುಖ ಪತ್ರಗಳು ಮಠಗಳಿಂದ ಹೊರಡಿಸುವಂತಹ ನಿರೂಪಗಳೇ ಆಗಿರುತ್ತವೆ. ಇಂತಹ ಶ್ರೀಮುಖ ಸ್ವರೂಪದ ನಿರೂಪಗಳನ್ನು ಕರ್ನಾಟಕದ ಅನೇಕ ಮಠಗಳಿಂದ ಹೊರಡಿಸಿದ ಆಜ್ಞಾ ಪತ್ರಗಳನ್ನು ನೋಡಬಹುದು. ಉದಾಹರಣೆಗೆ : ಈಗಾಗಲೇ ಹಸ್ತಪ್ರತಿ ಪತ್ರಗಳ ಸ್ವರೂಪಗಳಿಗೆ ಉದಾಹರಿಸಿದ ಮಧುಗಿರಿ ಪಾಳೆಪಟ್ಟುವಿಗೆ ಸಂಬಂಧಿಸಿದ ಒಂದು ದಾಖಲೆಯನ್ನು ಕಾಣಬಹುದು. "ಮಧುಗಿರಿ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮಡಕಾಶಿರ ತಾಲ್ಲೂಕಿನ ಆಸುಪಾಸಿನಲ್ಲಿ ಬರುವ ರತ್ನಗಿರಿಯಿಂದ ಸಂಪಾದನೆ ಶಿವಲಿಂಗಸ್ವಾಮಿಗಳು ಎಂಬುವವರು ಮಧುಗಿರಿ ತಾಲ್ಲೂಕಿನ ಬಿಜ್ಜಾವರದ ಚನ್ನಬಸಪ್ಪಗೌಡ ಎಂಬ ಪಾಳೆಗಾರನಿಗೆ ಕಳುಹಿಸಿದ ಪತ್ರ ಶ್ರೀಮುಖ ಎಂಬ ನಿರೂಪಕ್ಕೆ ನಿದರ್ಶನವಾಗಿದೆ"[೯]

ಇದೇ ರೀತಿ ಮತ್ತೊಂದು ಶ್ರೀಮುಖ ದಾಖಲೆಪತ್ರ ಶೃಂಗೇರಿ ಶ್ರೀ ನರಸಿಂಹಭಾರತೀ ಸ್ವಾಮಿಗಳು ಮೈಸೂರಿಗೆ ಬಂದು, ಅಲ್ಲಿಂದ ರಾಮೇಶ್ವರಕ್ಕೆ ಹೋಗಿ ಮಠಕ್ಕೆ ಬರುವ ಸಂದರ್ಭದಲ್ಲಿ, ಚಿತ್ರದುರ್ಗ ಡಿವಿಜನ್ ಆಕ್ಟಿಂಗ್ ಹೆಡ್ ಶಿರಸ್ತೆದಾರ ವೆಂಕಟರಾಯರು ೧೮೪೦ರಲ್ಲಿ ಒಂದು ಶ್ರೀಮುಖದ ಪ್ರಸ್ತಾಪ ಮಾಡುತ್ತಾರೆ. ಅದು ವೆಂಕಟರಾಯರೇ ಹೇಳುವಂತೆ ಈ ರೀತಿ ಇದೆ. "ಸ್ವಾಮಿಗಳು, ವೇದಮೂರ್ತಿ ನರಸಿಂಹಶಾಸ್ತ್ರಿಗಳ ಸಂಗಡ ಶ್ರೀಮುಖ, ಫಲ ಮಂತ್ರಾಕ್ಷತೆ ಕಳುಹಿಸಿರುವುದನ್ನು ಶಿರಸಾವಹಿಸಿರುವುದಾಗಿ ಮತ್ತು ಗೃಹಕೃತ್ಯ ತಾಪತ್ರಯದಿಂದ ತನ್ನ ಕಡೆಯ ಜನಕ್ಕೆ ಧರ್ಮಶಾಸನದಂತೆ ಮಠಕ್ಕೆ ಹಣ ಸಲ್ಲಿಸುವ ಸಂದರ್ಭದಲಿ ಶೃಂಗೇರಿ ಮಠದ ಸ್ವಾಮಿಗಳಿಂದ ಶ್ರೀಮುಖವನ್ನು ಕಾಣಬಹುದು"[೧೦]

೪.೮ ರಹದಾರಿ ಪತ್ರಗಳು :

ರಹದಾರಿ ಪತ್ರಗಳು ಸಾಮಾನ್ಯವಾಗಿ ಪ್ರಯಾಣದ ಸಂದರ್ಭದಲ್ಲಿ ಸರ್ಕಾರಗಳಿಂದ ಹೊರಡಿಸುವ ಗಡಿಪ್ರದೇಶಗಳಲ್ಲಿ ಒಂದು ಗಡಿಯಿಂದ ಮತ್ತೊಂದು ಗಡಿಪ್ರವೇಶದ ಸಂದರ್ಭದಲ್ಲಿ ಬರುವ ಆಜ್ಞಾಪತ್ರಗಳಾಗಿರುತ್ತವೆ. ಇದಕ್ಕೆ ಉದಾಹರಣೆಯಾಗಿ ದಿವಾನ್ ಪೂರ್ಣಯ್ಯನವರ ರಹಪತ್ರಗಳನ್ನು ಕೆಳದಿ ಗುಂಡಾಜೋಯಿಸರು ಇತಿಹಾಸದರ್ಶನದಲ್ಲಿ ಪ್ರಕಟಿಸಿರುವುದನ್ನು ನೋಡಬಹುದು. ಅಕ್ಷೋಭ್ಯ ತೀರ್ಥಮಠದ ದಪ್ತರಖಾನೆಯಲ್ಲಿ ಈ ಪತ್ರ ಕಂಡುಬರುತ್ತದೆ. ಇದು ಐತಿಹಾಸಿಕ ಮಹತ್ವದಿಂದ ಕೂಡಿ ಅವರ ಧಾರ್ಮಿಕ ನೀತಿಯನ್ನು ಕುರಿತು ವಿನೂತನ ಬೆಳಕನ್ನು

ಚೆಲ್ಲುತ್ತದೆ. ಕೆಳದಿ ಇತಿಹಾಸೋತ್ತರ ಕಾಲದಲ್ಲಿ ನಗರ(ಬಿದನೂರು) ವಿಭಾಗದ ಈ ರಹದಾರಿ ಪತ್ರ ಆಗಿನ ಶ್ರೀ ಅಕ್ಷೋಭ್ಯತೀರ್ಥರಿಗೆ ನೀಡಿದ್ದಾಗಿದೆ. ಆ ರಹದಾರಿ ಪತ್ರದ ಪಾಠ ಮುಂದಿನಂತೆ ಇದೆ.

ಶ್ರೀ ಅಕ್ಷೋಭ್ಯತೀರ್ಥ ಮಠದ ಪತ್ರಪಾಠ

೧. ಪ್ರಭವ ಸಂವತ್ಸರದ ಕಾರ್ತಿ ಶು ೮ಲ್ಲು ಶ್ರೀಮತು
೨. ಪೂರ್ಣೈಯನವರು ಅರಮನೆ ಶಿಮಗಡಿಗಳ ಆಮಿಲ
೩. ಕಿಲ್ಲೆದಾರ್‍ರಿಗೆ ಸಹ ಅದಾಗೀ ನಗರದ ಶೀಮೆ ಬಾಳಗಾರದ
೪. ಶ್ರೀಸ್ವಾಮಿಗಳವರು ಮೈಯಿಶೂರ್‍ರಿಗೆ ಬಂದ್ದುಯಿದ್ದು
೫. ಪುನಹಾ । ಸ್ಥಳಕ್ಕೆ ಸಾಗಿ ಹೋಗುವದರ್‍ರಿಂದಾ ಸ್ಸಂಗಡ ಬ್ರಾ
೬. ಅಂಹ್ಮರು ಪಾಲಖಿ ಸಾಮಾನು ಸರಂಜಾಮೆ ಸಹ ನಿಂಮನಿಂ
೭. ಮ್ಮಗಡಿಗಳ ಮಾರ್ಗವಾಗಿ ಬಂದ್ದು ಯಿಳಿಯುವದಕ್ಕೆ
೮. ಸ್ಥಳವನು ತೋರಿಶಿ ವಂದ ಹೊರೆಹುಲ್ಲು ಯರಡ
೯. ಹೊರೆ ಕಟಿಗೆ ಸಹ ಕೊಡ್ಸಿವದೂ ಯಿದಲ್ಲದೆ ಕ್ರ
೧೦. ಯಕ್ಕೆ ಬೆಕೆಂದ ಸಾಮಾನು (ವಾಜಖಿ?) ಕ್ರಯಕೆ ತೊರಿಶಿ
೧೧. ರಾತ್ರೆಯಿಳದ ಬಳಿ ಕಳಕ್ರಾಕರ ವುಪದ್ರ ತಟದಂತ್ತೆ
೧೨. ಖಬರದಾರ್‍ರಿ ಮಾಡ್ಸೀ ಮುಂದೆ ಸಾಗಿ ಹೋಗುವಲ್ಲು ।
೧೩. ಮಾರ್ಗತೊರ್‍ರಿಸುವದಕ್ಕೆ ಗಡಿಯಿಂದಾ ಗಡಿಗೆ ವಂದಾ

ಬೆಂಗಳೂರು ಸರಕಾರಿ ವಸ್ತುಸಂಗ್ರಹಾಲಯದಲ್ಲಿರುವ ಪತ್ರ ಪಾಠಗಳು :

೧. ರಕ್ತಾಕ್ಷೀ ಸಂವತ್ಸರದ ಆಷಾಢ ಶುದ್ದ ೫ಲ್ಲೂ
೨. ಶ್ರೀಮತು ಪೂರ್ಣೈಯನವರು ಅರಮನೆ ಶಿ
೩. ಮೆಗಡಿಗಳ ಕಿಲ್ಲೆದಾರು, ಅಮಲದಾರರ್‍ರಿಗೆ
೪. ಅದಾಗಿ ರಾಜಶ್ರೀ ಬಾರತಳಿ ಸಾಹೆಬರವಿದು,
೫. ನಾಕಸ ಸಾಹೆಬರವರ್‍ರು ಮುಂತ್ತಾದ ಸರ
೬. ದಾರ್‍ರು ಮೂರು ಜನ ಹರಿಹರದಿಂದಾ ಶ್ರೀರಂ
೭. ಗಪಟ್ಟಣಕ್ಕೆ ಸಾಗಿ ಬರುತ್ತಾರಾದ ಕಾರಣ
೮. ಯಿವರ ಸಂಗಡ ಸರಕಾರದ ತಾಲೂಕು
೯. ನಾಯಕ ಚಿಕ್ಕಶೆಟ್ಟಯ್ಯನು ಬರುತಾನಾಗಿ
೧೦. ರಾಜಶ್ರೀಗೆ ಸರದಾರರ್‍ರು ಬರ್‍ರುವಲ್ಲಿ ನಿಂಮನಾ

೨ನೇ ಪತ್ರ

೧. ಯಿಂದ್ದಾ ಮಾಲ್ಲಿಕರ್ರಿಗೆ ಕೊಡ್ಡುವದು

೨. ಸದರಿಬರದ ಮೆರೆಗೆ ಸರದಾರರ ಖಾಸಕು

೩. ದುರೆಗಳಿಗೆ ಕೊಟ್ಟ ಹತ್ತು (ಕಬಾಕ?) ಹುಲ್ಲು

೪. ತಡಿ ಲಗ್ಗ್ಯ ಮಾತ್ರಾ ಕ್ರಯಾ ಕೆಳದೆ ನಾಯಕ

೫. ಶೆಷ್ಯೆನ ರಶಿತ್ತಿ ತೆಗೆದುಕೊಳುವದು ಯಿಾಸ

೬. ರದಾರರ್ರು ಬರ್ರುವಲ್ಲಿ ನಾಯಕ ಶೆಷ್ಯೆಯ

೭. ನು ಮುಂಚಿತ್ತಾಗಿ ನಿಮಗೆ ಬರಶಿಕಳುತ್ತಾ

೮. ನಾಗಿ ಆ ಪ್ರಕಾರಕ್ಕೆ ನಿಉ ನಡದುಕೊಳು

೯. ವದು ಸರದಾರರು, ನಿಂಮ ನಿಂಮ ತಾಲೂ

೧೦. ಕುಗಳಿಗೆ ಬಂದು ಅಲ್ಲಿಂದಾ ಮುಂದಕ್ಕೆ

೧೧. ಸಾಗಿ ಬಂದ ವಿವರಕ್ಕೆ ರ್ರುಜೂರಿಗೆ ಅರ್ಜಿಬ

೧೨. ರಶಿ ಕಳುಹ್ಸಿವದು ರ್ರುಜುಶ್ರೀ

ಈ ಪತ್ರಗಳಿಂದ ಬಹುಮುಖ್ಯವಾಗಿ ನಮಗೆ ತಿಳಿದುಬರುವುದೇನೆಂದರೆ, ಮೇಲಿನ ಎರಡೂ ಪತ್ರಗಳು ಪೂರ್ಣೈಯ್ಯನವರ ಸ್ವಹಸ್ತಾಕ್ಷರ ಪ್ರತಿಗಳೆಂಬುದು. ಇದಕ್ಕೆ ಕೆಳದಿಗುಂಡಾಜೋಯಿಸರ ಈ ಮಾತುಗಳು ಸಾಕ್ಷಿಯಾಗಿವೆ.

"ಈ ವರೆಗಿನ ಪೂರ್ಣೈಯ್ಯನವರ ಪತ್ರಗಳೆಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಒಂದೇ ಮಾದರಿ ಮುದ್ರೆ ಹಾಗೂ 'ರುಜುಶ್ರೀ' ಎಂಬ ಅಂತ್ಯಸಾಲಿನ ಉಲ್ಲೇಖಗಳು ಗಮನಾರ್ಹವಾಗಿದ್ದು ಪೂರ್ಣೈಯ್ಯನವರ ಸ್ವಹಸ್ತಾಕ್ಷರವೆಂಬುದನ್ನು ಸಿದ್ಧಪಡಿಸುತ್ತದೆ." ಸುಬೋಧಯಂ ರಾಮರಾಯರೂ ಪೂರ್ಣೈಯ್ಯನವರು ಸ್ವತಃ ಲೇಖನಿಯ ಚಾಲಕರಾಗಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ.

೪.೯ ಜೀತಪತ್ರ :

ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ಜೀತಪದ್ಧತಿಯನ್ನು ನಿದರ್ಶನಗೊಳಿಸುವಂತಹ ಸಾಂಸ್ಕೃತಿಕ ಪರಿಸರವನ್ನು ಕಾಣಬಹುದು. ಅಂತಹ ಕೆಲವು ಪತ್ರಗಳು ಕೂಡ ಕಾಣಸಿಗುತ್ತವೆ. ಇತಿಹಾಸದದರ್ಶನ ಸಂಪುಟ-೧೩, ೧೯೯೮ರ ಪ್ರಕಟಣೆಯಲ್ಲಿ ಶ್ರೀ.ಎಂ.ಬಿ.ಪಾಟೀಲರು ಒಂದು ಲೇಖನವನ್ನೇ ಬರೆದಿರುವುದು ಕಂಡುಬರುತ್ತದೆ. ಅದು ಈ ರೀತಿ ಇದೆ.

೧. ಜೀತನೋಂದಣಿ ಪದ್ಧತಿ :

ವ್ಯವಸಾಯ ಪ್ರಧಾನವಾದ ಈ ಪ್ರದೇಶದಲ್ಲಿ ಇತರೇ ಪ್ರದೇಶಗಳಲ್ಲಿ ಜಾರಿಯಲ್ಲಿ ಇದ್ದಂತೆ ಜೀತಪದ್ಧತಿಯು ನಡೆದುಕೊಂಡು ಬಂದಿರುವುದು ಸರ್ವೇಸಾಮಾನ್ಯವಾಗಿದ್ದರೂ ಜೀತವನ್ನು ನೋಂದಾಯಿಸುವ ಒಂದು ವಿಶಿಷ್ಟವಾದ ಸಂಪ್ರದಾಯ ಈ ಭಾಗದಲ್ಲಿ ಅದರಲ್ಲಿಯೂ ಘಟ್ಟದ ಮೇಲಿನ ಶಿರಸಿ-ಸಿದ್ದಾಪುರ ಪ್ರದೇಶದಲ್ಲಿ ಜಾರಿಯಲ್ಲಿ ಇದ್ದುದಾಗಿ ತಿಳಿದುಬಂದಿರುವುದು. ಬಹುಶಃ ಬಾಯಿಮಾತಿನ ಒಪ್ಪಂದಕ್ಕಿಂತ ಬರವಣಿಗೆಯ ಒಪ್ಪಂದ ಎರಡೂ ಪಕ್ಷದವರಿಗೆ ಸುರಕ್ಷಿತವೂ ಅಥವಾ ಪರಸ್ಪರ ಅಪನಂಬಿಕೆಯಿಂದ ಈ ರೀತಿ ದುಡಿಮೆಯ ನೋಂದಣಿಯಾಗಿರುವಂತೆ ಕಂಡುಬರುವುದು.

೧೮೮೦-೮೨ರಲ್ಲಿ ಶಿರಸಿ - ಸಿದ್ದಾಪುರ ತಾಲ್ಲೂಕಿಗಳಲ್ಲಿ ಸುಮಾರು ೨೦ ಜೀತದಾಳುಗಳ ಬಾಂಡುಗಳು ನೋಂದಾವಣಿಯಾದ ಬಗ್ಗೆ ದಾಖಲೆಗಳಿಂದ ತಿಳಿದುಬರುವುದು. ಜೀತ ನಿಲ್ಲುವವರು 'ಕರಾರುಪತ್ರ' ಬರೆದುಕೊಡುತ್ತಿದ್ದರು. ಈ ಪತ್ರಕ್ಕೆ ಸಾಕ್ಷಿಗಳು ಸಹ ಇರುತ್ತಿದ್ದರು. ಜೀತದಾಳುವಿನ ಸೇವೆಯನ್ನು ಊಟ ಮತ್ತು ಬಟ್ಟೆಕೊಡುವ ಕರಾರಿನ ಮೇಲೆ, ತಿಂಗಳಿಗೆ ಎರಡು ರೂ.ನಂತೆ ಇಲ್ಲದಿದ್ದಲ್ಲಿ ರೂ.ನಾಲ್ಕರಂತೆ ಮುರಿದುಕೊಳ್ಳಲಾಗುತ್ತಿತ್ತು. ಜೀತದಾಳು ಅಸಲು ಮತ್ತು ಬಡ್ಡಿಗೆ ಸೇರಿ ದುಡಿಯಬೇಕಾಗುತ್ತಿತ್ತು. ಅತ್ಯಂತ ಅನುಭವಿ, ಆರೋಗ್ಯವಂತ ಜೀತದಾಳು ಆಗಿದ್ದರೆ ತಿಂಗಳಿಗೆ ೪ ರೂನಂತೆ ಆಹಾರದೊಂದಿಗೆ ಬಟ್ಟೆ, ಕಂಬಳಿ, ಮೆಟ್ಟು ಮತ್ತು ೬.ರೂನಂತೆ ಆಹಾರ ಬಟ್ಟೆ ಇಲ್ಲದೆ ಒಣಜೀತ ದುಡಿಯಬೇಕಾಗುತ್ತಿತ್ತು. ಯಜಮಾನನ ಮನೆಯಲ್ಲಿ ಊಟ ಮಾಡುವ ಜೀತದಾಳು ಹೆಚ್ಚಿನ ಅವಧಿಯನ್ನು ಸಾಹುಕಾರರ ಮನೆಯಲ್ಲಿ ಕಳೆಯಬೇಕಾಗುತ್ತಿತ್ತು. ಊಟವನ್ನು ತನ್ನ ಮನೆಯಲ್ಲಿಯೇ ಮಾಡುತ್ತಿದ್ದ ಜೀತದಾಳಿಗೆ ಸಾಮಾನ್ಯವಾಗಿ ಮೂರು ಗಂಟೆಗಳ ಬಿಡುವನ್ನು ಕೊಡಬೇಕಾಗುತ್ತಿತ್ತು. ಯಜಮಾನ ಸತ್ತರೆ ಅವನ ವಾರಸುದಾರರೊಂದಿಗೆ ಜೀತ ಮುಂದುವರಿಯುತ್ತಿತ್ತು. ಆದರೆ ಜೀತದ ಆಳು ಸತ್ತರೆ ಸಾಲಕೊಟ್ಟವನಿಗೆ ಸಾಲಗಾರನ ಹೆಂಡತಿ ಮಕ್ಕಳ ಸೇವೆಯನ್ನು ಉಪಯೋಗಿಸುವ ಅಧಿಕಾರ ಸಾಮಾನ್ಯವಾಗಿ ಇರಲಿಲ್ಲ. ಒಂದು ವೇಳೆ ಕರಾರು ಪತ್ರದಲ್ಲಿ ಈ ವಿಷಯ ನಮೂದಾಗಿದ್ದರೆ ಅವರ ಸೇವೆಯನ್ನು

ಉಪಯೋಗಿಸಬಹುದಾಗಿತ್ತು. ಈ ಎಲ್ಲಾ ಜೀತಗಳಲ್ಲಿ ಸಾಲದ ಉದ್ದೇಶ ಬಹುಪಾಲು ಮದುವೆಯ ಸಾಲಗಳಾಗಿರುತ್ತಿದ್ದವು. ೧೮೮೧ನೇ ಆಕ್ಟೋಬರ್ ೧೧ರ ಶಿರಸಿ ತಾಲ್ಲೂಕಿನ ಕಲಗುಣೆಹಳ್ಳಿಯ ಒಂದು 'ಜೀತಪತ್ರ'ದಲ್ಲಿ ಗಂಡಹೆಂಡತಿ ಇಬ್ಬರೂ ಒಡೆಯನ ಸಾಲಕ್ಕೆ ಜೀತನಿಂತ ಬಗ್ಗೆ ಜೀತದಾಳಿನ ಹೆಂಡತಿಗೆ ಒಡೆಯನು ಒದಗಿಸಬೇಕಾದ ಬಟ್ಟೆ, ಬರೆ ಮುಂತಾದ ವಿವರ, ಜೀತಕ್ಕೆ ತಪ್ಪಿದಲ್ಲಿ ಸರ್ಕಾರ ವಿಧಿಸುವ ಶಿಕ್ಷೆಯನ್ನು ಅನುಭವಿಸಲು ಜೀತದಾಳು ಮನಸಾರೆ ಒಪ್ಪಿಗೆ ನೀಡಿರುವ ವಿಷಯ ತಿಳಿದುಬರುವುದು. ಈ ಪತ್ರಗಳು ಕೇವಲ ಒಪ್ಪಂದದ ಪಟ್ಟಿಗಳಾಗಿರದೇ ಅಂದಿನ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುವವು.

ಒಂದು ವೇಳೆ ಸೇವಕರು ಯಜಮಾನನ ಸೇವೆಯನ್ನು ಪೂರೈಸದೇ ಇದ್ದಲ್ಲಿ ಅವನ ಮೇಲೆ ಯಾವುದೇ ಕಾನೂನಿನ ಕ್ರಮ ಜರುಗಿಸುವಂತೆ ಇರಲಿಲ್ಲ. ಕಾರಣ ಇಂತಹ ದಾವೆಗಳನ್ನು ಕರಾರು ಪತ್ರ ಇದ್ದರೂ ನ್ಯಾಯಾಲಯ ಒಪ್ಪುತ್ತಿರಲಿಲ್ಲ. ಕಾರಣ ಬ್ರಿಟೀಷ್ ಸರ್ಕಾರವು ೧೮೪೩ರಲ್ಲಿ ಗುಲಾಮಗಿರಿಯನ್ನು ಕಾನೂನಿನ ಅನ್ವಯ ತೆಗೆದುಹಾಕಿತ್ತು. ಆದರೂ ೧೮೬೦ರ ಒಪ್ಪಂದದ ಕಾನೂನು ಪ್ರಕಾರ ಜೀತವನ್ನು ನೋಂದಾಯಿಸುತ್ತಿದ್ದರು. ಜೀತದಾಳುಗಳನ್ನು ಅಡಿಕೆ ತೋಟ, ಭತ್ತದ ಗದ್ದೆಯ ಕೆಲಸಕ್ಕೆ ಉಪಯೋಗಿಸಲಾಗುತ್ತಿತ್ತು. ಬಡ ಹವಿಕ ಹೆಣ್ಣುಮಕ್ಕಳು ಜಾತಿಯ ಶ್ರೀಮಂತರ ಮನೆಯಲ್ಲಿ ಆಹಾರ, ಬಟ್ಟೆಗೋಸ್ಕರ ದುಡಿಯುತ್ತಿದ್ದರು.

೨. ಜೀತ ನಿರತರು :

ಸಾಮಾನ್ಯವಾಗಿ ಕೆಳವರ್ಗದವರಲ್ಲಿ ಹೊಲೆಯರು, ಮಾದಿಗರು, ಮುಖರಿಗಳು, ದೀವರು, ಚಲವಾದಿ, ಆರೇರು ಮುಂತಾದವರು ಜೀತದಾಳಾಗಿ ಸೇವೆಯನ್ನು ಮಾಡುತ್ತಿದ್ದರು. ೧೮೦೦ರಲ್ಲಿ ಗಂಡಸರ ಒಂದು ವರ್ಷದ ಕೂಲಿ ೨೪ರೂ ನಂತೆ ಇದರೊಂದಿಗೆ ದಿನಕ್ಕೆ ಮೂರು ಊಟಗಳು ವರ್ಷಕ್ಕೆ ಒಂದು ಕಂಬಳಿ ಮತ್ತು ಒಂದು ಟಾವೆಲ್ಲು ನೀಡಲಾಗುತ್ತಿತ್ತು. ಹೆಂಗಸರಿಗೆ ದಿನದ ಕೂಲಿ ಒಂದೂವರೆ ಸೇರು ಅಕ್ಕಿ, ಮೇಲೆ ಒಂದಾಣೆ ನಗದು ರೂಪದಲ್ಲಿ ಕೊಡಲಾಗುತ್ತಿತ್ತು. ೧೮೮೪ರ ಸುಮಾರಿಗೆ ಕೂಲಿಯ ಪ್ರಮಾಣ ಗಣನೀಯವಾಗಿ ಹೆಚ್ಚಳಗೊಂಡಿದ್ದರಿಂದ ಜೀತಪದ್ಧತಿಯು ತನ್ನಿಂದ ತಾನೇ ಕಡಿಮೆಯಾಗುತ್ತಾ ನಡೆಯಿತು. [ಆದರೂ ಇದುವರೆವಿಗೂ ಒಂದಲ್ಲ ಒಂದು ವಿಧದಲ್ಲಿ ಮುಂದುವರಿದು ಬರುತ್ತಿದೆ] ಸುಗ್ಗಿಯ ನಂತರ ಬಡವರ್ಗದವರು ಸಾಮಾನು ಸಾಗಾಣಿಕೆ ವೃತ್ತಿಯಲ್ಲಿ ತೊಡಗುತ್ತಿದ್ದರು. ಅಲ್ಲದೇ ರಸ್ತೆ, ಸೇತುವೆ ನಿರ್ಮಾಣದಲ್ಲಿಯೂ ತೊಡಗುತ್ತಿದ್ದರು. ಕುಮಟಾ ಮತ್ತು ಕಾರವಾರಗಳಲ್ಲಿ ಹತ್ತಿ, ಜೇನು ಮಾಡುವ ಉದ್ಯೋಗದಲ್ಲಿ ತೊಡಗುತ್ತಿದ್ದರು.

ಈ ರೀತಿ ಜೀತಪತ್ರಗಳು ಸಾಮಾಜಿಕ ಪದ್ಧತಿಗೆ ಒಳ್ಳೆಯ ನಿದರ್ಶನಗಳಾಗಿ ಉಳಿದುಬರುತ್ತವೆ. ಇಂತಹ ಪತ್ರಗಳನ್ನು ಸಂರಕ್ಷಣೆ ಮಾಡುವುದು ಭಾರತೀಯ ಸಮಾಜದ ಚಿತ್ರಣ ಐತಿಹಾಸಿಕವಾಗಿ ಸಾಂಸ್ಕೃತಿಕ ಇತಿಹಾಸದ ವ್ಯಾಪ್ತಿಗೆ ಸೇರುವುದೆಂದು ಭಾವಿಸಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಕನ್ನಡ ನಿಘಂಟು : ಎಂಟನೇ ಸಂಪುಟ ಕನ್ನಡ ಸಾಹಿತ್ಯ ಪರಿಷತ್ತು

೨. ಇತಿಹಾಸದಾರ್ಶನ ಸಂಪುಟ-೧೬, ಲೇಖನ: ಡಾ.ಚನ್ನಕ್ಕಪಾವಟೆ, ೨೦೦೧, ಪುಟ-೮೬

೩. ಇತಿಹಾಸದರ್ಶನ ಸಂಪುಟ -೧೪, ಲೇಖನ: ಸುಮತೀಂದ್ರನಾಡಿಗ, ೧೯೯೯, ಪುಟ-೮೯

೪. ಕನ್ನಡ ನಿಘಂಟು : ಐದನೇ ಸಂಪುಟ ಕನ್ನಡ ಸಾಹಿತ್ಯ ಪರಿಷತ್ತು

೫. ಇತಿಹಾಸ ದರ್ಶನ ಸಂಪುಟ-೧೩, ಲೇಖನ: ಡಾ.ಎಂ.ಜಿ.ಚಂದ್ರಕಾಂತ, ಎಂ.ಜಿ.ನಾಗರಾಜ, ೧೯೯೮, ಪುಟ - ೨೫೮

೬. ಇತಿಹಾಸ ದರ್ಶನ ಸಂಪುಟ-೧೩, ಲೇಖನ : ಡಾ.ಎಚ್.ಎಸ್.ಗೋಪಾಲರಾವ್, ೧೯೯೮, ಪುಟ-೩೮

೭. 'ಕನ್ನಡದಲ್ಲಿ ಕಡತಗಳು' : ಲೇಖಕ. ಡಾ.ಎ.ಕೆ.ಶಾಸ್ತ್ರೀ, ಕನ್ನಡ ಸಾಹಿತ್ಯ ಪರಿಷತ್ತು

೮. ಇತಿಹಾಸದರ್ಶನ ಸಂಪುಟ-೨೩, ಲೇಖನ: ವಸುಂಧರಾ ದೇಸಾಯಿ ಮಹಾಪುರುಷ, ೨೦೦೮, ಪುಟ೨೯೧

೯. ಅದೇ, ಪುಟ

೧೦. ಅದೇ, ಪುಟ

ಅಧ್ಯಾಯ – ೫

ಕನ್ನಡ ಹಸ್ತಪ್ರತಿ ಪತ್ರಗಳ ಅಧ್ಯಯನದ ಸಾಧ್ಯತೆಗಳು

ಇಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ ಇನ್ನೂ ಮುದ್ರಣಗೊಳ್ಳದ ಪ್ರಕಟವಾಗದೆ ಇರುವಂತಹ ಹಸ್ತಪ್ರತಿಗಳನ್ನು ಮಾತ್ರ ಅಧ್ಯಯನ ಮಾಡುವುದು ಹೆಚ್ಚು ಸೂಕ್ತ.

ಇಂತಹ ಒಂದು ಘನಕಾರ್ಯ ಸಫಲವಾಗಬೇಕಾದರೆ ಹಸ್ತಪ್ರತಿಭಂಡಾರಗಳ ಮೊರೆ ಹೋಗಬೇಕಾಗುತ್ತದೆ. ಇದಕ್ಕಾಗಿ ಜಾನಪದ ಮತ್ತು ಶಾಸನ ಸಾಹಿತ್ಯಗಳ ಕ್ಷೇತ್ರಕಾರ್ಯಗಂತೆಯೇ ಹಸ್ತಪ್ರತಿ ಪತ್ರಗಳ ಅಧ್ಯಯನ ಕ್ಷೇತ್ರ ಕಾರ್ಯವೂ ಅನಿವಾರ್ಯ ಹಾಗೂ ಬಹುಪ್ರಮುಖವಾದುದು. ಆದರೆ ನಮ್ಮ ದೇಶದ ಹಸ್ತಪ್ರತಿ ಭಂಡಾರಗಳಲ್ಲಿ ನಮಗೆ ದೊರಕುವ ಹಸ್ತಪ್ರತಿಗಳು ಬಹುಪಾಲು ಪ್ರಾಚೀನವಾದುವುಗಳು. ಅದರಲ್ಲಿಯೂ ತಾಳೆಗರಿಗಳಲ್ಲಿ ಓಲೆಗರಿಗಳಲ್ಲಿ ಎಂಬುದರಲ್ಲಿ ಅನ್ಯ ಮಾತಿಲ್ಲ.

೧. ಹಸ್ತಪ್ರತಿ ಲಿಪಿ ಅಧ್ಯಯನ :

ಶಾಸನ ಶಾಸ್ತ್ರವನ್ನು ಅಧ್ಯಯನ ಮಾಡುವ ವಿದ್ಯಾರ್ಥಿ, ಅಧ್ಯಾಪಕ, ವಿದ್ವಾಂಸರು ಪ್ರಾಥಮಿಕ ಹಂತದಲ್ಲಿ ಹೇಗೆ 'ಲಿಪಿ' ಮತ್ತು 'ಲಿಪಿ ಸ್ವರೂಪ'ಗಳನ್ನು ಕಲಿತು ಅಭ್ಯಸಿಸುತ್ತಾರೆಯೋ ಅದೇ ರೀತಿ ಹಸ್ತಪ್ರತಿಶಾಸ್ತ್ರದ ಅಧ್ಯಯನದಲ್ಲಿ ಲಿಪಿಯ ಕಲಿಯುವಿಕೆಯು ಅತ್ಯಗತ್ಯವಾಗಿರುತ್ತದೆ. ಇದು ತಾಳೆಗರಿ ಪತ್ರಗಳನ್ನು ಸಹಾಯವಾಗುತ್ತದೆ.

ಶಾಸನಶಾಸ್ತ್ರದ ಸಂದರ್ಭದಲ್ಲಿಯಾದರೂ ಲಿಪಿಗಳ ಅಧ್ಯಯನ ವಿವಿಧ ಘಟ್ಟಗಳಲ್ಲಿ ಬದಲಾಗುತ್ತ ಹಲವು ಸ್ವೂಪಗಳನ್ನು ಪಡೆದುಕೊಳ್ಳುತ್ತ ಏಕಮಾರ್ಗವಾಗಿ ಸಾಗಿ ಬಂದಿದೆ. ಉದಾಹರಣೆಗೆ ನಮಗೆ ತಿಳಿದ ಮಟ್ಟಿಗೆ ಮೂಲತಃ ಕ್ರಿ.ಪೂ.೩ನೇ ಶತಮಾನದ ಅಶೋಕನ ಕಾಲದ ಶಾಸನಗಳಲ್ಲಿ ಕಂಡುಬರುವ ಬ್ರಾಹ್ಮಿ ಲಿಪಿಯಿಂದ ಆರಂಭಗೊಂಡ ಲಿಪಿ ಸ್ವರೂಪ ಬಹುಪಾಲು ಆಗ್ನೇಯ ಏಷ್ಯದ ಎಲ್ಲಾ ಭಾಷೆಗಳಲ್ಲಿಯೂ ಏಕರೂಪವಾಗಿ ಕಾಣಿಸಿಕೊಂಡಿದೆ. ತದ ನಂತರ ಬೇರೆ ಬೇರೆ ಭಾಷೆಗಳಲ್ಲಿ ಮುಂದಿನ ನೂರು–ಇನ್ನೂರು ವರ್ಷಗಳ ಅಂತರದಲ್ಲಿ ಬದಲಾವಣೆಯಾಗುತ್ತ ಬೇರೆ ಬೇರೆ ಸ್ವರೂಪವನ್ನು ಕಂಡು ಕೊಂಡಿದೆ. ಉದಾಹರಣೆಗೆ : ನಮ್ಮ ಕನ್ನಡ ಭಾಷೆಯಲ್ಲಿಯೇ ಶಾತವಾಹನ, ಗಂಗ, ಕದಂಬ, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರು, ಹೊಯ್ಸಳ ಮತ್ತು ವಿಜಯನಗರದ ಅರಸರ ಕಾಲದಲ್ಲಿವರೆಗೂ ವಿವಿಧ ಘಟ್ಟಗಳಲ್ಲಿ ವಿವಿಧ ಸ್ವರೂಪವನ್ನು ಕಾಣುತ್ತೇವೆ. ಮೈಸೂರು ಅರಸರ ಕಾಲದಿಂದೀಚೆಗೆ ಇಂದು ನಾವು ಬಳಸುವ ಆಧುನಿಕ

ಲಿಪಿ ಸ್ವರೂಪವನ್ನು ಸಂಪೂರ್ಣ ಬದಲಾವಣೆಯ ಹಂತದಲ್ಲಿ ನೋಡುತ್ತೇವೆ. ಆದ್ದರಿಂದ ಯಾರೇ ಒಬ್ಬ ಶಾಸನಶಾಸ್ತ್ರದ ಅಧ್ಯಯನಕಾರ ಕ್ರಿ.ಪೂ.೩ನೇ ಶತಮಾನದಿಂದ ವಿಜಯನಗರದ ಅರಸರ ಕಾಲದವರೆಗಿನ ಶಾಸನಗಳನ್ನು ಅಧ್ಯಯನ ಮಾಡಬೇಕಾದರೆ 'ಲಿಪಿ' ಮತ್ತು 'ಲಿಪಿ ಸ್ವರೂಪ'ವನ್ನು ಅಭ್ಯಾಸ ಮಾಡಲೇಬೇಕಾಗುತ್ತದೆ.

ಆದರೆ ಹಸ್ತಪ್ರತಿಶಾಸ್ತ್ರದಲ್ಲಿ ಶಾಸನಗಳ ಲಿಪಿ ಸ್ವರೂಪ, ಮತ್ತು ಬೆಳವಣಿಗೆಯಷ್ಟು ವಿಸ್ತಾರವಾಗಿರದಿದ್ದರೂ ವೈವಿಧ್ಯಯತೆಯಿಂದ ಕೂಡಿರುತ್ತದೆ. ಪ್ರಾಚೀನ ಓಲೆಗರಿಗಳು ಬಹುಪಾಲು ಗ್ರಂಥ, ತಿಗಳಾರಿ, ಅರವ, ಲಿಪಿಗಳಲ್ಲಿ ಕಂಡುಬಂದರೆ, ಆಧುನಿಕ ಹಸ್ತಪ್ರತಿಗಳಲ್ಲಿ ಕಂಡುಬರುವ ಲಿಪಿಗಳು ಅದರಲ್ಲಿಯೂ ವಿಶೇಷವಾಗಿ ಕಡತಗಳಲ್ಲಿ ಬಹುಪಾಲು ಮೋಡಿಲಿಪಿಯಲ್ಲಿ ಕಂಡುಬರುತ್ತದೆ. ಆದ್ದರಿಂದ ಅಧ್ಯಯನಕಾರ ಪ್ರಾಥಮಿಕವಾಗಿ ಹಸ್ತಪ್ರತಿಗಳನ್ನು ಅಧ್ಯಯನ ಮಾಡಬೇಕಾದರೆ ಪ್ರಾಚೀನ ಮತ್ತು ಆಧುನಿಕ ಹಸ್ತಪ್ರತಿಗಳಲ್ಲಿ ಕಂಡುಬರುವ 'ಲಿಪಿ' ಮತ್ತು ಅವುಗಳ ಸ್ವರೂಪಗಳನ್ನು ಅರಿತು ಕಲಿತು ಅಧ್ಯಯನದಲ್ಲಿ ತೊಡಗಬೇಕಾಗುತ್ತದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದಂತಹ ಸ್ನಾತಕೋತ್ತರ ಸಂಶೋಧನಾ ಕೇಂದ್ರಗಳಲ್ಲಿ ಮಾತ್ರ ಇಂತಹ ಹಸ್ತಪ್ರತಿಗಳ 'ಲಿಪಿ'ಯನ್ನು ಕಲಿಸುವ, ಕಲಿಯುವ ಮತ್ತು ಅಧ್ಯಯನ ಮಾಡುವ ಅವಕಾಶವನ್ನು ಕಲ್ಪಿಸಿವೆ.

ಶಾಸನ ಲಿಪಿಗಳನ್ನು ಅಧ್ಯಯನ ಮಾಡುವುದು ಅಷ್ಟೇನೂ ಕಷ್ಟಸಾಧ್ಯವಲ್ಲವೆನಿಸುತ್ತದೆ. ಆದರೆ ಹಸ್ತಪ್ರತಿ ಲಿಪಿಗಳಲ್ಲಿ ಮೋಡಿಲಿಪಿ ತುಂಬ ವಿಶಿಷ್ಟವಾಗಿರುತ್ತದೆ. ಇದನ್ನು ಕಲಿಯುವುದಾಗಲಿ, ಅಭ್ಯಸಿಸುವುದಾಗಲೀ ತುಂಬ ಕಷ್ಟಕರವಾಗಿರುತ್ತದೆ. ಏನೇ ಆಗಲಿ ಹಸ್ತಪ್ರತಿ ಪತ್ರಗಳ ಅಧ್ಯಯನದ ಸಂದರ್ಭದಲ್ಲಿ ತಿಗಳಾರಿ, ಅರವ, ಗ್ರಂಥ ಮತ್ತು ಆಧುನಿಕ ಪತ್ರಗಳ ಮೋಡಿಲಿಪಿಗಳ ಅಭ್ಯಾಸ ಅಧ್ಯಯನ ಸಾಧ್ಯತೆಗಳಲ್ಲಿ ಬಹುಪ್ರಮುಖ ಅಂಶವಾಗಿರುತ್ತದೆ.

ಡಾ.ಕೆಳದಿ ಗುಂಡಾಜೋಯಿಸ್‌ರವರು ಹೇಳುವಂತೆ "ಅನೇಕ ವಿಶ್ವವಿದ್ಯಾಲಯಗಳು, ಪತ್ರಾಗಾರ ಇಲಾಖೆಗಳು, ವಸ್ತುಸಂಗ್ರಹಾಲಯಗಳು, ಮಠಗಳು, ದೇವಾಲಯಗಳು, ಖಾಸಗಿ ಹಾಗೂ ಇತರೆಡೆಗಳಲ್ಲಿ ಲಭಿಸುವ ಕನ್ನಡ ಮೋಡಿ ದಾಖಲೆಗಳನ್ನು ಅಧ್ಯಯನ ಮಾಡಿ ಪ್ರಕಟಿಸುವುದು ಕನ್ನಡಿಗರ ಗುರುತರ ಜವಾಬ್ದಾರಿಗಳಲ್ಲಿ ಒಂದಾಗಿದೆ. ಕನ್ನಡ ಮೋಡಿಲಿಪಿಗಳ ವಿನ್ಯಾಸಗಳನ್ನು ಶಾಸನ ಶಾಸ್ತ್ರದ ರೀತಿಯಲ್ಲಿಯೇ ಲಿಪಿಗಳ ಅವಿಷ್ಕಾರ ಹಾಗೂ ಅವುಗಳ ಸ್ಖಾಲಿತ್ಯಗಳನ್ನು ಶಾಸ್ತ್ರೀಯ ಹಾಗೂ ವೈಜ್ಞಾನಿಕ ರೀತಿಗಳಲ್ಲಿ ಅಧ್ಯಯನ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಗೋವಾ ಸರ್ಕಾರವು ೧೯೭೩ರಲ್ಲಿಯೇ ಕನ್ನಡ ಮೋಡಿಲಿಪಿಯಲ್ಲಿ ನಡೆಸಿದ ಸಂಶೋಧನೆಗಳು ಶ್ಲಾಘ್ಯವಾಗಿದ್ದು, ಕನ್ನಡಿಗರಾದ ನಾವು ತಲೆ ತಗ್ಗಿಸಬೇಕಾಗಿದೆ. ಕನ್ನಡ ಮೋಡಿ ಲಿಪಿ ತಜ್ಞರಾದ ತರಬೇತಿ ಶಿಬಿರವನ್ನು

ಏರ್ಪಡಿಸಬೇಕಾಗಿರುವುದು ಅಭಿಲೇಖಾ ಇಲಾಖೆಯ ಆದ್ಯ ಕರ್ತವ್ಯ. ಈ ದಿಸೆಯಲ್ಲಿ ಮಂಜೂರಾಗಿರುವ ಯೋಜನೆಯೊಂದು ಏನಾಗಿದೆಯೋ ತಿಳಿಯದು. ಈಗಾಲಾದರೂ ಎಚ್ಚೆತ್ತು ಕನ್ನಡದ ಅಪೂರ್ವ ದಾಖಲೆಗಳು ನಾಶವಾಗುವ ಮುಂಚೆ ಅಳಿದುಳಿದವನ್ನಾದರೂ ಸಂಗ್ರಹಿಸಿ ಅವನ್ನೂ ಸಂಗ್ರಹವಾಗಿರುವವನ್ನೂ ಅಧ್ಯಯನ ಮಾಡಿ ಸೂಕ್ತರೀತಿಯಲ್ಲಿ ರಕ್ಷಿಸಿ ಕಾಪಾಡುವುದು ಕರ್ನಾಟಕದ ಹಾಗೂ ಕನ್ನಡದ ಹಿರಿಮೆಗೆ ನಾವು ಸಲ್ಲಿಸುವ ಹಿರಿಯ ಕಾಣಿಕೆಯಾಗುವುದರಲ್ಲಿ ಸಂದೇಹವಿಲ್ಲ."[7] ಎಂಬ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪ್ರಕಟಣೆ 'ಮಣಿಹ' ಕೃತಿಯಲ್ಲಿ ವ್ಯಕ್ತಪಡಿಸಿರುವುದನ್ನು ನೋಡಿದರೆ ಹಸ್ತಪ್ರತಿಗಳ ಲಿಪಿಯ ಅಭ್ಯಾಸದ ಅಗತ್ಯತೆ ತಿಳಿಯುತ್ತದೆ.

೨. ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಕಾಗದ ಪತ್ರಗಳ ಅಧ್ಯಯನದ ಸಾಧ್ಯತೆಗಳು :-

ಹಸ್ತಪ್ರತಿ ಪತ್ರಗಳ ಅಧ್ಯಯನ ಮಾಡುವ ಸಂದರ್ಭದಲ್ಲಿ ಚರಿತ್ರೆಯ ಪ್ರಜ್ಞೆ ಅಧ್ಯಯನಕಾರನಿಗೆ ಇರಬೇಕಾಗುತ್ತದೆ. ಏಕೆಂದರೆ ಯಾವುದೇ ಒಂದು ಹಸ್ತಪ್ರತಿಯ ಕಾಲವನ್ನು ಗುರುತಿಸುವುದು ಪ್ರಮುಖವಾಗಿರುತ್ತದೆ. ಅದರ 'ಭಾಷೆ ಮತ್ತು ಲಿಪಿ' ಸ್ವರೂಪ ಸ್ಪಷ್ಟವಾಗಿ ಒಂದು ನಿರ್ದಿಷ್ಟ ಕಾಲಕ್ಕೆ ಸೇರಿರುವುದು ತಿಳಿದುಬರುತ್ತದೆ. ಆದ್ದರಿಂದ ಹಸ್ತಪ್ರತಿ ಪತ್ರಗಳ ಅಧ್ಯಯನ ಮತ್ತು ಆಯಾ ಕಾಲದ ಚರಿತ್ರೆಯ ತೌಲನಿಕ ಅಧ್ಯಯನ ಅತ್ಯಗತ್ಯವಾಗಿರುತ್ತದೆ. ಏಕೆಂದರೆ ಹಸ್ತಪ್ರತಿ ಪತ್ರದಲ್ಲಿ ಯಾವುದೋ ವಿಷಯ ಯಾವುದೇ ಸಂದೇಹಕ್ಕೆಡೆಮಾಡಿಕೊಟ್ಟಾಗ ಆ ಕಾಲಘಟ್ಟದ ಚರಿತ್ರೆಯ ಸಹಾಯದಿಂದ ಪರಿಹರಿಸಿಕೊಳ್ಳಬಹುದು ಅಥವಾ ಲಿಪಿ ಮತ್ತು ಭಾಷೆಯ ದೃಷ್ಟಿಯಿಂದ ಯೋಚಿಸಿದರೆ ಆ ಕಾಲದ ಲಿಪಿ – ಭಾಷೆಯನ್ನು ಅರ್ಥಮಾಡಿಕೊಂಡು ಪತ್ರಗಳ ಓದುವಿಗೆ ಮತ್ತು ಅರ್ಥೈಸಿಕೊಳ್ಳುವಿಕೆಗೆ ಸಾಧ್ಯವಾಗುತ್ತದೆ.

ಉದಾಹರಣೆಗೆ : ಗ್ರಂಥ ಲಿಪಿ ಚೋಳರ ಕಾಲದಲ್ಲಿ ತಮಿಳುನಾಡಿನಲ್ಲಿ ಬಹುಪಾಲು ಬಳಸುತ್ತಿದ್ದ ಹಸ್ತಪ್ರತಿ ಬರಹ ಸಾಮಾಗ್ರಿಯಾಗಿತ್ತು. ಆಗ ಚೋಳರ ಕಾಲದ ಅಂದರೆ ಕ್ರಿ.ಶ.೭ನೇ ಶತಮಾನದಿಂದ ೧೫ನೆ ಶತಮಾನದವರೆಗಿನ ಚರಿತ್ರೆ ಅಧ್ಯಯನ ಅವಶ್ಯವಾಗಿರುತ್ತದೆ. ಇದರಿಂದ ಆ ಕಾಲದ ಚೋಳರ ಸಾಂಸ್ಕೃತಿಕ ಕೊಡುಗೆ ಏನೆಂಬುದು ತಿಳಿದುಬರುತ್ತದೆ.

ಕನ್ನಡ ಹಸ್ತಪ್ರತಿ ಪತ್ರಗಳನ್ನು ಅಧ್ಯಯನ ಮಾಡುವಾಗ ಅನುಷಂಗಿಕವಾಗಿ ದಾಖಲೆ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಬಖೈರುಗಳು ಮತ್ತು ಕೈಫಿಯತ್ತುಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳುವುದು ಸೂಕ್ತವೆಂದು ತೋರುತ್ತದೆ.

ಉದಾಹರಣೆಗೆ : ಮೆಕೆಂಜಿ ಸಂಗ್ರಹಿಸಿರುವ ಕೈಫಿಯತ್ತುಗಳಲ್ಲಿ ಚಾರಿತ್ರಿಕ ಹಿನ್ನೆಲೆಯುಳ್ಳ ಸಿರ್ಸಿ ಕೈಫಿಯತ್ತುಗಳು ಮತ್ತು ಮಠಮಾನ್ಯಗಳ ಕೈಫಿಯತ್ತು ಈ ಎರಡು ಕೈಫಿಯತ್ತುಗಳ ವಿಶಿಷ್ಟತೆ ಹೆಚ್ಚು ಕಡಿಮೆ ಪತ್ರ ಸಾಹಿತ್ಯದ ಸ್ವರೂಪವನ್ನೇ ಪಡೆದುಕೊಂಡಿವೆ.

ಚಾರಿತ್ರಿಕ ಹಿನ್ನೆಲೆಯುಳ್ಳ ಸಿರ್ಸಿ ಕೈಫಿಯತ್ತುಗಳು ಈ ರೀತಿ ಪ್ರಾರಂಭವಾಗುತ್ತದೆ. "ಭಾವ ಸಂವತ್ಸರದ ಆಶಾಡಶುದ್ಧ ೬ರಲ್ಲು ಹುಣಿಶೆಕೊಪ್ಪದ ಪುಟ್ಟಯ್ಯಹೆಗ್ಗಡೆ, ನರಸಪ್ಪ ಹೆಗ್ಗಡೆ, ವಿಘ್ನೇಶ್ವರ ಹೆಗ್ಗಡೆ, ಭೀಷ್ಮಪ್ಪನ ಪುಟ್ಟಯ್ಯ ಹೆಗ್ಗಡೆ ಮುಂತಾದವರು ಬರೆಸಿಕೊಟ್ಟ ಕೈಫಿಯತ್ತು. ಈ ಕೈಫಿಯತ್ತನಲ್ಲಿ ಸೋದೆ ಅರಸರ ವಂಶಾವಳಿ ಪತ್ರ, ಕೆಳದಿ ಅರಸರು ಮತ್ತು ಬಿಜಾಪುರದ ಬಾದಶಾಹರಿಗೆ ಸಂಬಂಧಿಸಿದ ಪೌಜುಪತ್ರಗಳು ಕಾಣಸಿಗುತ್ತವೆ".

ಇನ್ನು ಮೆಕೆಂಜಿ ಸಂಗ್ರಹಿಸಿದ ಮಠಮಾನ್ಯಗಳ ಕೈಫಿಯತ್ತುವಿನಲ್ಲಿ ಪೇಜಾವರ ಮಠದ ಕೈಫಿಯತ್ತು; 'ಮಹಾಜ್ಞಾನ ವಿಶೇಷವಾಗಿ ಸ್ವಮತ ಪ್ರತಿಸ್ಮಾರಕಗಳಾದ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಮಾಡುತ್ತ ಭಾಗೀರಥಿ ಯಾತ್ರೆಯನ್ನು ಮಾಡಿ ನಳ ಸಂವತ್ಸರದ ವೈಶಾಖ ಶು॥೨ರಲ್ಲು ವೈಕುಂಠ ಯಾತ್ರೆಯನ್ನು ಮಾಡಿದರು. ಅವರ ಶಿಷ್ಯ ವಿಶ್ವನಿಧಿತೀರ್ಥರು ಮಹಾವಿರಕ್ತವಂತರಾಗಿ ಮಹಾ ತಪೋನಿಷ್ಠರಾಗಿ ಪೇಜಾವರದಲ್ಲೂ ವಿಭವ ಸಂವತ್ಸರದ ಪಾಲ್ಗುಣ.ಶು೭॥ರಲ್ಲೂ ದೇವರ ಯಾತ್ರೆ ಮಾಡಿದರು" ಇದೊಂದು ವಿಶಿಷ್ಟ ಪತ್ರವಾಗಿ ಕಂಡುಬರುತ್ತದೆ.

ಹಿಂದಿನ ಕೆಲವು ಪತ್ರ ಮತ್ತು ಅರ್ಜಿಗಳ ಮಾದರಿ ಸಹ ಮೆಕೆಂಜಿ ಸಂಗ್ರಹಿಸಿದ್ದಾನೆ. ಒಬ್ಬ ಪ್ರಜೆ ಸಬ್ ಕಲೆಕ್ಟರ್ ಅವರಿಗೆ ಬರೆದ ಒಂದು ಅರ್ಜಿಯ ಮಾದರಿ ಹೀಗಿದೆ "ಸನ್ ೧೨೪೪ಲನೆ ಫಸಲ್ ಮಾಹೆ ಜೂನ್ ತಾರೀಖು ೧ರಲ್ಲಿ ಹಾಲಿ ಪುತ್ತೂರಿನಲ್ಲಿರುವ ಶಾಂತಪ್ಪನು ಬರಕೊಂಡ ಅರ್ಜಿ. ನಾನು ಸಕುಟುಂಬಸ್ಥ. ಕೇವಲ ಗರೀಬಾ. ನನಗೆ ಯಿದ್ದ ಕೋರ್ಟು ಯಿಲಾಖೆ...... ಖಾವಂದರು ದಯವಿಟ್ಟು ಯಾವುದಾದರೊಂದು ಯಿಸಂ ನನಗೆ ಮೊತ್ತ ಜರೂರು ಕೊಡುವಂತೆ ಅಪ್ಪಣೆ ಆಗಿ ನನ್ನ ಕುಟುಂಬ ಸಮೇತ ರಕ್ಷಣೆ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ"[೨]

ಶಾಂತಪ್ಪನ ರುಜು

ಈ ರೀತಿ ಕೈಫಿಯತ್ತುಗಳು, ಬಖೈರುಗಳು ಹಸ್ತಪ್ರತಿ ಪತ್ರಗಳ ಅಧ್ಯಯನದ ಸಾಧ್ಯತೆಗಳ ವ್ಯಾಪ್ತಿಯಲ್ಲಿ ಬರುವುದರಿಂದ ಅವುಗಳ ಲಿಪಿ, ಭಾಷೆ, ಚರಿತ್ರೆಗಳನ್ನೊಳಗೊಂಡ ಅಧ್ಯಯನದ ಸಾಧ್ಯತೆಗಳನ್ನು ಕೂಡ ಕಾಣಬಹುದು.

೩. ಕವಿಗೆ ಕವಿ ಮಣಿವಂ :-

ಸಾಹಿತ್ಯ ಕ್ಷೇತ್ರ ಬಹುವಿಸ್ತಾರವಾದುದು. ಅನೇಕ ಜನ ಕವಿ-ಮಿತ್ರರು, ಲೇಖಕ-ಲೇಖಕಿಯರು ತಮ್ಮ ತಮ್ಮ ಅನಿಸಿಕೆ, ಆಗು ಹೋಗುಗಳನ್ನು, ಸಾಹಿತ್ಯಕ-ಸಾಂಸ್ಕೃತಿಕ ವಿಚಾರಗಳನ್ನು ದೇಶ-ಕಾಲಾತೀತ ವೈಚಾರಿಕ ಅಂಶಗಳನ್ನು ಪರಸ್ಪರ ಪತ್ರವ್ಯವಹಾರಗಳ ಮೂಲಕ ವಿನಿಮಯ ಮಾಡಿಕೊಂಡಿರುತ್ತಾರೆ. ಅಂತಹ ಪತ್ರಗಳನ್ನು ಅಧ್ಯಯನದ ಸಾಧ್ಯತೆಗೆ ಒಳಪಡಿಸಿಕೊಂಡಾಗ ಎಷ್ಟೋ ಸಾಹಿತ್ಯಕ-ಸಾಂಸ್ಕೃತಿಕ ಮತ್ತು ಚಾರಿತ್ರಕ ಅಂಶಗಳು ಹೊರಬರುತ್ತವೆ.
ಉದಾಹರಣೆಗೆ : ಫ.ಗು.ಹಳಕಟ್ಟಿಯವರು ಮತ್ತು ಶ್ರೀ.ಎಸ್.ಆರ್.ಮಲ್ಲಪ್ಪನವರು, ಫ.ಗು.ಹಳಕಟ್ಟಿಯವರು ಮತ್ತು ತೀ.ನಂ.ಶ್ರೀ, ಮಾಸ್ತಿ-ಬೇಂದ್ರೆ, ಕುವೆಂಪು-ಬೇಂದ್ರೆ ಹೀಗೆ ಹಲವಾರು ಕವಿ ಮಿತ್ರರ ನಡುವೆ ನಡೆದಿರುವ ಪತ್ರ ವ್ಯವಹಾರಗಳನ್ನು ಸೋದಾಹರಣವಾಗಿ ಅಧ್ಯಯನವಾಗಬೇಕಿದೆ. ಇದರಿಂದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ತಿಳಿಯಬಹುದಾಗಿದೆ.

೪. ಕ್ಷೇತ್ರ ಕಾರ್ಯ :

ಭರತ ಭೂಮಿ ಸರಸ್ವತಿಯ ತೊಟ್ಟಿಲು. ಅತಿ ಪ್ರಾಚೀನ ಕಾಲದಿಂದಲೂ ಬರವಣಿಗೆ ಕಾರ್ಯ ನಡೆದಿದೆ. ತಾಳೆಗರಿ, ಬೂರ್ಜಾಪತ್ರ ಮತ್ತು ಕೋರಿಕಾಗದಗಳ ಮೇಲೆ ಈ ಬರವಣಿಗೆ ಹೆಚ್ಚು ದೊರೆಯುತ್ತದೆ. ಆದರೆ ಈ ಬರವಣಿಗೆಯ ಸಾಮಾಗ್ರಿಗಳು ಬಹುವರ್ಷಗಳ ಕಾಲ ಬದುಕಿ ಬರಲು ಸಾಧ್ಯವಿರುತ್ತಿರಲಿಲ್ಲ. ಪ್ರಕೃತಿಯ ವಿಕೋಪಕ್ಕೂ, ಮನುಷ್ಯನ ನಿರ್ಲಕ್ಷ್ಯಕ್ಕೂ ಒಳಪಟ್ಟು ನಶಿಸಿ ಹೋಗುವಂತಹವು. ಅದ್ದರಿಂದ ಇವುಗಳನ್ನು ಹುಡುಕಿ ಸಂಗ್ರಹಿಸುವುದು, ಸಂಗ್ರಹಿಸಿದ ಹಸ್ತಪ್ರತಿಗಳನ್ನು ಲಿಪಿಕಾರರಿಂದ ಪ್ರತಿ ಮಾಡಿಸುವ ಕೆಲಸ ಬಹು ಹಿಂದಿನಿಂದಲೂ ನಡೆದುಬಂದಿದೆ. ಇನ್ನೂ ದೊರಕದೆ ಅಜ್ಞಾತವಾಗಿರುವ ಎಷ್ಟೋ ಹಸ್ತಪ್ರತಿ ಪತ್ರಗಳನ್ನು ಶೋಧಿಸಿ ಹೊರತೆಗೆಯಬೇಕಾದ ಕಾರ್ಯ ನಡೆಯಬೇಕಾಗಿದೆ. ಅದಕ್ಕಾಗಿ ಹಸ್ತಪ್ರತಿ ಶಾಸ್ತ್ರಜ್ಞರು, ಜಾನಪದ, ಶಾಸನತಜ್ಞರಂತೆಯೇ ಕ್ಷೇತ್ರ ಕಾರ್ಯದಲ್ಲಿ ತೊಡಗಬೇಕಾಗಿದೆ.

ಹಸ್ತಪ್ರತಿ ಪತ್ರಗಳಿಗಾಗಿ ಕವಿ -ಲೇಖಕ, ಪಂಡಿತ ವರ್ಗಗಳನ್ನು ಭೇಟಿ ಮಾಡಿ, ಅವರ ಮನವೊಲಿಸಿ ಪತ್ರಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಬೇಕು. ಹೀಗೆ ಅಧ್ಯಯನಕ್ಕೆ ತೊಡಗುವ ಮೊದಲು ವಿಷಯಾನುಸಾರ ವಿಂಗಡಿಸಿ ಪತ್ರ ಸೂಚಿಯನ್ನು ತಯಾರಿಸಬೇಕು. ಸೂಚಿ ಮಾಡುವಾಗ ಹಸ್ತಪ್ರತಿ ಪತ್ರಗಳು ಸಿಕ್ಕಿದ ಸ್ಥಳದ ಹೆಸರು, ದೊರಕಿಸಿ ಕೊಟ್ ವ್ಯಕ್ತಿಯ ಹೆಸರು, ವಿಳಾಸ, ವಯಸ್ಸು, ಅವನ ಪೂರ್ವಾಪರಗಳನ್ನು ತಿಳಿದು ಬರೆದುಕೊಳ್ಳುವುದು ಅವಶ್ಯವಾಗಿರುತ್ತದೆ. ಏಕೆಂದರೆ ಹಸ್ತಪ್ರತಿ

ಪತ್ರಗಳ ನಿಖರ ಮಾಹಿತಿಯನ್ನು ಖಚಿತಪಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಇದರಿಂದ ಸಾಂಸ್ಕೃತಿಕ ಹಿನ್ನೆಲೆ, ಕಾಲಾದೇಶಾತೀತವಾದ ಚಾರಿತ್ರಿಕ ಅಂಶಗಳು ಪತ್ರಗಳ ಅಧ್ಯಯನಕ್ಕೆ ಪೂರಕವಾಗಬಹುದು.

೫. ಕಾಗದ ಪತ್ರಗಳ ಸಂರಕ್ಷಣೆ :

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ತಾಳೆಗರಿ ಸಂರಕ್ಷಿಸುವುದು ತಜ್ಞರ ಅತ್ಯಮೂಲ್ಯವಾದ ಜವಾಬ್ದಾರಿ ಮತ್ತು ಆದ್ಯ ಕರ್ತವ್ಯ. ಕಾಗದ ಪತ್ರಗಳನ್ನು ಸಂಗ್ರಹಿಸುವಾಗಲೇ ಅವುಗಳ ವಿಂಗಡಣಾಕ್ರಮ ಅತಿ ಮುಖ್ಯವೆನಿಸುತ್ತದೆ. ಏಕೆಂದರೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇವರು ದೊಡ್ಡ ಸಾಹಿತಿಗಳು ಮತ್ತೇ ಇವರು ಸಣ್ಣ ಸಾಹಿತಿಗಳು ಎನ್ನದೇ ಹಸ್ತಪ್ರತಿಶಾಸ್ತ್ರ ತಜ್ಞರಿಗೆ ದೊರೆತ ಕವಿ-ಲೇಖಕರ ಪತ್ರಗಳನ್ನು ಒಂದೆಡೆ ಕ್ರೋಢಿಕರಿಸಿ ಅವುಗಳನ್ನು ಕವಿಗಳ ಹೆಸರಿನ ಅಕಾರಂತವಾಗಿ ವಿಂಗಡಿಸಿ ಪತ್ರ ಸೂಚಿ ತಯಾರಿಸಬೇಕು. ಆಗ ಅವುಗಳನ್ನು ಅಧ್ಯಯನ ಮಾಡಲು ಬಹಳ ಸುಲಭವಾಗುತ್ತದೆ.

೬. ಸಾಹಿತ್ಯ ವಿಮರ್ಶೆ ಮತ್ತು ಪತ್ರಗಳು :

ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಮನೋವಿಜ್ಞಾನ ಮತ್ತು ಸಾಹಿತ್ಯ ವಿಮರ್ಶೆ, ಸಮಾಜಶಾಸ್ತ್ರ ಮತ್ತು ಸಾಹಿತ್ಯ ವಿಮರ್ಶೆ, ತತ್ವಶಾಸ್ತ್ರ ಮತ್ತು ಸಾಹಿತ್ಯ ವಿಮರ್ಶೆ ಮುಂತಾದ ಸಾಹಿತ್ಯದ ವಿವಿಧ ಆಯಾಮಗಳನ್ನು ಕುರಿತು ಹೊರಮುಖಿ ವಿಮರ್ಶೆಯ ಸಂದರ್ಭದಲ್ಲಿ ಸಾಹಿತಿ ಸಾಹಿತಿಗಳ ನಡುವಿನ ಪತ್ರ ವ್ಯವಹಾರಗಳು ವಿಮರ್ಶೆಗೆ ಸಹಕಾರಿಯಾಗುತ್ತದೆ.

೭. ಪ್ರವಾಸ ಸಾಹಿತ್ಯ ಮತ್ತು ಪತ್ರಗಳು :

ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸ ಸಾಹಿತ್ಯವನ್ನು ಕಡೆಗಣಿಸುವಂತಿಲ್ಲ. ಸಾಹಿತಿಗಳೂ - ಪ್ರವಾಸ ಕೈಗೊಂಡ ಸಂದರ್ಭಗಳಲ್ಲಿ ತಮ್ಮ ಆಪ್ತ ಬಂಧುಗಳೊಡನೆ, ಮಿತ್ರರೊಡನೆ ಪತ್ರವ್ಯವಹಾರ ನಡೆಸಿರುತ್ತಾರೆ. ಹೊರದೇಶದ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಿದ್ದಾಗ ಅಲ್ಲಿ ಎಷ್ಟೋ ವಿಚಾರಗೋಷ್ಠಿಗಳು, ಕವಿಗೋಷ್ಠಿಗಳಲ್ಲಿ ಭಾಗವಹಿಸಿರುತ್ತಾರೆ. ಇಂತಹ ಸಾಹಿತ್ಯಗೋಷ್ಠಿಗಳ ಬಗ್ಗೆ ಆಯಾ ದೇಶದ ಭಾಷೆಯ ಸಾಹಿತ್ಯ ವಿಮರ್ಶೆಗಳ ಬಗ್ಗೆ ಪತ್ರಗಳ ಮುಖೇನ ಚರ್ಚೆ ಮಾಡಿರುತ್ತಾರೆ. ಅಂತಹ ಪತ್ರಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವುದರಿಂದ ಆಯಾ ದೇಶಗಳ ಕಲೆ, ಸಾಹಿತ್ಯ ಮುಂತಾದವುಗಳಲ್ಲದೆ, ಅಲ್ಲಿನ ಜನಜೀವನ, ಆಗುಹೋಗುಗಳು, ಅಲ್ಲಿನ ಸಾಂಸ್ಕೃತಿಕ ಸನ್ನಿವೇಶಗಳು

ಮುಂತಾದವುಗಳ ಬಗ್ಗೆ ತಿಳಿದುಬರುತ್ತದೆ. ಆದ್ದರಿಂದ ಇಂತಹ ಪ್ರವಾಸ ಸಂದರ್ಭದ ಪತ್ರ ಸಾಹಿತ್ಯವನ್ನೇ ಪ್ರತ್ಯೇಕ ಪತ್ರಸೂಚಿ ತಯಾರಿಸಿ ಸಂರಕ್ಷಣೆ ಮಾಡುವುದು ಉಚಿತವಾಗಿರುತ್ತದೆ.

೮. ಚರಿತ್ರೆಕಾರರು ಮತ್ತು ಪತ್ರಗಳು :

ಸಾಹಿತ್ಯವಲಯಕ್ಕೆ ಸಂಬಂಧಿಸಿದಂತೆ ಹೇಗೆ ಕಾಗದ ಪತ್ರಗಳನ್ನು ಕ್ರೋಢಿಕರಿಸುತ್ತೇವೆಯೋ ಅದೇ ರೀತಿ ಚಾರಿತ್ರಿಕ ವಿಷಯಗಳಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ಕೂಡ ಒಂದೆಡೆ ಸಂಗ್ರಹಿಸುವುದ ಮಹತ್ವವೆನಿಸುತ್ತದೆ. ಚರಿತ್ರೆಕಾರರು, ಸಂಶೋಧಕರು, ಶಾಸನಶಾಸ್ತ್ರ ತಜ್ಞರಿರಬಹುದು. ನಾಣ್ಯಶಾಸ್ತ್ರಜ್ಞರಿರಬಹುದು. ಇವರುಗಳ ನಡುವೆ ನಡೆದಿರುವ ಪತ್ರ ವ್ಯವಹಾರಗಳೇನಾದರೂ ಕಂಡುಬಂದರೆ ಅಂತಹ ಪತ್ರಗಳನ್ನು ಅವರ ಮನವೊಲಿಸಿ ಸಂಗ್ರಹಿಸಬೇಕು. ಅಕಾರಂತವಾಗಿ ಚರಿತ್ರೆಕಾರ ಮತ್ತು ಸಂಶೋಧಕರ ಪತ್ರ ಸೂಚಿಗಳನ್ನು ತಯಾರಿಸುವುದು ಹೆಚ್ಚು ಸೂಕ್ತವೆನಿಸುತ್ತದೆ.

ಇಲ್ಲೆಲ್ಲಾ ನಾವು ಬಹುಸೂಕ್ಷ್ಮವಾಗಿ ನೋಡಬೇಕಾದ ಅಂಶವೇನೆಂದರೆ ಸಾಹಿತಿಗಳ, ಲೇಖಕರ, ಚರಿತ್ರೆಕಾರರ, ಸಂಶೋಧಕರ, ವಿಮರ್ಶಕರ ಮತ್ತು ರಾಜಕೀಯ ಗಣ್ಯರ ಸ್ವಹಸ್ತಾಕ್ಷರ ಪತ್ರಗಳನ್ನು ಸಂಗ್ರಹಿಸುವ ಕಡೆಗೆ ಗಮನ ಹರಿಸಬೇಕಾಗುತ್ತದೆ.

೯. ಸಾಹಿತ್ಯ ಮತ್ತು ಚರಿತ್ರೆಗಳಿಗೆ ಸಂಬಂಧಿಸಿದ ಹಸ್ತಪ್ರತಿ ಪತ್ರಭಂಡಾರಗಳು :

ಹಸ್ತಪ್ರತಿಭಂಡಾರಗಳು, ಗ್ರಂಥಾಲಯಗಳು ಮತ್ತು ಪತ್ರಾಗಾರ ಇಲಾಖೆಗಳಿರುವಂತೆಯೇ, ಸಾಹಿತ್ಯ ಮತ್ತು ಚರಿತ್ರೆಗಳ ವಿಷಯಗಳಿಗೆ ಸಂಬಂಧಪಟ್ಟಂತೆ ಸಾಹಿತಿ-ಕಲಾವಿದರ (ಚಿತ್ರಕಲಾವಿದರು, ನಾಟಕ, ಶಿಲ್ಪಕಲೆ, ಸಿನಿಮಾ ಕಲೆ) ಚರಿತ್ರೆಕಾರರ, ಸಂಶೋಧಕರ ಪತ್ರವ್ಯವಹಾರಗಳಿಗೆ ಸಂಬಂಧಿಸಿದಂತೆ ಹಸ್ತಪ್ರತಿ ಭಂಡಾರಗಳನ್ನು ತೆರೆಯಬೇಕು. ಆ ಮೂಲಕ ಹಸ್ತಪ್ರತಿ ಪತ್ರಗಳನ್ನು ಸಂರಕ್ಷಿಸುವ ಕೈಂಕರ್ಯವನ್ನು ಆಸಕ್ತರು, ಸರ್ಕಾರ ಮತ್ತು ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಪ್ರಯತ್ನಿಸಬೇಕು.

ಪತ್ರಾಗಾರ ಇಲಾಖೆಗಳಲ್ಲಿ ಈಗಾಗಲೇ ಐತಿಹಾಸಿಕ, ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಪತ್ರಗಳನ್ನು ಸಂಗ್ರಹಿಸಿ ಸಂರಕ್ಷಿಸಲಾಗಿದೆ. ಇನ್ನು ಗ್ರಂಥಾಲಯಗಳಲ್ಲಿ ಮುದ್ರಿತ ಕೃತಿಗಳ ಸಂಗ್ರಹ ಮತ್ತು ಸಂರಕ್ಷಿಸುತ್ತಾ ಬಂದಿರುತ್ತಾರೆ. ಆದರೆ ಸಾಹಿತಿ-ಕಲಾವಿದರ-ವಿಮರ್ಶಕ-ಸಂಶೋಧಕರ ಪತ್ರಗಳನ್ನು ಸಂರಕ್ಷಿಸುವಂತಹ ಹಸ್ತಪ್ರತಿ ಪತ್ರಭಂಡಾರಗಳು ಸ್ಥಾಪನೆಯಾಗಬೇಕಾಗಿರುವುದು ಗುರುತರ ಜವಾಬ್ದಾರಿ ಕಾರ್ಯವೆಂದು ಭಾವಿಸಬಹುದು. ಸಾಮಾನ್ಯವಾಗಿ ಈಗಿರುವ ಹಸ್ತಪ್ರತಿಭಂಡಾರಗಳಲ್ಲಿ ಕಾವ್ಯ-ಶಾಸ್ತ್ರ ಮುಂತಾದ ಸಾಹಿತ್ಯಕವಾದ ಓಲೆಗರಿಗಳನ್ನು ಕಾಣಬಹುದು. ಆದ್ದರಿಂದ ಆಯಾ ದೇಶ ಭಾಷೆಗಳ ಸಾಹಿತ್ಯ ಅಕಾಡೆಮಿಗಳು, ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ವಸ್ತು

ಸಂಗ್ರಹಾಲಯಗಳಲ್ಲಿ ಸಾಹಿತಿಗಳ ಪತ್ರಗಳನ್ನು ಸಂರಕ್ಷಿಸುವ ವ್ಯವಸ್ಥೆ ಮಾಡಬಹುದು ಮತ್ತು ಇಂತಹ ಹಸ್ತಪ್ರತಿ ಪತ್ರಗಳ ಭಂಡಾರಗಳನ್ನು ಸ್ಥಾಪಿಸಿ. ಕಾಲದಿಂದ ಕಾಲಕ್ಕೆ ನಶಿಸಿ ಹೋಗುವಂತಹ ಪತ್ರಗಳನ್ನು ಸಂಗ್ರಹಿಸಿ, ಪತ್ರಸೂಚಿಗಳನ್ನು ಮಾಡಿ, ಆಧುನಿಕ ಕಾಲದಲ್ಲಿ ಗಣಕೀಕರಣ ಮಾಡಿಸಬೇಕು. ಈ ಪತ್ರಗಳಣ್ಣು ಮೈಕ್ರೋಫಿಲಂ ಮಾಡುವಂತಹ ಕೆಲಸವೂ ಕೂಡ ಆಗಬೇಕು. ಪ್ರಾಚೀನ ಕಾಲದಲ್ಲಿ ತಾಳೆಗರಿಗಳನ್ನು ಲಿಪಿಕಾರರಿಂದ ಪ್ರತಿಕಾರ್ಯ ಮಾಡಿಸುತ್ತಿದ್ದರು. ಆದರೆ ಇದು ಕಂಪ್ಯೂಟರೀಕರಣ ಯುಗವಾಗಿರುವುದರಿಂದ ಈ ಹಸ್ತಪ್ರತಿ ಪತ್ರಗಳನ್ನು ಅಂತರ್ಜಾಲದಲ್ಲಿ ಸೇರಿಸಿ ಜಗತ್ತಿನ ಯಾವ ಮೂಲೆಯಲ್ಲಿಯಾದರೂ ಆ ಕ್ಷಣದಲ್ಲಿ ಪತ್ರಗಳನ್ನು ವೀಕ್ಷಿಸುವ, ಓದುವಂತಹ ಅನುಕೂಲಕ್ಕೆ ಕಲ್ಪಿಸಬೇಕಾಗಿದೆ.

ಅಡಿ ಟಿಪ್ಪಣಿಗಳು

೧. 'ಮಣಿಹ' ಸಂ. ಪ್ರೊ.ಎಂ.ವಿ.ಸೀತಾರಾಮಯ್ಯ, ಮತ್ತು ಡಾ.ಆರ್.ಶೇಷಶಾಸ್ತ್ರೀ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ,

೨. ಅದೇ, : ಲೇಖನ ಹಸ್ತಪ್ರತಿಗಳೂ : ಮೆಕೆಂಜಿ ಸಂಗ್ರಹ. ಎಂ.ಜಿ.ಹೆಗ್ಡೆ

ಅಧ್ಯಾಯ – ೬

ಸಮಾರೋಪ

ಒಟ್ಟಾರೆ ಈ ಸಂಪ್ರಬಂಧದ ಆದಿ–ಅಂತ್ಯದವರೆಗೆ ಚರ್ಚಿಸಲ್ಪಟ್ಟ ವಿಷಯ ವಿಚಾರಗಳನ್ನು ಒಮ್ಮೆ ಅವಲೋಕನ ಮಾಡಿದರೆ, ಅಲ್ಲಮಪ್ರಭುದೇವರ ಮಾತು "ಹಿಂದಣ ಹೆಜ್ಜೆಯನ್ನರಿತಲ್ಲದೆ ಮುಂದಣ ಹೆಜ್ಜೆಯನರಿಯಬಾರದು....." ಎಂಬಂತೆ ಕನ್ನಡ ಹಸ್ತಪ್ರತಿಶಾಸ್ತ್ರದ ಅಧ್ಯಯನ ಮತ್ತು ಹಸ್ತಪ್ರತಿಗಳ ಅಧ್ಯಯನದ ಅಗತ್ಯತೆ ನಮಗೆ ತಿಳಿದುಬರುತ್ತದೆ.

ಭಾರತಕ್ಕೆ ಮುದ್ರಣ ಯಂತ್ರ ಪ್ರವೇಶವಾದಾಗಲೇ ಗ್ರಂಥಸಂಪಾದನಾಶಾಸ್ತ್ರ ಎಂಬ ಒಂದು ಅಧ್ಯಯನ ಶಿಸ್ತು ಪ್ರಾರಂಭವಾಗಿದೆ. ಇದರೊಟ್ಟಿಗೆ 'ಹಸ್ತಪ್ರತಿಶಾಸ್ತ್ರವೂ ಉದಯವಾಗಿದೆ ಎಂದು ಹೇಳಬಹುದು. ಏಕೆಂದರೆ ಯಾವುದೇ ಕಾವ್ಯ, ಶಾಸ್ತ್ರ, ಗ್ರಂಥಗಳನ್ನು ಓಲೆಗರಿಗಳಿಂದ ಮುದ್ರಣಕ್ಕೆ ಒಳಪಡಿಸುವ ಹಂತದಲ್ಲಿ ಗ್ರಂಥಸಂಪಾದನೆ ಶಿಸ್ತುಬದ್ಧ ರೂಪುರೇಷೆಗಳು ಅಗತ್ಯವಾಗಿರುತ್ತವೆ. ಅದಕ್ಕಾಗಿಯೇ ಗ್ರಂಥಸಂಪಾದನೆಯನ್ನು ಕುರಿತಂತಹ ಅಧ್ಯಯನ ಕೃತಿಗಳೇ ನಮ್ಮಲ್ಲಿ ಕಂಡುಬಂದಿವೆ. ಉದಾಹರಣೆಗೆ : ಎಂ.ಎಸ್.ಕತ್ರೆ ಅವರ ಗ್ರಂಥಸಂಪಾದನಾಶಾಸ್ತ್ರ ಭಾರತದ ಮಟ್ಟದಲ್ಲಿ ಕಾಣುತ್ತೇವೆ. ಹಾಗೆಯೇ ನಮ್ಮ ಕನ್ನಡದಲ್ಲಿ ಡಿ.ಎಲ್.ನರಸಿಂಹಾಚಾರ್ ಅವರ 'ಕನ್ನಡ ಗ್ರಂಥಸಂಪಾದನಾಶಾಸ್ತ್ರ' ಎಂಬ ಕೃತಿಯು ಅವತರಿಸಿದೆ. ಆದ್ದರಿಂದ ಈ ಗ್ರಂಥಸಂಪಾದನಾಶಾಸ್ತ್ರ ಪೂರಕವಾಗಿಯೇ ಅಥವಾ ಆಧಾರವಾಗಿಯೋ ಹಸ್ತಪ್ರತಿಶಾಸ್ತ್ರವೆಂಬ ಅಧ್ಯಯನಶಿಸ್ತು ಹುಟ್ಟಿಕೊಂಡಿರುವುದು ಈಗಾಗಲೇ ನಮಗೆ ತಿಳಿದಿರುವ ಸಂಗತಿಯೇ ಸರಿ.

ನಮ್ಮ ದೇಶದಾದ್ಯಂತ ಅನೇಕ ಹಸ್ತಪ್ರತಿ ಭಂಡಾರಗಳಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಹಸ್ತಪ್ರತಿಭಂಡಾರಗಳಲ್ಲಿ ಹಲವಾರು ವಿಷಯಗಳನ್ನೊಳಗೊಂಡ ಹಸ್ತಪ್ರತಿಗಳಿವೆ. ಕಾವ್ಯ, ಶಾಸ್ತ್ರ, ಜ್ಯೋತಿಷ್ಯ, ಪಂಚಾಂಗ, ವೈದ್ಯಶಾಸ್ತ್ರ, ಖಗೋಳವಿಜ್ಞಾನ, ಗಣಿತಶಾಸ್ತ್ರದಂತಹ ಹಲವು ಹಸ್ತಪ್ರತಿಗಳಿವೆ. ಆದರೆ ಇವುಗಳಲ್ಲಿ ವಿದ್ವಾಂಸರ ಗಮನ ಹೆಚ್ಚು ಕಾವ್ಯಗಳನ್ನು ಸಂಪಾದಿಸುವುದರ ಕಡೆಗೆ ಇತ್ತು. ಬೇರೆ ವಿಷಯಗಳ ಬಗ್ಗೆ ಅಷ್ಟಕ್ಕಷ್ಟೇ ಎಂದು ಹೇಳಬಹುದು. ಈ ಹಸ್ತಪ್ರತಿಗಳಲ್ಲಿ ದಾಖಲೆ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಈ ಸಂಪ್ರಬಂಧದಲ್ಲಿ ಈಗಾಗಲೇ ಚರ್ಚಿಸಲಾಗಿದೆ. ವಿಶೇಷವಾಗಿ ದಾಖಲೆಸಾಹಿತ್ಯದಲ್ಲಿ ಪತ್ರಸಾಹಿತ್ಯವನ್ನೇ ಪ್ರತ್ಯೇಕವಾಗಿ ಕುರಿತ ಅಧ್ಯಯನ ಈವರೆಗೂ ನಡೆದುಬಂದಿಲ್ಲವೆಂದೇ ಭಾವಿಸಬಹುದು. ಅದರಲ್ಲೂ ಕನ್ನಡ ಹಸ್ತಪ್ರತಿಗಳಲ್ಲಿ ಪತ್ರಸಾಹಿತ್ಯಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳು ಹೇರಳವಾಗಿ ಕಂಡುಬರುವುದುಂಟು. ಇಂತಹ ಕನ್ನಡ ಹಸ್ತಪ್ರತಿಗಳಲ್ಲಿ

ಕಂಡುಬರುವ ಪತ್ರಗಳನ್ನು ಪ್ರತ್ಯೇಕಗೊಳಿಸಿ ಅಧ್ಯಯನ ಮಾಡುವುದು ಇದೇ ಮೊದಲ ಪ್ರಯತ್ನ. ಕಾವ್ಯ, ಶಾಸ್ತ್ರ ಮುಂತಾದವುಗಳನ್ನು ಸಂಪಾದಿಸಿ ಗ್ರಂಥಸಂಪಾದನೆ ಕ್ಷೇತ್ರಗೊಳಪಡಿಸಿಕೊಂಡಂತೆ, ಮಧ್ಯಕಾಲೀನ ಭಾರತದಿಂದ – ಆಧುನಿಕ ಭಾರತದ ಇತಿಹಾಸದವರೆಗೆ ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕಂಡುಬರುವ ಪತ್ರವ್ಯವಹಾರಗಳನ್ನು ಪ್ರತ್ಯೇಕವಾಗಿ ನೋಡಿದರೆ ಬಹು ಹಿಂದಿನಿಂದ ಅನೇಕ ಗಣ್ಯ ರಾಜಕೀಯ ಮತ್ತು ಗಣ್ಯ ಸಾಹಿತಿಗಳ ಪತ್ರವ್ಯವಹಾರಗಳನ್ನು ಒಂದೆಡೆ ಕ್ರೋಢೀಕರಿಸಿದರೆ ಒಂದು ಪ್ರತ್ಯೇಕ ಸಾಂಸ್ಕೃತಿಕ ಲೋಕವೇ ಬಿಚ್ಚಿಕೊಳ್ಳುತ್ತದೆ.

ಉದಾಹರಣೆಗೆ : ನಾವು ಇದುವರೆವಿಗೂ ಅಧ್ಯಯನ ಮಾಡಿದ ಸನ್ನದುಗಳಾಗಲಿ, ನಿರೂಪಗಳಾಗಲಿ, ಕಡತಗಳಾಗಲಿ ಒಂದು ವಿಶಿಷ್ಟ ಬಗೆಯ ಸಾಂಸ್ಕೃತಿಕ ಇತಿಹಾಸವನ್ನು ನಮಗೆ ತಿಳಿಸುತ್ತವೆ. ಅದರಲ್ಲಿಯೂ ಆಧುನಿಕ ಸಾಹಿತ್ಯದಲ್ಲಿ ಅನೇಕ ಗಣ್ಯ ಸಾಹಿತಿಗಳ ಪತ್ರ ವ್ಯವಹಾರಗಳ ಕಡೆಗೆ ಹೆಚ್ಚು ಗಮನಹರಿಸಿ ಸಾಹಿತಿ–ವಿದ್ವಾಂಸರ ಹಸ್ತಪ್ರತಿ ಪತ್ರಗಳನ್ನು ಪ್ರತ್ಯೇಕಗೊಳಿಸಿದ್ದೇ ಆದರೆ ಕನ್ನಡದಲ್ಲಿ ಇದುವರೆವಿಗೂ ಮಾಡದೇ ಇರುವ ಒಂದು ಉತ್ತಮ ಕೆಲಸವಾದೀತು. ಆದರೆ ಈ ಸಂಪ್ರಬಂಧದಲ್ಲಿ ಸಾಹಿತಿಗಳ ಹಸ್ತಪ್ರತಿ ಪತ್ರಗಳ ಕಡೆಗೆ ಗಮನ ಹರಿಸದೇ ಐತಿಹಾಸಿಕ ದಾಖಲೆ ಪತ್ರಗಳನ್ನು ಕುರಿತು ಮಾತ್ರ ಅಧ್ಯಯನ ಮಾಡಲಾಗಿದೆ. ಈ ಐತಿಹಾಸಿಕ ಹಸ್ತಪ್ರತಿ ಪತ್ರಗಳ ಚರ್ಚೆಯೂ ಕೂಡ ಪ್ರತ್ಯೇಕವಾಗಿ ಒಂದು ಕಡೆ ಅಧ್ಯಯನ ಮಾಡಿರುವ ಪ್ರಯತ್ನ ಇದೆ ಮೊದಲು ಎಂಬುದರಲ್ಲಿ ಸಂದೇಹವಿಲ್ಲ. ಇನ್ನು ಮುಂದೆ ನಾಡಿನಾದ್ಯಂತ ಸಂಚರಿಸಿ ಅದು ಇತಿಹಾಸಕ್ಕೆ ಸಂಬಂಧಿಸಿದ್ದಾಗಲೀ ಅಂದರೆ ದಾಖಲೆ ಸಾಹಿತ್ಯವಾಗಿರಲಿ ಅಥವಾ ಸಾಹಿತಿ–ವಿದ್ವಾಂಸರ, ರಾಜಕೀಯ ಗಣ್ಯರ ಹಸ್ತಪ್ರತಿಗಳಾಗಲಿ ಪ್ರತ್ಯೇಕವಾಗಿ ಅಧ್ಯಯನ ಮಾಡಿದ್ದೇ ಆದರೆ ಇದೊಂದು ಬಗೆಯ ವಿಶಿಷ್ಟ ಸಾಹಿತ್ಯ ಪ್ರಕಾರವೇ ಕನ್ನಡದಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ ಉತ್ತಮ ಅಧ್ಯಯನ ಶಿಸ್ತಾಗಿ ಕರೆಯಿಸಿಕೊಳ್ಳುತ್ತದೆ. ಅಂತಹ ಮೊದಲ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಮಾಡಲಾಗಿದೆ.

ಗ್ರಂಥ ಋಣ

೧. ಕನ್ನಡದಲ್ಲಿ ಕಡತಗಳು — ಡಾ.ಎ.ಕೆ.ಶಾಸ್ತ್ರೀ
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು, ೧೯೯೭

೨. ಕನ್ನಡ ಹಸ್ತಪ್ರತಿಶಾಸ್ತ್ರ — ಡಾ.ಎಂ.ಎಂ.ಕಲಬುರ್ಗಿ
ಸ್ನೇಹ ಪ್ರಕಾಶನ
ಬೆಂಗಳೂರು. ೧೯೯೩

೩. ಹಸ್ತಪ್ರತಿ ಅಧ್ಯಯನಶಾಸ್ತ್ರ — ಡಾ.ನಾ.ಗೀತಾಚಾರ್ಯ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು. ೨೦೦೯

೪. ಹಸ್ತಪ್ರತಿಶಾಸ್ತ್ರ ಪರಿಚಯ — ಬಿ.ಎಸ್.ಸಣ್ಣಯ್ಯ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು. ೧೯೯೨

೫. ಕನ್ನಡ ಗ್ರಂಥಸಂಪಾದನೆ — ಡಾ.ಡಿ.ಎಲ್.ನರಸಿಂಹಾಚಾರ್
ಡಿ.ವಿ.ಕೆ.ಮೂರ್ತಿ
ಮೈಸೂರು
ತೃತೀಯ ಮುದ್ರಣ, ೨೦೦೫

೬. ಭಾಷೆಯ ಬೆಳಕು — ಡಾ.ಕೆ.ಎಲ್.ಗೋಪಾಲಕೃಷ್ಣಯ್ಯ
ನವಕರ್ನಾಟಕ ಪ್ರಕಾಶನ,
ಬೆಂಗಳೂರು, ೨೦೦೬

೭. ಬೆಂಗಳೂರಿನ ಬಖೈರುಗಳು — ಡಾ.ಎಂ.ಜಿ.ಮಂಜುನಾಥ್
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

೮. ಕರ್ನಾಟಕದ ಕೈಫಿಯತ್ತುಗಳು — ಡಾ.ಎಂ.ಎಂ.ಕಲಬುರ್ಗಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ

೯. ಇತಿಹಾಸ ದರ್ಶನ	ಸಮ್ಮೇಳನದ ಸಂಪುಟಗಳು ೧ರಿಂದ ೨೩ ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು
೧೦. ಮಣಿಹ	ಸಂ.ಪ್ರೊ.ಎಂ.ವಿ.ಸೀತಾರಾಮಯ್ಯ ಮತ್ತು ಡಾ.ಆರ್.ಶೇಷಶಾಸ್ತ್ರೀ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಬೆಂಗಳೂರು. ೧೯೮೨
೧೧. ಕನ್ನಡ ವಿಶ್ವಕೋಶ	೧೦ನೇ ಸಂಪುಟ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು
೧೨. ಕನ್ನಡ ನಿಘಂಟು	೫ ಮತ್ತು ೮ ಸಂಪುಟಗಳು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
೧೩. ಕನ್ನಡ ದಾಖಲು ಸಾಹಿತ್ಯ	ಡಾ.ಕೆ.ರವೀಂದ್ರನಾಥ್ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ